ಸಾಕೃರಾ

ಪ್ರೊ. ಸಾ.ಕೃ.ರಾ. - ಸಮಗ್ರ ಸಾಹಿತ್ಯ - ೩೫

# ಅವಧೂತ



ವಿದ್ಯಾಲಂಕಾರ

ಪ್ರೊ॥ ಸಾ. ಕೃ. ರಾಮಚಂದ್ರ ರಾವ್

# ಅವಧೂತ

ವಿದ್ಯಾಲಂಕಾರ
ಪ್ರೊ. ಸಾ. ಕೃ. ರಾಮಚಂದ್ರರಾವ್

'Avadhuta' a book in Kannada by *Vidyālankāra* **Prof. S. K. Ramachandra Rao,** Published by Dr. S. R. Sudarshan, for 'Surama Prakashana' the publication wing of the Prof. S. K. Ramachandra Rao Memorial Trust (R), 305, 6th Cross, I Block, Jayanagar, Bengaluru - 560 011. Phone : 080-26563957
e-mail : drsrsudarshan@gmail.com
Website : www.profskr.com

© Prof. S. K. Ramachandra Rao Memorial Trust (R)

First Edition : 2002
Second Edition : 2016

ISBN : 978-93-84069-17-9

Printed at : Vagartha, Bangalore-19. vagarthapress@mail.com

# ಅನುಕ್ರಮಣಿಕಾ


| | | |
|---|---|---|
| | ಲೇಖಕರ ಪರಿಚಯ | v |
| | ಪ್ರಕಾಶಕರ ಮಾತು | vii |
| | ಮೊದಲ ಮಾತು | ix |
| 1. | ಅವತರಣಿಕೆ | ೧ |
| 2. | ಅವಧೂತೋಪನಿಷತ್ತು | ೧೪ |
| 3. | ಮಹೋಪನಿಷತ್ತಿನಲ್ಲಿ ಅವಧೂತ ಚರ್ಯೆ | ೬೭ |

# ಲೇಖಕರ ಪರಿಚಯ



ಪ್ರೊ. ಸಾ. ಕೃ. ರಾಮಚಂದ್ರರಾಯರು (೧೯೨೫-೨೦೦೬) ಈ ತಲೆಮಾರಿನ ವಿಖ್ಯಾತ ವಿದ್ವಾಂಸರು, ಚಿಂತಕರು, ಸಂಗೀತಜ್ಞರು, ಕಲಾಕಾರರು, ಪ್ರಬಂಧಕಾರರು, ಉತ್ತಮ ವಾಗ್ಮಿಗಳಾಗಿದ್ದರು.

ಅವರು ಬಾಲ್ಯ ವಿದ್ಯಾಭ್ಯಾಸವನ್ನು ಅವರ ತೀರ್ಥರೂಪರವರಿಂದಲೇ ಪಡೆದು, ನಂಜನಗೂಡಿನ ಪಾಠಶಾಲೆಯಲ್ಲಿ ಸಂಸ್ಕೃತಾಧ್ಯಯನ ಮಾಡಿ, ಮೈಸೂರಿನಲ್ಲಿ ಮಹಾವಿದ್ವಾನ್ ಪಾಲಕ್ಕಾಡು ನಾರಾಯಣ ಶಾಸ್ತ್ರಿಗಳಲ್ಲಿ ಸಭಾಷ್ಯ ಪ್ರಸ್ಥಾನತ್ರಯಗಳನ್ನು ಅಭ್ಯಾಸ ಮಾಡಿದ್ದರು. ಅನಂತರ

ಮನಃಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಗಳಿಸಿ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ವೃತ್ತಿ ಪ್ರಾರಂಭಿಸಿದ್ದರು. ಅನಂತರ NIMHANSನಲ್ಲಿ ಮನಃಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ಹಲವು ಕಾಲ ಇದ್ದರು.

ಅವರು ಭಾರತೀಯ ಇತಿಹಾಸ, ಸಾಹಿತ್ಯ, ಸಂಸ್ಕೃತಿ, ಸಂಗೀತ ಮತ್ತು ಕಲೆಗಳ ಅಧ್ಯಯನ ಮಾಡಿ ಸಂಹಳದ ನಾರದ ಮಹಾಥೇರರ ಬಳಿ ಪಾಳಿ ಮತ್ತು ತ್ರಿಪಿಟಕಗಳನ್ನು, ವಿಜಯಸೂರಿ ಗಣಿಯವರಲ್ಲಿ ಅರ್ಧಮಾಗಧೀ ಪ್ರಾಕೃತವನ್ನೂ ಮತ್ತು ಸ್ವಪರಿಶ್ರಮದಿಂದ ಟಿಬೆಟ್ ಭಾಷೆಯನ್ನು ಕಲಿತರು. ರಾಯರು ಕೆಲಕಾಲ ಅಮೆರಿಕೆಯ ಪೆಸಿಫಿಕ್ ವಿಶ್ವವಿದ್ಯಾಲಯದ ಭಾರತೀಯ ಸಂಸ್ಕೃತಿ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದರು.

ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಪಡೆದು, ಅನೇಕ ಅಕ್ಯಾಡೆಮಿ ಮತ್ತು ವಿದ್ವತ್ ಸಂಸ್ಥೆಗಳ, ಆಗಮ ಮಹಾಮಂಡಳಿ ಮತ್ತು ಇತರ ಸಂಸ್ಥೆಗಳ ಪದಾಧಿಕಾರಿಗಳಾಗಿದ್ದರು.

ರಾಯರು ಕನ್ನಡ ಮತ್ತು ಆಂಗ್ಲಭಾಷೆಗಳಲ್ಲಿ ನೂರೈವತ್ತಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದರು. ಅವರ 'ಮೂರ್ತಿಶಿಲ್ಪ-ನೆಲೆ-ಹಿನ್ನೆಲೆ' ಮತ್ತು 'ತಿರುಪತಿ ತಿಮ್ಮಪ್ಪ' ಎಂಬ ಪುಸ್ತಕಗಳು ರಾಜ್ಯಸಾಹಿತ್ಯ ಅಕ್ಯಾಡಮಿ ಪ್ರಶಸ್ತಿ ಪಡೆದವು.

ವಿದ್ಯಾಲಂಕಾರ, ಶಾಸ್ತ್ರ ಚೂಡಾಮಣಿ, ಸಂಗೀತ ಕಲಾರತ್ನ, ವಾಚಸ್ಪತಿ ಮೊದಲಾದ ಬಿರುದುಗಳಿಗೆ ಭಾಜಿಯಾಗಿದ್ದರು. ವೇದ ಸಮ್ಮಾನ ಪ್ರಶಸ್ತಿಗೂ ಪಾತ್ರರಾಗಿದ್ದರು. ಅವರು ಸಾಂಪ್ರಾದಾಯಿಕ ವ್ಯಾಖ್ಯಾನರೀತ್ಯಾ ಋಗ್ವೇದ ದರ್ಶನವೆಂಬ ಬೃಹತ್ ಯೋಜನೆ ಯೊಂದನ್ನು ಕೈಗೊಂಡು, ಹದಿನೇಳು ಸಂಪುಟಗಳನ್ನು ರಚಿಸಿದ್ದರು.

# ಪ್ರಕಾಶಕರ ಮಾತು

ಈ ಪುಸ್ತಕವನ್ನು ಮೊದಲು ಪ್ರಕಟಣೆ ಮಾಡಿದ್ದು ಶ್ರೀ ಸತ್ಯನಾರಾಯಣ ಜೋಷಿಯವರು, ೨೦೦೨ ರಲ್ಲಿ. ಈ 'ಅಮೂಲ್ಯ'ವಾದ ಪುಸ್ತಕವನ್ನು ಅವರು ಆಸಕ್ತರಿಗೆ ಉಚಿತವಾಗಿ ವಿತರಣೆ ಮಾಡುತ್ತಿದ್ದರು. ಹಲವಾರು ವರ್ಷಗಳಿಂದ ಈ ಗ್ರಂಥ ಉಪಲಬ್ಧವಿಲ್ಲದಿರುವುದರಿಂದ ಮತ್ತು ಇದಕ್ಕೆ ಬೇಡಿಕೆ ಇರುವುದರಿಂದ ನಾವು ಇದನ್ನು ಹೊರ ತರುತ್ತಿದ್ದೇವೆ.

ಪುಸ್ತಕದ ಕರಡನ್ನು ಪರಿಶೀಲಿಸಿದ ನನ್ನ ತಂದೆಯವರ ಶಿಷ್ಯರು ಮತ್ತು ನಮ್ಮ ಆತ್ಮೀಯ ಸ್ನೇಹಿತರಾದ ಶ್ರೀ ನ. ಶಂಕರ್ ಅವರಿಗೆ ನಾವು ಆಭಾರಿಯಾಗಿದ್ದೇವೆ. ಉತ್ತಮವಾಗಿ ಮುದ್ರಿಸಿದ 'ವಾಗರ್ಥ' ಅವರಿಗೆ ನಮ್ಮ ಧನ್ಯವಾದಗಳು.

ಸಾ.ರಾ. ಸುದರ್ಶನ್
ಪ್ರೊ. ಸಾ.ಕೃ.ರಾ. ಸ್ಮಾರಕ ನಿಧಿ

# ಮೊದಲ ಮಾತು

ಅವಧೂತರನ್ನು ಕುರಿತಂತೆ ನನ್ನ ಕುತೂಹಲ ಮೂಡಿಕೊಂಡದ್ದು ಸಹಜವಾಗಿಯೆ. ಎಳೆತನದಲ್ಲೇ ಶಾರದಾಪೀಠದ ಮಾಣಿಕ್ಯವೆನಿಸಿದ ಶ್ರೀ ಶ್ರೀ ಚಂದ್ರಶೇಖರಭಾರತೀಸ್ವಾಮಿಗಳ ಪ್ರಭಾವಮಂಡಲದೊಳಗೆ ಸೇರಿಕೊಂಡದ್ದೇ ಮೊದಲಾಯಿತು. ಅವರು ಮುಖ್ಯವಾಗಿ ಅವಧೂತರು, ದತ್ತಾತ್ರೇಯನ ಉಪಾಸಕರು, ಇನ್ನೊಬ್ಬ ಅವಧೂತ ಸದಾಶಿವ ಬ್ರಹ್ಮೇಂದ್ರರಿಂದ ಪ್ರಭಾವಿತರಾದವರು. ಮುಂದೆ ನನ್ನ ಮೇಲೆ ಪ್ರಭಾವ ವನ್ನು ಬೀರಿದ ಶ್ರೀರಾಮಕೃಷ್ಣ ಪರಮಹಂಸರೂ ಅವಧೂತರೇ. ಮಧ್ಯಯುಗದಲ್ಲಿ ಆಗಿಹೋದ ಅನೇಕ ಅವಧೂತರ ಚರ್ಯಾ ಗೀತೆಗಳೂ, ಜೀವಿತ ವೃತ್ತಾಂತಗಳೂ ನನಗೆ ಅಧ್ಯಾತ್ಮಸಾಧನೆಯಲ್ಲಿ ದಾರಿದೀಪಗಳಾದುವು. ಟಿಬೆಟ್ಟಿನ ಯೋಗಿ ಮಿಲರೇಪನ ಬದುಕಿನಿಂದ, ಹಾಡುಗಳಿಂದ ಮಾತುಕತೆಗಳಿಂದ ನನ್ನ ಮನಸ್ಸು ವಿಕಸಿತವಾಯಿತು; ಅವನು ಅವಧೂತರದಲ್ಲಿ ಅಗ್ರಗಣ್ಯನಾಗಿದ್ದವನು. ಮುಂದಿನ ದಿನಗಳಲ್ಲಿ ಹುಬ್ಬಳ್ಳಿಯ ಸಿದ್ಧಾರೂಢರು, ವಜ್ರೇಶ್ವರಿಯ ನಿತ್ಯಾನಂದರು, ವಾಸುದೇವಾನಂದ ಸರಸ್ವತಿಗಳು (ಟೇಂಬೆ ಮಹಾರಾಜರು), ಶಿರಡಿಯ ಸಾಯಿಬಾಬಾ, ರಮಣಮಹರ್ಷಿಗಳು, ಶಿಶುನಾಳ ಶರೀಫರು, ಕನ್ನೂರಿನ ಗಣಪತರಾವ್ ಮಹಾರಾಜರು, ರಜನೀಶರು (ಓಶೋ) ಮೊದಲಾದ ಅವಧೂತರ ಬರಹಗಳು, ಉಪದೇಶಗಳು ನನ್ನ ಅಂತರಂಗದಲ್ಲಿ ನೆಲೆಸಿದುವು. ತಮಿಳು ಸಿದ್ಧರ ಹಾಡುಗಳಂತೂ ನನಗೆ ತುಂಬ ಪ್ರಿಯವಾದುವು. ನನ್ನ ಮನೆತನದ ಹಿರಿಯರಾಗಿದ್ದ ಅಂಬೇಕರ ಬಾಳಾಚಾರ್ಯರ ಗುರುಗಳು ವಿಷ್ಣುತೀರ್ಥರು (ಅಡವೀಸ್ವಾಮಿಗಳು,

ಮಾದನೂರಿನಲ್ಲಿ ದೇಹವಿಟ್ಟವರು) ಅವಧೂತರು; ಅವರ 'ಭಾಗವತ ಸಾರೋಧ್ಧಾರ'ದ ಪಾರಾಯಣ ನಮ್ಮ ಮನೆಯಲ್ಲಿ ನಡೆಯುತ್ತಲೇ ಇದ್ದಿತು. ಇವೆಲ್ಲ ಕಾರಣಗಳೂ ಕೂಡಿಕೊಂಡು ಅವಧೂತರೆಂದರೆ ನನ್ನಲ್ಲಿ ವಿಶೇಷವಾದ ಆದರ ಒಡಮೂಡಿತು.

ಹಲವು ಯೋಗ ಪದ್ಧತಿಗಳಲ್ಲಿ, ತಂತ್ರ-ಸಾಧನಾಗ್ರಂಥಗಳಲ್ಲಿ ಅವಧೂತಸಂಪ್ರದಾಯದ ಒಕ್ಕಣೆಗಳು ಧಾರಾಳವಾಗಿ ಸೇರಿಕೊಂಡು ಬಂದಿವೆ. ಅರ್ವಾಚೀನ ಉಪನಿಷತ್ತುಗಳಲ್ಲಿ ಅವಧೂತೋಪನಿಷತ್ತೆಂದೇ ಒಂದಿದೆ. ತ್ರಿಪುರಾರಹಸ್ಯದಲ್ಲಿ ಅವಧೂತರನ್ನು ಕುರಿತ ಉಲ್ಲೇಖ ಮೊದಲಲ್ಲೇ ಬರುತ್ತದೆ. ನಮ್ಮ ಚತುರಶೀತಿ (ಎಂಭತ್ತು ನಾಲ್ಕು) ಸಿದ್ಧರ ಎಣಿಕೆಯಲ್ಲಿ ಬಹುಮಂದಿ ಅವಧೂತರೇ. ನವನಾಥ ಸಿದ್ಧರೆಲ್ಲ ಅವಧೂತರೇ. ಅವರಲ್ಲಿ ಒಬ್ಬ ಚರಪಟಿ(ಚರ್ಪಟಿ)ನಾಥ ಮತ್ಸ್ಯೇಂದ್ರ ನಾಥನ ತರುವಾಯ ಪ್ರಸಿದ್ಧನಾದವನು. ಅವನ 'ಚರ್ಪಟಿ ಪಂಜರಿಕೆ'ಯ ಕೆಲವು ಶ್ಲೋಕಗಳೇ ಈಗ ಶಂಕರಾಚಾರ್ಯರದ್ದೆಂದು ಪ್ರಸಿದ್ಧವಾಗಿರುವ 'ಭಜಗೋವಿಂದ ಸ್ತೋತ್ರ'ವಾಗಿ ಕಾಣಿಸಿಕೊಂಡಿವೆ. ಇದರಲ್ಲಿರುವುದು ಮುಖ್ಯವಾಗಿ ಅವದೂತರ ಪ್ರಮೇಯಗಳೇ. ನಿದರ್ಶನಕ್ಕೆ, ಎಲ್ಲರಿಗೂ ತಿಳಿದಿರುವ

**ಯೋಗರತೋ ವಾ ಭೋಗರತೋ ವಾ**
**ಸಂಗರತೋ ವಾ ಸಂಗವಿಹೀನಃ ।**
**ಯಸ್ಯ ಬ್ರಹ್ಮಣಿ ರಮತೇ ಚಿತ್ತಂ**
**ನಂದತಿ ನಂದತಿ ನಂದತ್ಯೇವ ॥**

ಈ ಶ್ಲೋಕದಲ್ಲಿರುವ ಒಕ್ಕಣೆ ಯಾವ ವೇದಾಂತದ ಉಪದೇಶವೂ ಆಗಲಾರದು. ಅದು ಅವಧೂತರದ್ದೇ ನಿಲುವು. ಅವರಿಗೆ

ಯೋಗ-ಭೋಗಗಳೆರಡೂ ಸಮನೇ. ಶ್ರೀರಾಮಕೃಷ್ಣ ಪರಮಹಂಸರು ಸಂನ್ಯಾಸಿಗಳಾದರೂ ಗೃಹಸ್ಥರಾಗಿಯೇ ಉಳಿದವರು.

ಇವೆಲ್ಲ ಬರಹಗಳನ್ನು ಪರಿಶೀಲಿಸಿದಾಗ ಅವಧೂತಪಂಥದ ಒಳಗು-ಹೊರಗು ಅಷ್ಟಿಷ್ಟು ತಿಳಿದುಬರುತ್ತದೆ. ಆದರೆ ಇಷ್ಟರಿಂದ ಅವಧೂತರನ್ನು ಅರ್ಥಮಾಡಿಕೊಂಡೆವು ಎನ್ನಲಾಗದು. ಅವಧೂತರ ಆಂತರ್ಯವನ್ನು ಅರಿತುಕೊಳ್ಳುವುದು ನಮಗೆ ಆಗದ ಮಾತು. ಆದರೂ ಇಂಥ ವಿವರಗಳಿಂದ ಅವಧೂತರನ್ನು ಕುರಿತಂತೆ ಇರುವ ಕುತೂಹಲ ಕೊಂಚಮಟ್ಟಿಗಾದರೂ ತಣಿದೀತು ಎಂಬ ಉದ್ದೇಶದಿಂದ ನನ್ನೀ ಪ್ರಯತ್ನ.

ಅವಧೂತರು ಸಹಜವಾಗಿಯೇ ಪ್ರಸಿದ್ಧಿಯನ್ನು ಬಯಸುವ-ವರಲ್ಲ. ನಮ್ಮ ನಡುವೆಯೇ ಹಲವರು ಅವಧೂತರಿರುತ್ತಾರೆ; ಆದರೆ ನಾವು ಅವರನ್ನು ಗುರುತಿಸಲಾರೆವು. ಅವರ ಲಕ್ಷಣಗಳೇನೆಂಬುದು ನಮಗೆ ತಿಳಿಯದು. ಅವರೊಂದಿಗೆ ಒಡನಾಡಿದವರಲ್ಲಿ ಕೆಲವರಿಗೆ ಅವರ ಹಿರಿಮೆ ತಿಳಿದುಬರುತ್ತದೆ; ಅವರಿಂದ ಇತರರಿಗೆ ತಿಳಿಯುತ್ತದೆ. ಅವಧೂತರು ಗ್ರಾಮೀಣಪ್ರದೇಶಗಳಲ್ಲೇ ಹೆಚ್ಚಾಗಿ ಇರುವುದು. ಆಯಾ ಪ್ರದೇಶಗಳಲ್ಲಷ್ಟೇ ಅವರ ಪರಿಚಯ. ಹಾಗೆ ಇಂಥ ಒಬ್ಬರು ಈ ಕಾಲದ ಅವಧೂತರಿಂದ ಪ್ರಭಾವಿತರಾದ ನನ್ನ ಕೆಲವು ಮಿತ್ರರು ಇವರ ಚರ್ಯೆ, ಲಕ್ಷಣ, ಉಪದೇಶಗಳನ್ನು ಕುರಿತು ನನ್ನೊಂದಿಗೆ ಮಾತನಾಡುತ್ತ, ತಮ್ಮ ಕುತೂಹಲವನ್ನು ಕಾಣಿಸಿ, ಅವಧೂತರ ಬಗ್ಗೆ ನನ್ನನ್ನು ಪ್ರಶ್ನಿಸುತ್ತಿದ್ದರು. ಅವಧೂತರನ್ನು ಕುರಿತು ಸಾಮಾನ್ಯವಾದ ವಿವರಗಳನ್ನೊಳಗೊಂಡ ಬರಹವನ್ನು ನನ್ನಿಂದ ಬಯಸಿದರು. ಆ ಹಿನ್ನೆಲೆಯಲ್ಲಿ ಈ ಬರಹ.

ಅವಧೂತರು ಸಾಮಾನ್ಯವಾಗಿ ಉತ್ತಮಗುರುಗಳೆಂದು ನನ್ನ ಎಣಿಕೆ. ಪಂಡಿತರಾದ, ಪ್ರತಿಭಾವಂತರಾದ, ಪ್ರಭಾವಶಾಲೀ ಪ್ರವಚನಗಳನ್ನು ನೀಡುವ ಗುರುಗಳಿರುತ್ತಾರೆ. ಆದರೆ ಆತ್ಮ ತತ್ತ್ವವನ್ನು ಉಪದೇಶಿಸುವಾಗ ಅದರ ಅನುಭವವಿರದಿದ್ದರೆ ಅವರಿಂದ ನಮಗೆ ಪ್ರಯೋಜನವೇನು ? ಈ ಕಿವಿಯಿಂದ ಕೇಳಿ ಆ ಕಿವಿಯಿಂದ ಬಿಡುವ ಮಾತಾಗುತ್ತದೆ. ವೇದಾಂತಶ್ರವಣಕ್ಕೆ ಇಂಥ ಗುರುಗಳನ್ನಾಶ್ರಯಿಸಿ ಫಲವಿಲ್ಲ. ದಿಟವಾದ ಗುರುವೆಂದರೆ ತತ್ತ್ವದ ಅನುಭವವಿದ್ದವನು, ಬೇರೆಯವರಿಗೆ ಅನುಭವವನ್ನು ಒದಗಿಸಿಕೊಡಬಲ್ಲವನು. ಎಷ್ಟೋ ಬಾರಿ, ಅವನು ಪ್ರವಚನಗಳನ್ನು ನೀಡುವುದೇ ಇಲ್ಲ ; ಚುಟುಕು ಮಾತುಗಳಿಂದಲೇ ತತ್ತ್ವಾನುಭವವನ್ನು ಮೆರೆಸಿಬಿಡುತ್ತಾನೆ. ಅವಧೂತರು ಪರತತ್ತ್ವದ ಅನುಭವವಿದ್ದವರು. ಅವರ ವಿಲಕ್ಷಣ ಚರ್ಯೆಯ ಗೋಡೆಯನ್ನು ದಾಟಿಕೊಂಡು ಬರುವ ಅಧ್ಯಾತ್ಮರಸಿಕರಿಗೆ ಅವಧೂತರಿಂದ ಉಪದೇಶ, ಮಾರ್ಗದರ್ಶನಗಳು ದೊರೆಯುವ ಸಂಭವವಿದೆ. ಮಾತೇ ಬೇಕಾಗಿರದೆ, ಬರಿಯ ನೋಟದಿಂದಲೋ, ಮುಗುಳುನಗೆಯಿಂದಲೋ, ವಾಡಿಕೆಯ ನಡೆಯಿಂದಲೋ ಉಪದೇಶ ನಡೆದುಹೋಗುತ್ತದೆ!

ಇಂಥ ಅವಧೂತ-ಗುರುಗಳನ್ನು ಕಂಡುಕೊಂಡವರು ಧನ್ಯರು. ಆದರೆ ಈ ಧನ್ಯತೆಯ ಅರಿವು ಹಲವರಿಗಿರುವುದಿಲ್ಲ. ತಮ್ಮ ಪ್ರಾಪಂಚಿಕ ಲಾಭ, ನೆಮ್ಮದಿ, ಅಭ್ಯುದಯಗಳಿಗಾಗಿಯೆ ಗುರುವನ್ನಾಶ್ರಯಿಸುವರು. ಅಧ್ಯಾತ್ಮದ ಉನ್ನತಿಗಾಗಿ, ಆತ್ಮಸಾಕ್ಷಾತ್ಕಾರಕ್ಕಾಗಿ ಗುರುಗಳನ್ನು ಸೇವಿಸುವ ಮಂದಿ ವಿರಳ. ಅವಧೂತರಿಗಾದರೋ ಎಲ್ಲರೂ ಸಮನೇ ; ಬಂದವರಲ್ಲಿ ಭೇದವನ್ನೆಣಿಸುವುದಿಲ್ಲ ಅವರು. ಮಳೆನೀರು

ಎಲ್ಲೆಲ್ಲಿಯೂ ಬೀಳುತ್ತದೆ. ನೆಲದ ಮೇಲೆ ಬಿದ್ದರೆ ಬೀಜಕ್ಕೆ ಅನುಕೂಲವಾಗುತ್ತದೆ ; ಬಂಡೆಯ ಮೇಲೆ ಬಿದ್ದರೆ ಸುಮ್ಮನೆ ಹರಿದು ಹೋಗುತ್ತದೆ. ಮಳೆಗೇನು ಬಂಡೆ-ನೆಲ ಎಂಬ ಎಣಿಕೆ ಇದೆಯೇ ? ಅವಧೂತರ ಇರವೂ ಹೀಗೆಯೆ. ಅಧ್ಯಾತ್ಮದಲ್ಲಿ ಆಸಕ್ತಿ ಉಳ್ಳವರಾಗಲಿ ಪ್ರಾಪಂಚಿಕ ವ್ಯವಹಾರದಲ್ಲೇ ತೊಡಗಿದವರಾಗಲಿ ಅವಧೂತರ ಸಂಪರ್ಕಕ್ಕೆ ಬರುವುದೇ ಒಂದು ಯೋಗ ; ಅದರಿಂದ ಜೀವಕ್ಕೊಂದು ಸಮಾಧಾನ ಇದ್ದೇ ಇರುತ್ತದೆ, ಒಳಗಣ ವಿಕಾಸ ಅಷ್ಟಿಷ್ಟು ಇದ್ದೇ ಇರುತ್ತದೆ. ಸಾಮಾನ್ಯ ಗುರುಗಳಿಂದ ಶ್ರವಣಮಾಡಿ ಉಪದೇಶ ಪಡೆದವರಿಗಿಂತ ಇವರು ಉತ್ತಮರೆಂಬುದು ಕಂಡು ಬರುತ್ತದೆ. ಹೇಗಾದರೂ, ಅವಧೂತರ ದೃಷ್ಟಿಯಲ್ಲಿ ವ್ಯವಹಾರಕ್ಕೂ ಪರಮಾರ್ಥಕ್ಕೂ ಅಷ್ಟೇನು ಅಂತರವಿರದಷ್ಟೆ ?

ಮೊದಲ ಮಾತು ಅಗತ್ಯಕ್ಕಿಂತ ಹೆಚ್ಚಾಯಿತು. ಮುಗಿಸುವ ಮೊದಲು, ನನ್ನ ಮಾನ್ಯ ಮಿತ್ರರು ಶ್ರೀ ಸತ್ಯನಾರಾಯಣ ಜೋಷಿಯವರಿಗೆ ನನ್ನ ಕೃತಜ್ಞತೆಯನ್ನು ಸಲ್ಲಿಸಬೇಕು. ಈ ಕೆಲಸಕ್ಕೆ ನನ್ನನ್ನು ಹಚ್ಚಿದವರು ಅವರೇ. ಅಚ್ಚುಮಾಡುವ ಹೊಣೆಯನ್ನೂ ಅವರೇ ಹೊತ್ತಿದ್ದಾರೆ, ಅವಧೂತರೊಬ್ಬರ ಮೇಲಣ ಅವರ ಭಕ್ತಿಯು ಕಾರಣವಾಗಿ. ಆ ಅವಧೂತರಿಗೇ ಈ ಕೃತಿಯನ್ನು ಸಮರ್ಪಿಸಿದ್ದೇನೆ, ನನ್ನ ಒಡಲೊಳಗಣ ಒಳಿತಿಗಾಗಿ.

ಸಾ. ಕೃ. ರಾಮಚಂದ್ರರಾವ್

# ೧. ಅವತರಣಿಕೆ

ಅವಧೂತರೆಂದರೆ ಯಾರು ? 'ಅವಧೂತ' ಎನ್ನುವ ಮಾತಿನ ಅರ್ಥವಾದರೂ ಏನು ? ಅವಧೂತರು ಹೇಗಿರುತ್ತಾರೆ ? ಅವರ ನಡೆ-ನುಡಿ ಹೇಗಿರುತ್ತದೆ ? ಹೀಗೆ ಅವಧೂತರನ್ನು ಕುರಿತಂತೆ ಹಲವರಲ್ಲಿ ಕುತೂಹಲ ಇರುವುದು ಸಹಜ. ಹುಚ್ಚರಂತೆ, ಉನ್ಮತ್ತರಂತೆ, ಪಿಶಾಚಿಗಳಂತೆ, ಸಣ್ಣ ಹುಡುಗರಂತೆ ಅವಧೂತರು ಇರುವರೆಂದು ಜನ ಕೇಳಿರುತ್ತಾರೆ. ಇದರಿಂದಾಗಿ ಕುತೂಹಲ ಇನ್ನಷ್ಟು ಹೆಚ್ಚುತ್ತದೆ. ಅವಧೂತರು ಮಹಾಜ್ಞಾನಿಗಳೆಂದು ಎಣಿಕೆ, ಆದರೂ ಹೀಗೇಕೆ ಇರುತ್ತಾರೆ ? ನಮ್ಮ ನಡುವೆಯೇ ಲೋಕವಿಲಕ್ಷಣವಾಗಿ ಅಡ್ಡಾಡುವ ಅವಧೂತರನ್ನು ನಾವು ಗುರುತಿಸುವುದು ಹೇಗೆ ?

ಹಾಗೆ ನೋಡಿದರೆ, ಅವಧೂತರನ್ನು ಅವಧೂತರಲ್ಲದವರು ಗುರುತಿಸುವುದು ಸಾಧ್ಯವೇ ಇರದು. ಗಾಳಿಯಲ್ಲಿ ಹಾರುವ ಹಕ್ಕಿಯು ಹಿಡಿಯುವ ಹಾದಿಯನ್ನು ಕಂಡುಕೊಳ್ಳುವವರು ಯಾರು ? ನೀರಿನಲ್ಲಿ ಹರಿದಾಡುವ ಮೀನಿನ ದಾರಿಯಾವುದೆಂದು ಯಾರು ಹೇಳಬಲ್ಲರು ? ನಮ್ಮ ನಡುವೆಯೇ ಅವಧೂತರು ಇದ್ದರೂ ನಮಗೆ ಕಾಣುವುದು ಅವರ ಹೊರಗು ಮಾತ್ರ; ಒಳಗಣ ನೆಲೆಯೇನೋ ಯಾರು ಬಲ್ಲರು ? ಅವರೊಡನೆ ಓಡಿಯಾಡಿದವರು ಕೂಡ ಅವರ ದಿಟವಾದ ನಿಲುವು ಏನೆಂಬುದನ್ನು ಅರಿತುಕೊಳ್ಳಲಾರರು. ಅರಿತುಕೊಳ್ಳಬೇಕೆಂದವರು ಅವರ ಎತ್ತರ-ಬಿತ್ತರಗಳನ್ನು ಅಷ್ಟಿಷ್ಟಾದರೂ ಸಾಧಿಸಿಕೊಳ್ಳಬೇಕು.

ಅವಧೂತರ ಚಿತ್ರಣಗಳೇನೋ ನಮಗೆ ಹಲವು ಆಕರಗಳಿಂದ ದೊರೆಯುತ್ತವೆ. ಅವಧೂತರ ಸಂಪ್ರದಾಯವೇ ಬಂದಿದೆ. ನಾಥಪಂಥ,

ದತ್ತಪಂಥ, ಸಿದ್ಧಸಂಪ್ರದಾಯ, ಸಿದ್ಧಾರೂಢಪಂಥ, ಅಡವಿಸಿದ್ಧರು ಇವರೆಲ್ಲ ಇದರಲ್ಲೇ ಒಳಗಾಗುತ್ತಾರೆ. ಅವಧೂತರ ಮಾತುಕತೆಗಳೂ ಹಾಡುಗಬ್ಬಗಳೂ ಜನಪ್ರಿಯವಾಗಿ ಉಳಿದುಕೊಂಡು ಬಂದಿವೆ. ಅವರು ಬದುಕಿಬಾಳಿದ ಬಗೆಗಳನ್ನೂ ಜನ ನೆನಪಿನಲ್ಲಿರಿಸಿಕೊಂಡಿದ್ದಾರೆ. ಮತ್ತೆ, ಇವರನ್ನು ಆಶ್ರಯಿಸಿ ಜನರು ತಂತಮ್ಮ ಪುರುಷಾರ್ಥಗಳನ್ನು ಸಾಧಿಸಿಕೊಳ್ಳುವುದು ಎಂದಿನಿಂದಲೋ ಇಂದಿನವರೆಗೂ ನಡೆದು ಬಂದಿದೆ. ಗ್ರಾಮೀಣ ಪರಿಸರದಲ್ಲಿ ಇವರ ಸಂಚಾರ ಹೆಚ್ಚು. ಅವರ ಆಂತರ್ಯವನ್ನು ಅರಿಯಲಾರದಿದ್ದರೂ ಅವರ ಅನುಗ್ರಹವನ್ನು ದೊರಕಿಸಿಕೊಳ್ಳುವ ಕಾತರ ಜನರಲ್ಲಿ ಇರುತ್ತದೆ.

ಅವಧೂತರು ನಮ್ಮ ದೇಶದಲ್ಲಿ ಮಾತ್ರವಲ್ಲ, ಎಲ್ಲೆಡೆಯೂ ಇರುತ್ತಾರೆ. ಅವರಿಗೇನು ಧರ್ಮದ ಕಟ್ಟುಪಾಡು ಇರದಿದ್ದರೂ ಎಲ್ಲ ಧರ್ಮಗಳಲ್ಲೂ ಅವಧೂತರ ಎಣಿಕೆ ಇರುತ್ತದೆ. ಸೂಫಿಗಳು, ದರಬೇಸಿಗಳು (ಡೆರ್ವಿಷ್), ಸಮಣರು (ಶಾಮನ್), ಅನುಭಾವಿಗಳು (ಮಿಸ್ಟಿಕ್) ಮೊದಲಾದವರೆಲ್ಲ ಅವಧೂತರೇ. ಇವರನ್ನು ಕಂಡರೆ ಜನರಿಗೆ ಭಕ್ತಿಯೂ ಇರುತ್ತದೆ, ಭಯವೂ ಇರುತ್ತದೆ. ಅವರ ಅಧ್ಯಾತ್ಮದ ಮೇಲ್ಮೆಯ ಆಕರ್ಷಣೆ ಕೆಲವರಿಗೆ ಮಾತ್ರ; ಅವರ ನಿಗ್ರಹಾನುಗ್ರಹಸಾಮರ್ಥ್ಯ ಹಲವರನ್ನು ಸೆಳೆಯುತ್ತದೆ. ಕೆಲವು ಮಂದಿ ಅವಧೂತರು ಪವಾಡಗಳನ್ನು ಮೆರೆಯಿಸುವುದಿದೆ.

ಅವಧೂತರ ಒಂದು ಚಿತ್ರಣ ನಮಗೆ ತ್ರಿಪುರಾರಹಸ್ಯದ ನಾಲ್ಕನೆಯ ಅಧ್ಯಾಯದಲ್ಲಿ ಬರುವ ಸಂವರ್ತನೆಂಬ ಸಿದ್ಧಾವಧೂತನ ಉಲ್ಲೇಖದಲ್ಲಿ ದೊರೆಯುತ್ತದೆ. ಅಲ್ಲಿ ಬರುವ ಪ್ರಸಂಗ ಇದು. ಜಮದಗ್ನಿಯ ಮಗ ಪರಶುರಾಮ (ಭಾರ್ಗವರಾಮ), ತನ್ನ ತಂದೆಯನ್ನು ಮಾಹಿಷ್ಮತಿಯ ರಾಜ ಕಾರ್ತವೀರ್ಯ (ಸಹಸ್ರಬಾಹು)

ಕೊಂದುದರಿಂದ ಸಿಟ್ಟಿಗೆದ್ದು, ಸೇಡಿನಿಂದ ಕ್ಷತ್ರಿಯಕುಲವನ್ನೇ ನಾಶಮಾಡುವ ಸಂಕಲ್ಪ ಮಾಡಿ, ಇಳೆಯ ಮೇಲಿನ ಅರಸರನ್ನೆಲ್ಲ ತುಂಡರಿಸತೊಡಗುತ್ತಾನೆ. ಹೀಗೆ ದಶರಥನ ಮಗ ರಾಮನನ್ನೂ ಎದುರಿಸಿ ರಾಮನಿಂದ ಸೋಲನಪ್ಪುತ್ತಾನೆ. ಆಗ ಅವನಿಗೆ ತಾನು ಋಷಿಪುತ್ರನಾದರೂ ಕೋಪಕ್ಕೀಡಾಗಿ ಅನೇಕರನ್ನು ಕೊಂದುದಕ್ಕೆ ಪಶ್ಚಾತ್ತಾಪವೊದಗುತ್ತದೆ. ಮನಸ್ಸು ತಲ್ಲಣಗೊಳ್ಳುತ್ತದೆ. ಹೀಗೆ ದುಗುಡದಿಂದ ನಡೆಯುತ್ತಿದ್ದ ಅವನಿಗೆ ದಾರಿಯಲ್ಲಿ ವಿಲಕ್ಷಣ ವ್ಯಕ್ತಿಯೊಬ್ಬ ಕಾಣಿಸಿಕೊಳ್ಳುತ್ತಾನೆ.

**'ದೃಷ್ಟಸ್ತೇಜೋರಾಶಿಮಯೋ ಜ್ವಲದಗ್ನಿಗಿರಿರ್ಯಥಾ ।**
**ಪುಷ್ಯಸುಂದರಸರ್ವಾಂಗಃ ಫುಲ್ಲಪಂಕಜಲೋಚನಃ ॥**

**ಮಲಿನಾಂಗೋ ಮುಕ್ತಕೇಶಃ ಉನ್ಮತ್ತ ಚರಿತೋಽಪಿ ಯಃ ।**
**ಮಹಾಪುರುಷವದ್ ದೃಷ್ಟೋ ಮಹಾತ್ಮಾ ಮುನಿರಾಟ್ ಕವಿಃ ॥**

**ದೃಷ್ಟ್ವೈವಂ ಭಾರ್ಗವೋ ವಿಪ್ರಂ ತ್ಯಕ್ತಲಿಂಗಾಶ್ರಮಾದಿಕಂ ।**
**ದಿಗಂಬರಂ ಪಾಶದಿಗ್ಧಂ ಗಂಧಸಿಂಧುರವತ್ ಸ್ಥಿತಂ ॥** (೧೪-೧೬)

ಬೆತ್ತಲೆಯಾಗಿರುವವನು; ಮೈಯೆಲ್ಲ ಕೆಸರಿನಿಂದ ಕೂಡಿದೆ ; ಮದದಾನೆಯಂತೆ ಕಾಣುತ್ತಾನೆ. ತಲೆಗೂದಲು ಕೆದರಿದೆ. ಧೂಳಡರಿದ ದೇಹ; ಹುಚ್ಚನಂತೆ ಆಡುವನು. ಆದರೂ ಮಹಾತ್ಮನಂತೆ ಕಂಗೊಳಿಸುತ್ತಾನೆ. ಅವನ ಮುಖದಲ್ಲಿ ಕಳೆ ದಟ್ಟವಾಗಿ ಕಾಣಿಸಿಕೊಳ್ಳುತ್ತದೆ. ಉರಿಯುವ ಬೆಟ್ಟದಂತೆ ಹೊಳೆಯುತ್ತಿದ್ದಾನೆ. ಯಾವ ಜಾತಿ, ಯಾವ ಆಶ್ರಮ (ಗೃಹಸ್ಥನೋ, ಬ್ರಹ್ಮಚಾರಿಯೋ ಯತಿಯೋ) ಏನನ್ನೂ ಹೇಳುವಂತಿಲ್ಲ.

ಇವನನ್ನು ನೋಡಿ ಪರಶುರಾಮ ಬೆರಗಾದ. ಇವನಾರೆಂಬ ಶಂಕೆ ಅವನ ಮನಸ್ಸಿನಲ್ಲಿ ಬೇರೂರಿತು. ಇವನೇನು ಹುಚ್ಚನೋ ಜ್ಞಾನಿಯೋ? ಅವನ ತೇಜಸ್ಸನ್ನು ನೋಡಿದರೆ ಅವನ ನಡವಳಿಕೆ ತೀರ ವಿಪರೀತವಾಗಿದೆ. ಒಳಿತು, ಕೆಡುಕು ಎರಡೂ ಕೂಡಿಕೊಂಡಿವೆ. ಯಾರಿವನು? ಹುಚ್ಚನಾದರೆ ಇಷ್ಟು ಕಳೆ ಹೇಗೆ ? ವೇಷ ತಳೆದ ಮಹಾಪುರುಷನೋ ಹೇಗೆ ? ತಿಳಿಯಲಾರೆನಲ್ಲಾ!

**'ಕೋಽಯಂ ವಿಲಕ್ಷಣಾಚಾರಃ ಸದಸಲ್ಲಿಂಗಸಂಯುತಃ ।**
**ಕಿಂ ಮಹಾಪುರುಷೋ ವಾಽಥಾಽಪ್ರಮತ್ತೋ ವಾಽಪಿ ಕಶ್ಚನ ॥**

**ಅತ್ರ ಬುದ್ಧಿರ್ನಾಂತಮೇತಿ ಯಥಾ ವೇಷಾಂತರೇ ನಟೇಃ ।**
**ಪ್ರಮತ್ತಶ್ಚೇತ್ ಕಥಮಯಂ ತೇಜೋರಾಶಿಪದಂ ಭವೇತ್ ॥** (೧೭-೧೯)

ಅವನನ್ನು ನೋಡುತ್ತ ನೋಡುತ್ತ ಪರಶುರಾಮನಿಗೆ ಇವನು ಮಹಾಪುರುಷನೇ ಇದ್ದೀತು ಎನಿಸಿತು. ಇವನ ವಿಚಾರ ತಿಳಿದು ಕೊಳ್ಳಬೇಕೆಂಬ ಕುತೂಹಲವೂ ಮೂಡಿತು. ಪರಶುರಾಮನು ಈ ವಿಲಕ್ಷಣ ವ್ಯಕ್ತಿಯ ಬಳಿಗೆ ಬಂದು ''ನೀನಾರು? ಇದೇಕೆ ಹೀಗಿರುವೆ?'' ಎಂದು ಕೇಳಿದನು. ಒಡನೆಯೇ ಆ ವ್ಯಕ್ತಿ ಅಲ್ಲಿಂದ ಓಡಿಹೋದನು. ಓಡಿ ಹೋಗುತ್ತ ಪರಶುರಾಮನ ಕಡೆಗೆ ಕಲ್ಲುಗಳನ್ನು ತೂರಿದನು, ಗಟ್ಟಿಯಾಗಿ ನಗುತ್ತಾ, ಹುಚ್ಚನಂತೆ ಮಾತನಾಡಿಕೊಳ್ಳುತ್ತಿದ್ದನು. ಪರಶುರಾಮನು ಬಿಡದೆ ಅವನಿದ್ದಲ್ಲಿಗೆ ಹೋಗಿ ಅವನನ್ನು ಗಟ್ಟಿ ಯಾಗಿ ಹಿಡಿದುಕೊಂಡನು. ಮತ್ತೆ ಅವನನ್ನು ಪರೀಕ್ಷಿಸಲು ಆ ವ್ಯಕ್ತಿಯನ್ನು ಮನಬಂದಂತೆ ಬಯ್ಯತೊಡಗಿದನು. ಅವನ ಬಯ್ಗಳನ್ನು ಕೇಳಿಸಿಕೊಂಡರೂ ಆ ವ್ಯಕ್ತಿ ಸಮಾಧಾನದಿಂದಲೇ ಇದ್ದುದನ್ನು ನೋಡಿ, ಇವನು ಮಹಾಪುರುಷನೇ ಎಂದು ಪರಶುರಾಮನು

ನಿಶ್ಚಯಿಸಿಕೊಂಡು, ಆ ವ್ಯಕ್ತಿಯ ಪಾದಗಳನ್ನು ಮುಟ್ಟಿ ನಮಸ್ಕರಿಸಿದನು.

ಇದರಿಂದ ಪ್ರಸನ್ನನಾದ ಅವನು ಪರಶುರಾಮನನ್ನು ಕೇಳಿದನು, ''ಅಯ್ಯಾ, 'ನೀನು' ಯಾರೆಂದು ನನ್ನನ್ನು ಕೇಳಿದೆಯಲ್ಲವೆ? ನಿನ್ನ ಸಂದೇಹ ನನಗೆ ತಿಳಿಯಲಿಲ್ಲ. ನೀನಾಡಿದ ಮಾತಿನಲ್ಲಿ 'ನೀನು' ಎಂಬುದು ನಿನಗೆ ತಿಳಿದಿದ್ದರೆ ಅದರ ವಿಚಾರ ನನ್ನನ್ನು ಕೇಳಬೇಕಾದ ಅಗತ್ಯವೇನು ? ಹಿಟ್ಟನ್ನೇ ಮತ್ತೂ ಹಿಟ್ಟುಮಾಡುವ ಹದನವೇನು ? 'ನೀನು' ಎಂಬ ಮಾತಿನ ಅರ್ಥ ನಿನಗೆ ತಿಳಿಯದಿದ್ದರೆ ನಿನ್ನ ಪ್ರಶ್ನೆಗೇ ಅರ್ಥವಿರದಾಯಿತು! ನನ್ನ ಮೈಯನ್ನು ನೋಡಿ ಅದನ್ನೇ 'ನೀನು' ಎಂದು ನೀನು ಬಗೆದೆಯಾದರೆ, ಒಳಗಿರುವ ಚೈತನ್ಯ ನಿನ್ನ ಎಣಿಕೆಗೆ ಬರಲಿಲ್ಲ. ನಿನಗೆ ಆತ್ಮಜ್ಞಾನವಿರದು ಎಂದು ಸ್ಪಷ್ಟವಾಯಿತು. ನೋಡಿ ತಿಳಿದುಕೊಳ್ಳುವ ವಸ್ತುವಲ್ಲ ಅದು. ನನ್ನ ಶರೀರವನ್ನು ನೋಡಿಯೇ ನೀನು ಪ್ರಶ್ನೆ ಕೇಳಿದೆ, ಇದರಲ್ಲಿ ಯಾವ ಸಂಶಯವೂ ಇರದು. ನೀನು ಯಾರು ಎಂಬ ಪ್ರಶ್ನೆಗೆ ಉತ್ತರ ದೇಹ ಎಂದಷ್ಟೆ! ದೇಹವನ್ನು ಏನೆಂದು ಹೇಳಲಿ? ಅದೊಂದು ಸಂಜ್ಞೆ, ಸಂಕೇತ ಅಷ್ಟೆ. ಅದು ತಾನಾಗಿಯೇ ದಿಟವಾಗಿ ಇರುವ ವಸ್ತುವಲ್ಲ, ನಾವು ಕಲ್ಪಿಸಿಕೊಂಡದ್ದು. ಮತ್ತೆ, ಅದು ಉಂಡೆಯಾಗಿ ಒಂದೆಡೆ ಇರುವ ಪದಾರ್ಥವೂ ಅಲ್ಲ, ದೇಹವೆಂಬುದು ಅನೇಕ ವಿವರಗಳ ಸಂಘಾತ; ದೇಹವೆಂಬ ಸಂಜ್ಞೆಗೆ ಇದು ಆಸರೆ. ಹೀಗಾಗಿ, ನಿನ್ನ ಸಂದೇಹವೇನು ಎಂದು ತಿಳಿಯಹೇಳಿದೆಯಾದರೆ, ಉತ್ತರ ಹೇಳುವೆ!''.

ಪರಶುರಾಮನು ಈ ಮಾತನ್ನು ಕೇಳಿ ಬೆರಗಾದ. ಹುಚ್ಚನ ಮಾತಲ್ಲ ಇದು, ಮಹಾಪುರುಷನದು ಎಂದು ಖಚಿತವಾಯಿತು ಅವನಿಗೆ. ಏನು ಹೇಳಬೇಕೆಂದು ತೋರದೆ ಸುಮ್ಮನೆ ನಿಂತ. ಆನಂತರ

''ನೀನು ಗುರು, ನನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸು. ನನಗೆ ತತ್ತ್ವವನ್ನು ತಿಳಿಯಹೇಳು'' ಎಂದು ಅವನನ್ನು ಅಂಗಲಾಚಿ ಬೇಡಿಕೊಂಡ. ಆಗ ಅವನು ಪರಶುರಾಮನಿಗೆ ತನ್ನ ಪರಿಚಯವನ್ನು ಮಾಡಿಕೊಟ್ಟ.

ಸಂವರ್ತನೆಂದು ಅವರ ಹೆಸರು, ತಂದೆ ಆಂಗಿರಸ. ಮಹಾಭಾರತದಲ್ಲೂ ಅನೇಕ ಕಡೆ (ಅನುಶಾಸನ ಪರ್ವ, ಶಾಂತಿ ಪರ್ವ, ವನ ಪರ್ವ ಇತ್ಯಾದಿ) ಇವನ ಉಲ್ಲೇಖ ಬರುತ್ತದೆ. ಆಂಗಿರಸನ ಎಂಟು ಮಂದಿ ಮಕ್ಕಳಲ್ಲಿ ಮೊದಲನೆಯವನು ಬೃಹಸ್ಪತಿ, ಮೂರನೆಯವನು ಸಂವರ್ತ. ಬೃಹಸ್ಪತಿಗೂ ಸಂವರ್ತನಿಗೂ ಮೊದಲಿಂದ ತಿಕ್ಕಾಟ. ಬೃಹಸ್ಪತಿಯಿಂದ ತಿರಸ್ಕೃತನಾದ ಮರುತ್ತರಾಜನಿಗೆ ಇವನು ಒಲಿದು ಪ್ಲಕ್ಷಾವತರಣದಲ್ಲಿ ಅವನಿಂದ ಯಜ್ಞ ಮಾಡಿಸಿದ. ಒಮ್ಮೆ ಇಂದ್ರನ ವಜ್ರಾಯುಧವನ್ನೂ ಕಳೆಗುಂದಿಸಿದ. ಈ ವಿವರಗಳೆಲ್ಲ ತ್ರಿಪುರಾ ರಹಸ್ಯದಲ್ಲಿ ಬರುವುದಿಲ್ಲ. ಅಲ್ಲಿ ಬಂದಿರುವ ಒಂದು ವಿವರ ಮಹಾಭಾರತದಲ್ಲಿಲ್ಲ. ಅದೇನೆಂದರೆ, ಅಣ್ಣನ ಮೇಲೆ ವಿರಸ ಸಾಧಿಸಿದ್ದು ಸಂವರ್ತನ ಮನಸ್ಸಿಗೆ ತುಂಬ ಖೇದವೆನಿಸಿ, ಬೇಸರವಾಗಿ ಪಶ್ಚಾತ್ತಾಪದಿಂದ ಅವನು ವಿರಕ್ತನಾಗಿ ಅವಧೂತನಾಗಿಬಿಟ್ಟದ್ದು. ಇಂಥ ವಿಷಾದದಲ್ಲಿ ಅವನಿಗೆ ಸಾಂತ್ವನ ಮಾಡಿ ಮಾರ್ಗದರ್ಶನ ಮಾಡಿದ ಗುರು ದತ್ತಾತ್ರೇಯ; ಅವಧೂತರ ಆದರ್ಶ. ದತ್ತಾತ್ರೇಯರ ಬೋಧೆಯಿಂದ ಆತ್ಮಜ್ಞಾನವನ್ನು ಪಡೆದುಕೊಂಡು, ಒಂದೆಡೆ ನಿಲ್ಲದೆ ತಿರುಗಾಡುತ್ತಲೆ ಇದ್ದವನು ಸಂವರ್ತ. ದೇಹ ತಿರುಗಾಡುತ್ತಿದ್ದರೂ ಆತ್ಮ ಮಾತ್ರ ನಿಶ್ಚಲವಾಗಿದ್ದಿತು. ತಿರುಗಾಟ 'ಸೂತ್ರದ ಬೊಂಬೆ ಆಡುವಂತೆ' ('ಸೂತ್ರ ಪಾಂಚಾಲಿಕಾ ಯಥಾ')

ಸಂವರ್ತ ಅವಧೂತನ ಸೂಚನೆಯಂತೆ ಪರಶುರಾಮನು ದತ್ತಾತ್ರೇಯರನ್ನು ಕಾಣಲು ಹೋಗುತ್ತಾನೆ. ಮುಂದೆ ಐದನೆಯ

ಅಧ್ಯಾಯದಲ್ಲಿ ಪರಶುರಾಮ-ದತ್ತಾತ್ರೇಯರ ಸಮಾಗಮ. ಅವಧೂತರಲ್ಲಿ ಅವಧೂತ ದತ್ತಾತ್ರೇಯ ಅವಧೂತರಿಗೆ ಆದರ್ಶ, ಸ್ಫೂರ್ತಿ, ಮಾರ್ಗದರ್ಶಿ. ಪರಶುರಾಮ ಅವನನ್ನು ಕಂಡದ್ದಾದರೂ ಹೇಗೆ ? ಆರನೆಯ ಅಧ್ಯಾಯ ಇದನ್ನು ಬಣ್ಣಿಸುತ್ತದೆ. ದತ್ತಾತ್ರೇಯನದು ಯತಿವೇಷ; ಆದರೆ ತಾರುಣ್ಯದ ಕಳೆ ಅವನ ಮೈಯಿಂದ ಮಿನುಗುತ್ತಿದ್ದಿತು. 'ದರ್ಶನಾದೇವ ನಾರೀಣಾಂ ಕೋಟಿಮನ್ಮಥ ದೀಪನಂ'. ಅವನ ತೋಳತೆಕ್ಕೆಯಲ್ಲಿ ಲಕ್ಷ್ಮಿಯಂಥ ಹೆಂಗಸು; ಅವನ ಕಣ್ಣುಗಳೋ ಮದ್ಯಪಾನದಿಂದ ಕೆಂಪಡರಿದ್ದುವು. ಅವನೆದುರಿಗೆ ಹೆಂಡದ ಗಡಿಗೆ.

**'ಏವಂಭೂತಂ ಸಮಾಲೋಕ್ಯ ಸ್ತ್ರಿಯಾ ಲಕ್ಷ್ಮೀಸಮಾನಯಾ ।**
**ಕಯಾಚಿದತಿತಾರುಣ್ಯಲಾವಣ್ಯಲಸದಂಗಯಾ ॥**
**ಮದಿರಾಮದಸಂರಕ್ತಘೂರ್ಣನೇತ್ರಾಂಬುಜಾತಯಾ ।**
**ಆಲಿಂಗಿತಪುರೋಭಾಗನ್ಯಸ್ತ ಮೈರೇಯಕುಂಭಕಂ ॥** (೬,೮-೯)

ಈ 'ಮಿಶ್ರಲಿಂಗ'ವನ್ನು ಕಂಡ ಪರಶುರಾಮ ಹೌಹಾರಿದ. 'ಕಿಮೇತದದ್ಭುತಂ ವೃತ್ತಂ ಮುನೇರಸ್ಯ ಮಹಾತ್ಮನಃ?' ''ಇದೇನಿದು ವಿಚಿತ್ರ, ಈ ಮಹಾತ್ಮನಾದ ಮುನಿಯ ಅದ್ಭುತವಾದ ನಡವಳಿಕೆ ?'' ಎಂದು ಅವನಿಗೆನಿಸಿತು. 'ವಿಷದಿಂದ ಕೂಡಿದ ದ್ರಾಕ್ಷಿಯ ರಸ'ದಂತೆ (ವಿಷಸಂಪೃಕ್ತಮಾಧ್ವೀಕಮಿವ) ಅವನಿಗೆ ತೋರಿತು. ಇದೇನು ದಿಟವಾದ ದೃಶ್ಯವೋ? ಸಂವರ್ತನಂಥ ಸಿದ್ಧನು ಎಂದಿಗಾದರೂ ತನಗೆ ಮೋಸ ಮಾಡಿಯಾನೆ ? ಅವನು ನನ್ನನ್ನು ಇಲ್ಲಿಗೆ ಕಳುಹಿಸಿದ್ದಾನೆ. ಇವನು ಹೇಗಾದರಿರಲಿ, ಮಹಾಪುರುಷನೇ ಇರಬೇಕು. ಒಳಿತು, ಕೆಡುಕು, ಸದಾಚಾರ, ದುರಾಚಾರ ಇವೆಲ್ಲ ಮನಸ್ಸಿನ ಕಲ್ಪನೆಗಳು ತಾನೆ ?

'ಮನಃಕಲ್ಪಿತಮೇವೇಹ ಸದಸದ್ಭೇದಭೇದನಂ' (೬, ೧೫)

ಹೀಗೆಂದುಕೊಂಡು ಪರಶುರಾಮನು ದತ್ತಾತ್ರೇಯರನ್ನು ದರ್ಶನ ಮಾಡಿ ತನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸುವಂತೆ ಬಿನ್ನವಿಸಿಕೊಂಡಾಗಲೂ, ದತ್ತಾತ್ರೇಯರು 'ಒಳ್ಳೆಯಮಂದಿ ನನ್ನಂಥವನನ್ನು ಆಶ್ರಯಿಸಬಾರದು (ಮಾದೃಶಾ ನ ಸದಾಶ್ರಯಾಃ) ನೀನು ನೋಡುವಂತೆಯೇ ನಾನು ಕಾಮುಕ, ಕುಡುಕ, ಪುರುಷಾರ್ಥಸಾಧನೆಗೆ ಬೇಕಾದುದು ಇಂದ್ರಿಯ ನಿಗ್ರಹ. ಅದು ನನ್ನಲ್ಲಿರದು' ಎಂದು ಆರಂಭಿಸುತ್ತಾರೆ.

ಈ ಪ್ರಸಂಗದಿಂದ ಅವಧೂತರ ಹೊರಮುಖದ ಚಿತ್ರಣ ಮೂಡಿ ಕೊಳ್ಳುತ್ತದೆ. ಸಾಮಾನ್ಯಜನರು, ಸಭ್ಯರೆನಿಸಿಕೊಂಡವರು, ಸದಾಚಾರ-ಅನಾಚಾರ ಎಂದು ವಿಭಾಗವಮಾಡಿಕೊಳ್ಳುತ್ತಾರೆ. ಒಳ್ಳೆಯದು, ಕೆಟ್ಟದ್ದು ಎಂಬ ಎಣಿಕೆಯ ಹಿಂದೆ ತಾವು ಸರಿಯೆಂದು ತಿಳಿದದ್ದು ಒಳ್ಳೆಯದು; ಉಳಿದುದೆಲ್ಲ ಕೆಟ್ಟದ್ದು ಎಂಬ ಹಟ ಇದೆ. ಇದು ಮನಸ್ಸಿಗೆ ಸಂಬಂಧಿಸಿದ್ದು. ಲೋಕ ವ್ಯವಹಾರ ನಡೆಯುವುದು ಶರೀರ, ಇಂದ್ರಿಯಗಳು, ಮನಸ್ಸು ಇವುಗಳಿಂದ. ಇವುಗಳಲ್ಲಿ ಮನಸ್ಸು ಮುಖ್ಯವಾದುದು. ಮನಸ್ಸಿನ ವಿಕಲ್ಪವೇ ಹೊರಗಣ ಪ್ರಪಂಚ. ಪ್ರಜಾಪತಿಯ ಸಂಕಲ್ಪದಿಂದಲೇ ಅಲ್ಲವೇ ಜಗತ್ತು ಮೈದಳೆದುದು? ಜಗತ್ತು ಸತ್ತ್ವವಿಲ್ಲದ್ದು, ಸಟೆಯಾದುದು ಎಂದರೆ ಅದಕ್ಕೆ ಆಧಾರವಾದ ಮನಸ್ಸೂ ಶೂನ್ಯವೇ. ಮಹೋಪನಿಷತ್ತಿನಲ್ಲಿ (೫, ೫೨)-

**ಪೂರ್ವಂ ಮನಃ ಸಮುದಿತಂ ಪರಮಾತ್ಮತತ್ತ್ವಾತ್**
**ತೇನಾತತಂ ಜಗದಿದಂ ಸವಿಕಲ್ಪಜಾಲಂ ।**
**ಶೂನ್ಯೇನ ಶೂನ್ಯಮಪಿ ವಿಪ್ರ ಯಥಾಂಬರೇಣ**
**ನೀಲತ್ವಮುಲ್ಲಸತಿ ಚಾರುತರಾಭಿಧಾನಂ ॥**

ಎಂದು ಹೇಳಿರುವುದನ್ನು ಗಮನಿಸಬೇಕು. ಆಕಾಶವು ನೀಲಿ ಬಣ್ಣವಾಗಿ ಕಾಣುವಂತೆಯೇ ಮನಸ್ಸಿನಲ್ಲಿ ಪ್ರಪಂಚ. ಈ ತತ್ತ್ವವನ್ನು

ತಿಳಿದವರು ತಮ್ಮ ಮನಸ್ಸನ್ನು ವಶದಲ್ಲಿರಿಸಿಕೊಳ್ಳುತ್ತಾರೆ. ಮನಸ್ಸಿನ ವಿಕಲ್ಪಗಳನ್ನೆಲ್ಲ ತಡೆಹಿಡಿಯುತ್ತಾರೆ. ಒಳಿತು, ಕೆಟ್ಟದು, ಸದಾಚಾರ, ದುರಾಚಾರ, ಎಂಬೀ ದ್ವೈತ ಭಾವನೆಯೆಲ್ಲ ಮನಸ್ಸಿನ ವಿಕಲ್ಪಗಳೇ, ಮನಸ್ಸಿನ ಆಳ್ವಿಕೆಗೆ ಅಧೀನವಾಗಿರುವ ನಮಗೆ ಸಭ್ಯತೆಯ ಮಾನದಂಡ. ಮನಸ್ಸನ್ನು ಗೆದ್ದುಕೊಂಡಿರುವ ಅವಧೂತರ ನಡೆ-ನುಡಿಗಳಿಗೆ ಈ ಮಾನದಂಡ ಸಲ್ಲುವುದಿಲ್ಲ. ಹೀಗಾಗಿ ಅವರು ನಮ್ಮ ಕಣ್ಣಿಗೆ ಹುಚ್ಚರಂತೆ, ಉನ್ಮತ್ತರಂತೆ, ಪಿಶಾಚಿಗಳಂತೆ, ಸಣ್ಣ ಹುಡುಗರಂತೆ ಕಾಣಿಸಿಕೊಳ್ಳುತ್ತಾರೆ.

ಅವಧೂತರಿಗೂ ಸಾಮಾನ್ಯಜನರಿಗೂ ಇರುವ ಅಂತರ ಇದೇ. ಸಾಮಾನ್ಯಜನರಿಗೆ ನೀತಿ, ಧರ್ಮ, ಆಚಾರ. ಇವೆಲ್ಲ ಮುಖ್ಯ. ಏಕೆಂದರೆ ಅವರಲ್ಲಿ ಲೋಕವಾಸನೆ, ದೇಹವಾಸನೆ, ಶಾಸ್ತ್ರವಾಸನೆಗಳೆಂಬ ಮೂರು ತೆರನಾದ ಎಡೆತಡೆಗಳಿರುತ್ತವೆ. ದೇಹವಾಸನೆಯೆಂದರೆ ತಮ್ಮ ದೇಹದ ಬಯಕೆಗಳನ್ನೆಲ್ಲ ತೀರಿಸಿಕೊಳ್ಳಬೇಕು. ತಮ್ಮ ದೇಹವನ್ನು ರೋಗರುಜಿನಗಳಿಂದ ಕಾಪಿಟ್ಟುಕೊಳ್ಳಬೇಕು, ದೇಹದ ಸೌಂದರ್ಯ ವನ್ನು ಹೆಚ್ಚಿಸಿಕೊಳ್ಳಬೇಕು, ದೇಹ ದೀರ್ಘಕಾಲ ಇರುವಂತೆ ನೋಡಿಕೊಳ್ಳಬೇಕು, ದೇಹದಲ್ಲಿ ಸಾಮರ್ಥ್ಯ, ಇಂದ್ರಿಯಪಾಟವ, ಮಾನಸಿಕ ಹರ್ಷ ಇವನ್ನೆಲ್ಲ ಸಾಧಿಸಿಕೊಳ್ಳಬೇಕು ಎಂಬೀತರನಾದ ಕಾತರ. ದೇಹ ತನ್ನದು ಎಂಬ ಅಭಿಮಾನ ಇದಕ್ಕೆ ಮೂಲ. ತಾನೇ ದೇಹ ಎಂಬ ಭ್ರಮೆಯೂ ಇರುತ್ತದೆ. ಲೋಕವಾಸನೆಯೆಂದರೆ, ಲೋಕದಲ್ಲಿ ಜಯ, ಧನ, ಯಶಸ್ಸು, ಸ್ಥಾನ, ಮಾನ, ಅಧಿಕಾರ, ಜನಾನುರಾಗ ಎಲ್ಲವನ್ನೂ ಪಡೆದುಕೊಳ್ಳಬೇಕೆಂಬ ಆಸೆ. ಸುತ್ತಮುತ್ತ ಇರುವ ಜನರು ತನ್ನನ್ನು ಓಲೈಸಬೇಕು, ಪರಿಸರ ತನ್ನ ವಶವಾಗಿರಬೇಕು, ಇಹಲೋಕ ಮತ್ತು ಪರಲೋಕ ಎರಡರಲ್ಲೂ ಶಂಕೆಯಿಲ್ಲದ ಸುಖ ತನ್ನದಾಗಬೇಕು – ಈ ಬಗೆಯ ಎಣಿಕೆಗಳು. ಶಾಸ್ತ್ರವಾಸನೆಯೆಂದರೆ ವಿದ್ಯೆ ತನಗೆ ಕೈಗೂಡಬೇಕು, ಶಾಸ್ತ್ರವೇತ್ತನೆಂಬ ಖ್ಯಾತಿ ಒದಗಬೇಕು,

ವಾದದಲ್ಲಿ ಎದುರಾಳಿಗಳ ಬಾಯಿಮುಚ್ಚಿಸುವಂಥ ವಾಕ್ಚಾತುರ್ಯ ತನಗಿರಬೇಕು, ಎಲ್ಲ ವಿಚಾರದಲ್ಲೂ ಬಲ್ಲಿದನಾಗಬೇಕು ಈ ಮೊದಲಾದ ಆಸೆಗಳು.

ಹೀಗೆ ಇವು ಮೂರು ವಾಸನೆಗಳಿಂದಾಗಿ ನಾವು ಪ್ರಪಂಚಕ್ಕೆ ಅಂಟಿಕೊಳ್ಳುತ್ತೇವೆ. ನಾನು ಆಢ್ಯ, ನನ್ನದು ಜಗತ್ತು ಎಂಬ ಅಭಿಮಾನ ಬೇರೂರಿಕೊಳ್ಳುತ್ತದೆ. ಈ ಅಭಿಮಾನ ಬೆಳೆಯಲು ಏನು ಬೇಕೋ ಅದರಲ್ಲಿ ತೊಡಗುತ್ತೇವೆ. ಈ ವಾಸನೆಗಳ ಜೊತೆಗೆ ಈಷಣಗಳು ಮೂರು ಕೆಲಸಮಾಡುತ್ತವೆ. ದಾರೇಷಣ (ಹೆಂಗಸರ ಬಯಕೆ, ಕಾಮದ ಪೂರೈಕೆ), ಪುತ್ರೇಷಣ (ಸಂತಾನದ ಬಯಕೆ, ಮಕ್ಕಳುಮರಿ ಮನೆತುಂಬಿ ಮನೆತನ ಅಭಿವೃದ್ಧಿಗೊಳ್ಳಲೆಂಬ ಆಸೆ), ವಿತ್ತೇಷಣ (ಐಶ್ವರ್ಯದ ಬಯಕೆ, ಆರ್ಥಿಕ ಸುಸ್ಥಿತಿಯ ಕಾಮನೆ) ಇವು. ನಾನು, ನನ್ನದು ಎಂಬ ಅಭಿಮಾನ ಹೆಮ್ಮರವಾಗಿ ಬೆಳೆಯುವುದು ಹೀಗೆ.

ಇದರಿಂದಾಗಿ ಪ್ರಪಂಚವನ್ನು ಗಟ್ಟಿಯಾಗಿ ಹಿಡಿದುಕೊಳ್ಳುತ್ತೇವೆ. ದೇಹ ತನ್ನದು, ಇಂದ್ರಿಯಗಳು ತನ್ನವು, ಮನಸ್ಸು ತನ್ನದು, ದೇಹೇಂದ್ರಿಯ ಮನಸ್ಸುಗಳಿಗೆ ಸುಖಸಂತೋಷಗಳುಂಟಾಗಬೇಕು ಎಂಬ ಭಾವನೆ ದೃಢವಾದಾಗ ಜೀವಭಾವ ಒದಗಿಬರುತ್ತದೆ. ದೇಹವೇ ತಾನು, ಇಂದ್ರಿಯಗಳೇ ತಾನು, ಮನಸ್ಸೇ ತಾನು ಎಂಬ ತಾದಾತ್ಮ್ಯ ಭಾವನೆಗೇ ಜೀವವೆಂಬ ಹೆಸರು. ದೇಹೇಂದ್ರಿಯಾದಿಗಳಿಂದ ಬೇರೆಯಾದ ಆತ್ಮನನ್ನು ಮರೆಮಾಚಿ ಜೀವ ಮುಂದೆ ಬರುತ್ತದೆ. ಹೊರಗಣ ಪ್ರಪಂಚದೊಂದಿಗೆ ನಂಟನ್ನು ಸಿದ್ಧಪಡಿಸಿಕೊಳ್ಳುತ್ತದೆ. ದೇಹದ ಬಾಧೆಯೋ, ಇಂದ್ರಿಯಗಳ ಅನುಭವವೋ, ಮನಸ್ಸಿನ ದುಗುಡ-ಹರ್ಷಗಳೋ ದಿಟವಾದುವು, ಮುಖ್ಯವಾದುವು ಎಂಬ ಎಣಿಕೆ ದೃಢವಾಗುತ್ತದೆ.

ಹೊರಗೆ ಹರಿಯುವ ಪ್ರವೃತ್ತಿ ಇಂದ್ರಿಯಗಳಿಗೆ ಸಹಜವಾದುದು; ಇಂದ್ರಿಯಗಳೊಂದಿಗೆ ಹೊಂದಿಕೊಳ್ಳುವುದು ಮನಸ್ಸಿಗೆ ಸಹಜ ವಾದುದು. ಒಳಗೆ ನೋಡಿಕೊಳ್ಳುವುದು ಇಂದ್ರಿಯಗಳಿಗಂತೂ ಸಾಧ್ಯವಿಲ್ಲ. ಮನಸ್ಸಿಗೆ ಸಾಧ್ಯವಾದರೂ ಸಂಭವಿಸುವುದಿಲ್ಲ. ಹೀಗೆ ಬಹಿಃಪ್ರವೃತ್ತಿಯಿರುವಾಗ ಹೊರಗಣ ವಿಷಯಗಳ ಮೇಲೆ ಆಸಕ್ತಿ ಕುದುರುವುದು ತಪ್ಪಿದ್ದಲ್ಲ. ವಿಷಯಾಸಕ್ತಿ ಒದಗಿಬಂದಾಗ ಪ್ರಪಂಚವು ಸತ್ಯವೆನಿಸುತ್ತದೆ, ಅದರಲ್ಲಿ ಆಕರ್ಷಣೆ ಕಾಣಿಸುತ್ತದೆ; ಅದರೊಂದಿಗೆ, ಅದರಲ್ಲಿ ತಾನು ನಿಂತರೇ ತನ್ನ ಸತ್ಯ, ತನ್ನ ಕರ್ತವ್ಯ ಎಂಬ ನಂಬಿಕೆ ಮೂಡುತ್ತದೆ. ಇದು ಪ್ರಪಂಚಭಾವ. ಪ್ರಪಂಚವೇ ಸತ್ಯ, ಮಹತ್ತ್ವವುಳ್ಳದ್ದು ಎಂಬ ಕಲ್ಪನೆ.

ಜೀವಭಾವ, ಪ್ರಪಂಚಭಾವ ಎರಡೂ ಒಂದೇ ನಾಣ್ಯದ ಎರಡು ಮುಖಗಳು. ಜೀವಕ್ಕಾಗಲಿ, ಪ್ರಪಂಚಕ್ಕಾಗಲಿ ಆಸರೆಯಾಗಿರುವುದು ಆತ್ಮ. ಸಮುದ್ರದಿಂದ ಅಲೆಗಳು ಮೇಲೆದ್ದು, ಹೊರಚಾಚಿಕೊಂಡು ಬಂದಾಗ ಅಲೆಗಳು ಕಂಡುಕೊಳ್ಳುತ್ತವೆ; ಅಲೆಗಳಿಗೆ ಆಸರೆಯಾದ ಸಮುದ್ರ ಗಮನದಿಂದ ಜಾರುತ್ತದೆ. ಆತ್ಮವೂ ಹೀಗೆ ನಮ್ಮ ಗಮನದಿಂದ ಮರೆಯಾಗುವುದು. ಅಲೆಗಳ ಮೂಲ ಸಮುದ್ರವೇ, ಅಲೆಗಳು ಎದ್ದಿರುವಾಗಲೂ ಅದು ಸಮುದ್ರದ ನೀರೇ, ಅಲೆಗಳು ಹಿಂದಿರುಗು ವುದೂ ಸಮುದ್ರದ ನೀರಿಗೇ. ಅಲೆಗಳ ಆಟವೇ ಪ್ರಪಂಚಭಾವ; ಅಲೆಗಳು ಬೇರೆಬೇರೆಯಾಗಿ ಕಂಡುಕೊಂಡು ದಡದತ್ತ ಬರುವುದೇ ಜೀವಭಾವ.

ಇದು ಸಾಮಾನ್ಯ ಮನುಷ್ಯರಲ್ಲಿ ಬದುಕಿನ ಬಗೆ. ಅವಧೂತ ರಾದರೋ ಜೀವಭಾವ, ಪ್ರಪಂಚಭಾವಗಳಲ್ಲಿ ಮರುಳಾಗದೆ, ಆತ್ಮದಲ್ಲೇ ನೆಲೆನಿಲ್ಲುವರು. ಅವರು ಜೀವಭಾವ, ಪ್ರಪಂಚಭಾವಗಳನ್ನು

ಕೈಬಿಡುವವರು ಎಂದೇನೂ ಅಲ್ಲ. ಆದರೆ ಅವರು ಅವನ್ನು ಗಟ್ಟಿಯಾಗಿ ಹಿಡಿಯುವುದಿಲ್ಲ. ಜೀವವೇ ದಿಟವಾದುದು. ಪ್ರಪಂಚವೇ ದೊಡ್ಡದು, ಜೀವ-ಪ್ರಪಂಚಗಳಿಗೆ ನಂಟಿರುವುದೇ ಪುರುಷಾರ್ಥ ಎಂಬ ಭ್ರಮೆಯೇನು ಅವರಿಗಿರುವುದಿಲ್ಲ.

ವ್ಯವಹಾರಕ್ಕೆ ಜೀವ ಬೇಕು, ವ್ಯಾಪಾರಕ್ಕೆ ಪ್ರಪಂಚ ಬೇಕು. ಆದರೆ ಅದೇ ಆತ್ಮದ ಸಹಜಸ್ಥಿತಿ ಎಂದೇನೂ ಅಲ್ಲ. ಅಲೆಗಳೇ ಸಮುದ್ರದ ಸಹಜಸ್ಥಿತಿ ಎನ್ನಲಾದೀತೆ? ಗಾಳಿಯಿದ್ದರೆ ಅಲೆಯೇಳುತ್ತದೆ. ಜೀವಭಾವವಿದ್ದರೆ ವ್ಯವಹಾರ, ಪ್ರಪಂಚಭಾವವಿದ್ದರೆ ವ್ಯಾಪಾರ. ಆತ್ಮವನ್ನು ಎರಡರಿಂದಲೂ ನಿಶ್ಚಯಿಸುವುದಾಗದು. ಅವಧೂತರು ಆತ್ಮದ ಸಹಜ ನೆಲೆಯಲ್ಲಿರುವವರು. ಅವರು ಜೀವಭಾವದಿಂದಿದ್ದರೂ, ಪ್ರಪಂಚಭಾವವನ್ನು ಹಿಡಿದಂತೆ ತೋರಿದರೂ ಸಮುದ್ರದಲ್ಲಿ ಅಲೆಗಳೆದ್ದಾಗ, ಸಮುದ್ರವು ಅಲೆಗಳನ್ನು ನೋಡುತ್ತಿರುವಂತೆ ಅಷ್ಟೆ. ಇದನ್ನೇ ಸಾಕ್ಷಿಭಾವ ಎಂದು ಹೇಳುತ್ತಾರೆ. ಅವಧೂತರು ಲೋಕ ಸಾಕ್ಷಿಗಳು, ಲೌಕಿಕರಲ್ಲ. ಅವರದ್ದು ಲೋಕದೃಷ್ಟಿಯಲ್ಲ, ಆತ್ಮದೃಷ್ಟಿ.

ಅವಧೂತರಿಗೆ ನಮಗಿರುವಂತೆ ಪ್ರಪಂಚವೇ ಸ್ವತಂತ್ರವಾಗಿ ಸತ್ಯ ಎಂಬ ಭಾವನೆಯಾಗಲಿ, ಅದೇ ದೊಡ್ಡದು ಅದರಲ್ಲೇ ಸುಖವನ್ನು ಕಾಣಬೇಕು ಎಂಬ ತವಕವಾಗಲಿ, ಪ್ರಪಂಚದಲ್ಲೇ ಸುಖವಿರುವುದು ಎಂಬ ಭ್ರಾಂತಿಯಾಗಲಿ, ಪ್ರಪಂಚದಲ್ಲಿ ತನ್ನ ಕರ್ತವ್ಯವಿದೆ (ದೇಹವನ್ನು ಚೆನ್ನಾಗಿ ನೋಡಿಕೊಳ್ಳುವುದು, ಹೆಂಡಿರುಮಕ್ಕಳನ್ನು ಕಾಪಾಡುವುದು, ವೃತ್ತಿಯಲ್ಲಿ ಕುಶಲತೆಯನ್ನು ಪಡೆದುಕೊಳ್ಳುವುದು, ಯಶಸ್ಸನ್ನು ಗಳಿಸಿಕೊಳ್ಳುವುದು, ಸಮಾಜಸೇವೆ ಮಾಡುವುದು, ಲೋಕೋದ್ಧಾರಕ್ಕೆ ಶ್ರಮಿಸುವುದು ಮೊದಲಾದುವು) ಎಂಬ ಎಣಿಕೆಯಾಗಲಿ ಇರುವುದಿಲ್ಲ. ನಮಗೆ ಅವೆಲ್ಲವೂ ಇವೆಯಾಗಿ ಸುಖ-ದುಃಖಗಳ ದ್ವಂದ್ವದ ಅನುಭವ,

ಸಂಸಾರದ ಕಟಪಟೆ. ಅವೆಲ್ಲವನ್ನೂ ಕಿತ್ತೊಗೆದಿದ್ದಾರಾಗಿ, ಕೈಬಿಟ್ಟು ದೂರ ಬಿಸಾಡಿದ್ದಾರಾಗಿ ಅವರು ಅವಧೂತರು. ಅವಧೂತರೆಂಬ ಮಾತಿನ ಅರ್ಥ ಇದೇ.

ಪ್ರಪಂಚವು ತನ್ನಿಂದಲೇ ಎದ್ದುಬಂದದ್ದು (ಸಮುದ್ರದಿಂದ ಅಲೆಯೇಳುವಂತೆ), ತಾನೇ (ಎಂದರೆ ಆತ್ಮವೇ) ಎಲ್ಲಕ್ಕೂ ಆಸರೆ, ತಾನೇ ಎಲ್ಲವೂ, ತನ್ನಲ್ಲೇ ಆನಂದವಿರುವುದು, ತನಗೆ ಯಾವ ಹೊಣೆಗಾರಿಕೆಯೂ ಇರದು, ಕರ್ತವ್ಯವಿರದು, ಯಾತರ ಹಂಗೂ ಇರದು; ತನ್ನಷ್ಟಕ್ಕೆ ತಾನು ಪರಿಪೂರ್ಣ, ಸ್ವತಂತ್ರ, ಸುಖರೂಪಿ. ಇದು ಅವಧೂತನ ನಿಲುವು. ಆದ್ದರಿಂದ ಅವನು ಲೋಕವಿಲಕ್ಷಣ.

ಎಳೆಯ ಮಗುವಿನಂತೆ, ಹುಚ್ಚನಂತೆ, ಪಿಶಾಚದಂತೆ ಇರುವವನು ಎಂಬ ಅವಧೂತರ ವರ್ಣನೆಯಿದೆಯಷ್ಟೆ (ಬಾಲೋನ್ಮತ್ತ ಪಿಶಾಚವತ್). ದತ್ತಾತ್ರೇಯಮಂತ್ರದಲ್ಲೂ (ಬಾಲೋನ್ಮತ್ತವೇಷಾಯ ದಿಗಂಬರಾಯ) ಎಂಬ ಒಕ್ಕಣೆಯೇ ಇದೆ. ಅದು ನಮ್ಮ ಅನಿಸಿಕೆ. ಅವರು ನಮಗೆ ಕಾಣಿಸುವುದು ಹಾಗೆ. ನಾವು ವ್ಯವಹಾರದಲ್ಲಿರುವಾಗ ವ್ಯವಹಾರದ ನೆಲೆಯಲ್ಲೇ ಇರುವೆವು; ನಮ್ಮ ಉಡುಗೆ-ತೊಡುಗೆ, ನಡೆ-ನುಡಿ, ಗತ್ತು-ಗುರುತು, ಮಾತು-ಕತೆ, ಆಟ-ಪಾಠ ಎಲ್ಲವೂ ಸಂದರ್ಭಕ್ಕೆ ತಕ್ಕಂತೆ ಇರುತ್ತವೆ. ಅವಧೂತರಾದರೆ ಹಾಗಲ್ಲ. ಅವರು ವ್ಯವಹಾರದಲ್ಲಿರುವಾಗಲೂ ಪರಮಾರ್ಥದ ನೆಲೆಯಲ್ಲೇ ಇರುವರು; ಆತ್ಮಾನಂದದ ಸ್ಥಿತಿಯಲ್ಲೇ ಎಲ್ಲ ಕೆಲಸದಲ್ಲೂ ತೊಡಗುವರು. ಅವರಿರುವುದು ಪ್ರಪಂಚದಲ್ಲಲ್ಲ; ತಮ್ಮಲ್ಲೇ ಇರುವರು ಅವರು. ನಾವಾದರೆ ನಮ್ಮಲ್ಲಿ ನಾವು ಇರುವುದೇ ಇಲ್ಲ; ಹೊರಗೇ ನಾವಿರುವುದು. ಇದು ಅವಧೂತರ ಲೋಕವೈಲಕ್ಷಣ್ಯ.

# ೨. ಅವಧೂತೋಪನಿಷತ್ತು

ನೂರೆಂಟು ಉಪನಿಷತ್ತುಗಳ ಎಣಿಕೆಯಲ್ಲಿ ಅವಧೂತ ಉಪನಿಷತ್ತು ಎಂಬುದೇ ಒಂದಿದೆ. ಸಾಂಕೃತಿಯೆನ್ನುವವನು ದತ್ತಾತ್ರೇಯರನ್ನು ''ಅವಧೂತನು ಯಾರು? ಅವನು ಹೇಗಿರುತ್ತಾನೆ? ಅವನನ್ನು ಗುರುತಿಸುವುದು ಹೇಗೆ?'' ಎಂದು ಪ್ರಶ್ನಿಸುತ್ತಾನೆ. ಅವಧೂತರಾದರೂ ಕರುಣಾಳುವಾದ ದತ್ತಾತ್ರೇಯರು ಈ ಪ್ರಶ್ನೆಗಳಿಗೆ ಉತ್ತರ ಹೇಳುತ್ತಾರೆ. ಇಪ್ಪತ್ತಾರು ಮಂತ್ರಗಳಿರುವ ಈ ಉಪನಿಷತ್ತಿನಲ್ಲಿ ಅವಧೂತನ ಆಂತರಿಕಸ್ಥಿತಿಯನ್ನು ಚೆನ್ನಾಗಿ ವಿವರಿಸಲಾಗಿದೆ. ಉಪನಿಷತ್ತಿನ ಪೂರ್ಣಪಾಠವನ್ನು ಇಲ್ಲಿ ಕೊಟ್ಟು ಅದರ ಭಾವಾನುವಾದವನ್ನೂ ಕಾಣಿಸಲಾಗಿದೆ; ಸ್ವಲ್ಪ ವಿವರಣೆಯನ್ನು ಒದಗಿಸಲಾಗಿದೆ.

ಓಂ ॥ ಅಥ ಹ ಸಾಂಕೃತಿರ್ಭಗವಂತಮವಧೂತಂ ದತ್ತಾತ್ರೇಯಂ ಪರಿಸಮೇತ್ಯ ಪಪ್ರಚ್ಛ – 'ಭಗವನ್ ಕೋಽವಧೂತಸ್ತಸ್ಯ ಕಾ ಸ್ಥಿತಿಃ ಕಿಂ ಲಕ್ಷ್ಮ ಕಿಂ ಸಂಸರಣಂ' ಇತಿ ।

**ಭಾವಾನುವಾದ :-** ಸಾಂಕೃತಿಯು ಭಗವಂತನೂ ಅವಧೂತನೂ ಆದ ದತ್ತಾತ್ರೇಯನ ಬಳಿಗೆ ಬಂದು ಕೇಳುವನು– ''ಪೂಜ್ಯರೇ, ಅವಧೂತನೆನ್ನುವವನು ಯಾವನು? ಅವನ ಸ್ಥಿತಿ ಯಾವುದು? ಅವನ ಲಕ್ಷಣಗಳೇನು? ಮತ್ತು ಅವರು ಹಿಡಿಯುವ ದಾರಿ ಯಾವುದು?' ಎಂದು.

**ವಿವರಣೆ :-** ಅವಧೂತನು ಮನುಷ್ಯನೇ ಆದರೂ ಎಲ್ಲ ಮನುಷ್ಯರಂತಲ್ಲ ಅವನು. ಅವನು ಲೋಕವಿಲಕ್ಷಣ. ಹೀಗಾಗಿ ಅವನನ್ನು ಕುರಿತಂತೆ ಜನರಿಗೆ ತಿಳಿಯುವ ಕುತೂಹಲ ಇರುತ್ತದೆ.

ಅವನನ್ನು ಕಂಡು ಬೆರಗಾಗುತ್ತಾರೆ, ಬೆದರುತ್ತಾರೆ. ಆದರೆ ಅವನಲ್ಲಿ ಒಂದು ಆಕರ್ಷಣೆಯೂ ಇದೆ. ಅವನಿಂದ ಯಾರೂ ಓಡಿಹೋಗಲಾರರು. ಅವನ ಮಾತುಕತೆಗಳು, ನಡೆನುಡಿಗಳು ವಿಚಿತ್ರವಾಗಿದ್ದು, ಸ್ವಾರಸ್ಯದಿಂದ ಕೂಡಿರುತ್ತವೆ. ಇವನಿರುವ ಬಗೆಯೇ ವಿಶಿಷ್ಟವಾದುದು; ಅವನ ಬದುಕೇ ಅದ್ಭುತವಾದುದು. ಈ ಸೆಳೆತದಿಂದ ಸಾಂಕೃತಿಯು ದತ್ತಾತ್ರೇಯನ ಬಳಿಗೆ ಬರುತ್ತಾನೆ. ದತ್ತಾತ್ರೇಯನೇ ಅವಧೂತ; ಅವಧೂತರ ಗುರು ಅವನು. ಅವನಲ್ಲದೆ ಅವಧೂತನ ವಿಚಾರ ಬೇರೆ ಯಾರು ತಿಳಿಸಿಯಾರು? ಅವಧೂತರ ವಿಚಾರ ಅವಧೂತರಿಗೇ ತಿಳಿಯುವುದು; ಅವಧೂತರಲ್ಲದವರಿಗೆ ತಿಳಿಯಲಾರದು. ಅವಧೂತರ ಮಾತಿನಿಂದಲೇ ಅವರ ಮನೋವೃತ್ತಿ ಪ್ರಕಟವಾದೀತು; ಅವರ ಮನಸ್ಸಿನ ನೆಲೆಯನ್ನು ಅರಿತುಕೊಳ್ಳಲು ಬೇರೆ ದಾರಿಯಿದೆಯೇ ?

ಯಾವ ಮನುಷ್ಯ ಅವಧೂತನೆನಿಸಿಕೊಳ್ಳಬಹುದು? ಅವನ ಹೊರಗಣ ನಡೆ-ನುಡಿಗಳು ಹೇಗಿರುತ್ತವೆ? ಇದು ಅವನ ಸ್ಥಿತಿಯನ್ನು ಕುರಿತ ಪ್ರಶ್ನೆ. ಸ್ಥಿತಿಯೆಂದರೆ ಇರುವ ಬಗೆ, ನೆಲೆ. ಹೊರಗೆ ಹೇಗೆ ಇರುತ್ತಾನೆ ? ಒಳಗೆ ಹೇಗಿರುತ್ತಾನೆ ? ಅವನ ಶರೀರ, ವ್ಯವಹಾರ, ನೋಟ, ನುಡಿ, ಮನೋವೃತ್ತಿ ಇವೆಲ್ಲ ಯಾವ ಬಗೆಯವು ? ಮತ್ತೆ, ಇತರರು ಅವಧೂತನನ್ನು ಕಂಡುಕೊಳ್ಳಲು, ಗುರುತಿಸಲು, ಯಾವ ಯಾವ ಲಕ್ಷಣಗಳಿರುತ್ತವೆ ? ಬೇರೆಯರಿಂದ ಬೇರ್ಪಡಿಸಲು ಇವನಲ್ಲಿ ನಾವು ಕಂಡುಕೊಳ್ಳುವ ವಿವರಗಳೇನು? ಇವನು ಸಾಮಾನ್ಯ ಮನುಷ್ಯನಲ್ಲ, ಮಹಾತ್ಮ, ಮಹಾಪುರುಷ ಎಂದು ಗುರುತಿಸುವುದಾದರೂ ಹೇಗೆ ?

ಸಂಸರಣದಿಂದ ಸಂಸಾರ. ಸಂಸರಣವೆಂದರೆ ಓಡಿಯಾಡುವುದು, ಹರಿದಾಡುವುದು, ಒಂದು ನೆಲೆಯಿಂದ ಇನ್ನೊಂದು ನೆಲೆಗೆ

ಜಾರುವುದು. ನಾವೆಲ್ಲ ಸಂಸಾರದಲ್ಲಿದ್ದುಕೊಂಡು ಹುಟ್ಟಿನಿಂದ ಸಾವಿಗೆ ಸರಿಯುವೆವು. ಅವಧೂತ ಹೀಗೆ ಸಂಸಾರಿಯಲ್ಲ. ಆದರೂ ನಮ್ಮಂತೆಯೇ ದೇಹದಲ್ಲಿ ಜೀವಭಾವದಿಂದ ಇರುವವನಷ್ಟೆ? ಅವನು ಓಡಿಯಾಡುವ ಬಗೆ ಯಾವುದು ? ಅವನು ಹಿಡಿಯುವ ದಾರಿ ಯಾವುದು ? ವ್ಯವಹಾರದಲ್ಲಿದ್ದಂತೆ ಕಂಡರೂ ದಿಟವಾಗಿ ನಮ್ಮಂತೆ ವ್ಯವಹಾರದ ನೆಲೆಯಲ್ಲೇ ಇರುವನೋ, ಬೇರೊಂದು ನೆಲೆಯಲ್ಲಿದ್ದು ಕೊಂಡು ವ್ಯವಹರಿಸುವನೋ? ನಮ್ಮಂತೆ ಅವನಿಗೂ ಪ್ರಪಂಚ ಗಟ್ಟಿಯಾಗಿರುವುದೋ ಅಥವಾ ಟೊಳ್ಳಾಗಿಬಿಟ್ಟಿರುವುದೋ ?

ಎಲ್ಲರ ಕುತೂಹಲವನ್ನು ಪ್ರತಿನಿಧಿಸಿ ಇರುವುದು ಸಾಂಕೃತಿಯ ಕುತೂಹಲ. ಆದರೆ ಇದು ಕೇವಲ ಕುತೂಹಲವೂ ಅಲ್ಲ. ಸಾಂಕೃತಿಯು ಸಾಧಕ, ಸಿದ್ಧನಾದವನು. ತನ್ನ ಸಾಧನೆಗೆ ನೆರವಾಗುವಂಥ ವಿವರಗಳನ್ನು ಪಡೆದುಕೊಳ್ಳುವುದು ಅವನ ಉದ್ದೇಶ. ಎಲ್ಲ ಅವಧೂತರನ್ನೂ ಪ್ರತಿ ನಿಧಿಸುವವನು ದತ್ತಾತ್ರೇಯ. ಅವನಲ್ಲದೆ ಬೇರೆ ಯಾರು ಅವಧೂತರ ಚರ್ಯೆಯನ್ನು ವಿವರಿಸಿಯಾರು ?

**ತಂ ಹೋವಾಚ - ಭಗವೋ ದತ್ತಾತ್ರೇಯಃ ಪರಮಕಾರುಣಿಕಃ ॥**

**ಅಕ್ಷರತ್ವಾದ್ವರೇಣ್ಯತ್ವಾದ್ಧೂತಸಂಸಾರಬಂಧನಾತ್ ।**
**ತತ್ತ್ವಮಸ್ಯಾದಿಲಕ್ಷ್ಯತ್ವಾದವಧೂತ ಇತೀರ್ಯತೇ ॥ ೧ ॥**

**ಭಾವಾನುವಾದ :-** ಸಾಂಕೃತಿಯನ್ನು ಕುರಿತು ಕರುಣಾಳುಗಳಾದ ಭಗವಾನ್ ದತ್ತಾತ್ರೇಯರು ಹೇಳುತ್ತಾರೆ -

ಅವಧೂತ ಎಂಬ ಮಾತಿನಲ್ಲಿ ನಾಲ್ಕು ವರ್ಣಗಳು ಅಥವಾ ಅಕ್ಷರಗಳು ಇವೆ. 'ಅ' ಎನ್ನುವ ಮೊದಲ ಅಕ್ಷರದಿಂದ 'ನಾಶವಿಲ್ಲದೆ ಇರುವ ನೆಲೆ' ಎಂದರ್ಥವಾಗುತ್ತದೆ. ಎರಡನೆಯದಾದ 'ವ' ಎಂದರೆ

'ವರೇಣ್ಯ', ಶ್ರೇಷ್ಠನಾದವನು; ಎಲ್ಲರಿಗಿಂತ ಮಿಗಿಲಾದವನು. ಮೂರನೆಯ ಅಕ್ಷರ 'ಧೂ', ಎಂದರೆ 'ಒದರುವುದು', 'ಝಾಡಿಸು ವುದು', ಸಂಸಾರದ ಕಟ್ಟುಗಳನ್ನು ಒದರಿಹಾಕುವವನು, ಕಿತ್ತೊಗೆದಿರು ವವನು. ಕಡೆಯ ಅಕ್ಷರವಾದ 'ತ' ಎಂಬುದು ಉಪನಿಷತ್ತಿನ ಮಹಾವಾಕ್ಯಗಳಾದ 'ತತ್ತ್ವಮಸಿ' ಮೊದಲಾದುವುಗಳಿಗೆ ಹೊಂದಿಕೊಳ್ಳು ವವನು. ಅವಧೂತನು ಈ ನಾಲ್ಕು ಗುಣಗಳುಳ್ಳವನು.

**ವಿವರಣೆ :-** ಸಂಸ್ಕೃತದ ಮಾತುಗಳಿಗೆ ಧಾತ್ವರ್ಥವನ್ನು ಹಿಡಿದು ಅರ್ಥವನ್ನು ನಿಶ್ಚಯಿಸುವುದು ಕ್ರಮ. ಅವಧೂತ ಎಂಬ ಮಾತಿಗೆ 'ಧೂ' ಎನ್ನುವುದು ಧಾತು. ಇದಕ್ಕೆ ಬಿಸಾಡುವುದು, ದೂರ ನೂಕಿಬಿಡುವುದು, ಒದರಿಹಾಕುವುದು, ಝಾಡಿಸುವುದು, ತೊಳೆದು ಬಿಡುವುದು ಎಂಬರ್ಥಗಳಿವೆ. ಎಲ್ಲ ಕರ್ಮಗಳನ್ನು, ಕಟ್ಟುಗಳನ್ನು, ಕಟ್ಟಳೆಗಳನ್ನು ತನ್ನಿಂದ ಜಾರಿಸಿಕೊಂಡವನು ಅವಧೂತ. ಇಲ್ಲಿ ಧಾತುವಿನಿಂದ ನಿಷ್ಪನ್ನವಾದ ಅರ್ಥವನ್ನು ಹಿಡಿಯದೆ, ವರ್ಣಾನು ಗುಣವಾದ ಅರ್ಥವನ್ನು ಹಿಡಿದಿದ್ದಾರೆ. ಅವಧೂತ ಎಂಬ ನಾಲ್ಕು ವರ್ಣಗಳಿಂದಾದ ಪದದಿಂದ ನಾಲ್ಕು ಅರ್ಥಗಳು ಹೊರಡುತ್ತವೆ.

೧. ಕ್ಷರಸ್ವಭಾವವಿಲ್ಲದ್ದು, ಎಂದರೆ ನಾಶವಾಗದಿರುವುದು ಅಕ್ಷರ ('ಅ'). ನಾಶವಾಗದೆ ಇರುವ ತತ್ತ್ವ ಬ್ರಹ್ಮವೇ; ಉಳಿದೆಲ್ಲವೂ ನಶ್ವರಸ್ವಭಾವದವು. ಅವಧೂತನಿಗೆ ಇದೊಂದೇ ದಿಟವಾದುದು; ಪ್ರಸಕ್ತವಾದುದು. ಇನ್ನು ಯಾವುದೂ ಅವನ ಎಣಿಕೆಗೆ ಬಾರದು.

೨. ವರೇಣ್ಯ ಎಂಬ ಮಾತಿನ ಮೊದಲಕ್ಷರ 'ವ'; ಅವಧೂತ ಎಂಬ ಪದದಲ್ಲಿ ಎರಡನೆಯ ವರ್ಣ. ಈ ಮಾತಿಗೆ ಎಲ್ಲಕ್ಕಿಂತ, ಎಲ್ಲರಿಗಿಂತ ವರಣೀಯ, ಅಪೇಕ್ಷಣೀಯ. ಮನುಷ್ಯರಲ್ಲೆಲ್ಲ

ಶ್ರೇಷ್ಠನಾದವನು. ಇವನಿಗಿರುವ ತತ್ತ್ವದೃಷ್ಟಿ, ಯಥಾರ್ಥಜ್ಞಾನ ಬೇರೆ ಯಾರಿಗೂ ಇರದು. ಮನುಷ್ಯರಲ್ಲೆಲ್ಲ ಮಿಗಿಲಾದವನು ಇವನು.

೩. 'ಧೂ' ಎಂಬ ವರ್ಣದ ಅರ್ಥವನ್ನು ಆಗಲೇ ಹೇಳಿದೆ. ಅದೇ ಧಾತುವೂ ಹೌದು.

೪. 'ತ' ಎನ್ನುವುದು 'ತತ್ತ್ವಮಸಿ' ಎಂಬ ವೇದಾಂತ ವಾಕ್ಯದ ಮೊದಲ ವರ್ಣ.

'ತತ್ತ್ವಮಸಿ' (ಬ್ರಹ್ಮವೇ ನೀನಾಗಿರುವೆ; ತತ್ಪದಾರ್ಥ ಬ್ರಹ್ಮ; ತ್ವಂಪದಾರ್ಥ ಜೀವ. ಜೀವವು ದೇಹಪರಿಚ್ಛಿನ್ನವಾದುದಲ್ಲ, ಬ್ರಹ್ಮಸ್ವರೂಪದ್ದು ಎಂದು ತಾತ್ಪರ್ಯ), 'ಅಹಂ ಬ್ರಹ್ಮಾಸ್ಮಿ' (ನಾನೆಂಬುದರ ಸಾರ ಬ್ರಹ್ಮವೆಂದೇ; ಮೇಲಿನಂತೆ ಅಹಂ ಎನ್ನುವುದು ಜೀವಭಾವ; ಬ್ರಹ್ಮವೆಂಬುದು ಜೀವವಿಭಾಗವಿಲ್ಲದ ಪರತತ್ತ್ವ. ದಿಟವಾಗಿ ಜೀವಭಾವವು ಬ್ರಹ್ಮದ ಅಧಿಷ್ಠಾನದ ಮೇಲೇ ಇರುವುದು) ಎಂಬೆರಡು ವೇದಾಂತವಾಕ್ಯಗಳಲ್ಲಿ ಮೊದಲನೆಯದು ಉಪದೇಶಪರವಾದುದು, ಎರಡನೆಯದು ಅನುಭವಪರವಾದುದು. ಅನುಭವದ ಆಧಾರದ ಮೇಲೆ ಉಪದೇಶವಿರುವುದಾದರೂ ಲೋಕಕ್ಕೆ ಪ್ರಸಕ್ತವಾದುದು ಉಪದೇಶ ಎಂಬ ಕಾರಣದಿಂದ 'ತತ್ತ್ವಮಸಿ'ಗೆ ಆದ್ಯತೆ. 'ತತ್ತ್ವಮಸಿ' ಎಂಬ ಉಪದೇಶವು ಯಾವುದನ್ನು ಕುರಿತು ಇರುವುದೋ ಯಾವುದನ್ನು ತಿಳಿಯಹೇಳುವುದೋ ಅದು (ಬ್ರಹ್ಮ) ಲಕ್ಷ್ಯ. ಅವಧೂತನು ವೇದಾಂತವಾಕ್ಯಗಳಿಗೆ ಲಕ್ಷ್ಯನಾದವನೆ. ವೇದಾಂತ ವಾಕ್ಯಗಳನ್ನು ಕೇಳಿ ತಿಳಿದುಕೊಂಡು ಯಾರೂ ಅವಧೂತರಾಗುವುದಿಲ್ಲ; ಅವಧೂತರನ್ನು ನೋಡಿ ವೇದಾಂತವಾಕ್ಯಗಳು ಮೈದಳೆಯುತ್ತವೆ. ಇದು 'ಲಕ್ಷ್ಯ'ವೆಂಬ ಒಕ್ಕಣೆಯ ಸ್ವಾರಸ್ಯ.

ಸಂಸಾರವೆಂಬುದು ಬಂಧನ; ಅದನ್ನು ಕಿತ್ತೊಗೆದವನು ಅವಧೂತ ಎನ್ನುವ ಮಾತು ಇಲ್ಲಿ ಬಂದಿದೆ. ಸಂಸಾರವೆಂದರೆ ಜೀವವು ಪ್ರಪಂಚ ದಲ್ಲಿ ಅಲೆದಾಡುವುದು. ಇದಕ್ಕೆ ಕಾರಣ ಹೊರಗಣ ಜಗತ್ತಲ್ಲ; ಒಳಗಣ ಆತ್ಮವೂ ಅಲ್ಲ. ಜಗತ್ತಿನ ಯಾವ ವಿವರವಾಗಲಿ ಪ್ರಸಂಗವಾಗಲಿ ಸಂದರ್ಭವಾಗಲಿ ನಮ್ಮನ್ನು ಕಟ್ಟಿಹಾಕುವುದಿಲ್ಲ. ಅವು ಹೇಳಿ ಕೇಳಿ ಜಡ.

ಹಣಕ್ಕೆ ನಮ್ಮನ್ನು ಸೇರಬೇಕು, ನಮ್ಮಿಂದ ದೂರವಾಗಬೇಕು ಎಂಬ ಬಯಕೆಯೇನು ಇರುವುದಿಲ್ಲ. ಹಣದ ಬಯಕೆ ಇರುವುದು ನಮ್ಮಲ್ಲಿ. ಹಣವು ದಿಟವಾದುದು, ಗಟ್ಟಿಯಾದುದು, ಅದರಿಂದ ಸುಖವಿದೆ, ಅದನ್ನು ಗಳಿಸಿಕೊಳ್ಳಬೇಕು, ಅದರಿಂದ ನಮಗೆ ಮರ್ಯಾದೆ ಒದಗುತ್ತದೆ ಎಂಬ ಕಲ್ಪನೆಗಳು ನಮ್ಮ ಮನಸ್ಸಿನಲ್ಲಿದ್ದರೆ ಹಣಕ್ಕೊಂದು ಆಕರ್ಷಣೆ. ಈ ಕಲ್ಪನೆಗಳು ನಮ್ಮ ಮನಸ್ಸಿನಲ್ಲಿರದಿದ್ದರೆ, ಹಣಕ್ಕೆ ಯಾವ ಬೆಲೆ ? ಈ ಕಲ್ಪನೆಗಳಿರದಿದ್ದವರು ಹಣದ ಬೆನ್ನಟ್ಟಿ ಹೋಗುವುದೂ ಇಲ್ಲವಷ್ಟೆ? ಆದ್ದರಿಂದ, ಹಣ ಬಂಧನವಲ್ಲ; ಹಣದ ಬಯಕೆ ಬಂಧನ.

ಹೀಗೆಯೇ, ಪ್ರಪಂಚದ ಎಲ್ಲ ವಿವರಗಳೂ ತಮ್ಮಷ್ಟಕ್ಕೆ ತಾವಾಗಿ ಬಂಧನವಲ್ಲ; ನಮ್ಮ ಒಲುಮೆ ಮುನಿಸುಗಳಿಂದ ಅವು ಬಂಧನಗಳಾಗಿ ಮಾರ್ಪಡುವುವು. ಸಂಸಾರವೆಂಬುದು ಪ್ರಪಂಚವಲ್ಲ. ಪ್ರಪಂಚವು ಸತ್ಯವಾದುದು. ಮಹತ್ತ್ವವುಳ್ಳದ್ದು, ಸುಖವನ್ನು ನೀಡಬಲ್ಲದ್ದು, ಅದರಲ್ಲಿ ಆಕರ್ಷಣೆ ಇದೆ ಎಂದು ಕಂಡುಕೊಳ್ಳುವುದು ಸಂಸಾರ. ಇದನ್ನೇ ಪ್ರಪಂಚಭಾವವೆನ್ನುತ್ತಾರೆ. ಇಲ್ಲಿ ಪ್ರಪಂಚವು ವಸ್ತುಸ್ಥಿತಿಯಲ್ಲ, ನಮ್ಮಿಂದ ಕಲ್ಪಿತವಾದದ್ದು; ನಮ್ಮ ಭಾವನೆಯಿಂದ ಮೈದಳೆದದ್ದು, ಸಮುದ್ರದ ನೀರಿನಿಂದ ಅಲೆಗಳು ಎದ್ದಂತೆ. ಬಂಧಕವಾಗುವುದು ಭಾವನೆ. ಬಂಧನವಿಲ್ಲದವನು ಅವಧೂತ; ಎಂದರೆ ಭಾವನೆಗಳನ್ನು ಬಿಟ್ಟವನು ಎಂದೇ ಅರ್ಥ.

ಮತ್ತೆ, ಆತ್ಮಕ್ಕೆ ಬಂಧನದ ಸೊಲ್ಲೇ ಇರದು. ಆತ್ಮ ಹೇಳಿಕೇಳಿ ಆಕಾಶದಂತೆ ನಿರಾಕಾರ, ನಿರ್ಗುಣ, ನಿರ್ಲಿಪ್ತ, ವ್ಯಾಪಕ. ಅದನ್ನು ಬಿಟ್ಟು ಬೇರೊಂದು ತತ್ತ್ವವೇ ಇಲ್ಲವೆನ್ನುವಾಗ ಅದನ್ನು ಯಾವುದು ಬಂಧಿಸೀತು ? ಯಾವುದು ಬಿಡಿಸೀತು ? ದಿಟವಾಗಿ ಆತ್ಮವನ್ನು ಬಿಟ್ಟು ಜಗತ್ತು ಇರಲಾರದು, ಸಂಸಾರವೂ ಇರದು. ಸಮುದ್ರವನ್ನು ಬಿಟ್ಟು ಅಲೆಗಳು ಹೇಗಿದ್ದಾವು ? ಅಲೆಗಳು ಎದ್ದರೂ ಸಮುದ್ರವನ್ನು ಬಿಟ್ಟು ಅಲೆಗಳು ಹೇಗಿದ್ದಾವು ? ಅಲೆಗಳು ಎದ್ದರೂ ಸಮುದ್ರದಲ್ಲೇ ಅವುಗಳ ಇರವು. ಸಮುದ್ರವನ್ನೇನು ಕಟ್ಟಿಹಾಕಲಾರವು ಅವು, ಕೆಡಿಸಲಾರವು. ಜಗತ್ತು ಆತ್ಮದಿಂದಲೇ ಹೊರಬಂದುದು ಎನ್ನುವಾಗಲೂ ಆತ್ಮದಲ್ಲೇ ಇರುವುವು, ಆತ್ಮಕ್ಕೇ ಹಿಂದಿರುಗುವುವು ಎಂದು ತಾತ್ಪರ್ಯ. ಹೀಗಿರುವಾಗ ಜಗತ್ತು ಆತ್ಮವನ್ನು ಬಂಧಿಸುವುದಾದರೂ ಹೇಗೆ ?

ಆತ್ಮದ ಸ್ವಭಾವ ಬಂಧನಕ್ಕೊಳಗಾಗುವುದಲ್ಲ, ಜಗತ್ತಿನ ಸ್ವಭಾವ ಬಂಧನ ಮಾಡುವುದಲ್ಲ, ಮತ್ತೆ ಬಂಧನವೆಲ್ಲಿಂದ ಬಂದಿತು ? ಆತ್ಮವು ಜೀವವಾಗಿ ನಿಂತಾಗ, ಜಗತ್ತು ಪ್ರಪಂಚವಾಗಿ ತೋರಿಕೊಂಡಾಗ, ಸಂಸಾರವೆಂಬುದೊಂದು ವಿವರ ಮೈದಳೆಯಿತು. ಆತ್ಮವು ಜೀವವಾಗಿ ತೋರಿಕೊಳ್ಳುವುದು ಜೀವಭಾವ; ಜಗತ್ತು ಪ್ರಪಂಚವಾಗಿ ಕಾಣಿಸಿ ಕೊಳ್ಳುವುದು ಪ್ರಪಂಚಭಾವ. ತಾನು ತಿಳಿದುಕೊಳ್ಳುವವನು, ನೋಡುವವನು, ಕೆಲಸಮಾಡುವವನು, ಕೆಲಸದ ಪ್ರಯೋಜನವನ್ನು ಪಡೆದುಕೊಳ್ಳುವವನು, ಎಂದೆಲ್ಲ ಬಗೆಯುವುದು ಜೀವಭಾವ. ತಿಳಿದುಕೊಳ್ಳುವುದಿದೆ, ನೋಡುವುದಿದೆ, ಮಾಡುವುದಿದೆ, ಫಲವನ್ನು ಭವಿಸುವುದಿದೆ ಎಂದರೆ ಪ್ರಪಂಚಭಾವ. ಜೀವವೊಂದು ಕೊನೆ, ಪ್ರಪಂಚವಿನ್ನೊಂದು ಕೊನೆ; ಎರಡನ್ನೂ ಕೂಡಿಸಿಕೊಂಡರೆ ಅದು ಸಂಸಾರ. ಅದು ಜೀವವನ್ನು ಪ್ರಪಂಚದೊಂದಿಗೆ ಬಂಧಿಸುತ್ತದೆ. ಸಂಸಾರಬಂಧನವೆಂದರೆ ಇದು.

ಅವಧೂತನಿಗೆ ಜೀವಭಾವವೂ ಇರದು, ಪ್ರಪಂಚಭಾವ ಮೊದಲೇ ಇರದು. ಎಂದಮೇಲೆ ಸಂಸಾರದ ಸೊಲ್ಲೆಲ್ಲಿಯದು? ಸಂಸಾರಭಾವವೇ ಇರದು, ಎಂದಮೇಲೆ ಸಂಸಾರದ ಬಂಧನವೆಲ್ಲಿಯದು ? ಬಂಧನವೇ ಇರದಮೇಲೆ ಬಿಡುಗಡೆಯ ಮಾತೇಕೆ ? ಬಂಧನವನ್ನು ಕಿತ್ತೊಗೆದವನು ಅವಧೂತ; ಬಂಧನವೆಂದರೆ ಇಲ್ಲಿ ಜೀವಭಾವ, ಪ್ರಪಂಚಭಾವ. ಇವೆರಡನ್ನೂ ಬಿಟ್ಟವನು ಅವಧೂತ. ತಾನು ಜೀವವಲ್ಲ, ತನ್ನೊಂದಿಗೆ ಇರುವುದು ಪ್ರಪಂಚವಲ್ಲ. ತಾನು ಆತ್ಮ, ಇರುವುದೆಲ್ಲ ಆತ್ಮವೇ ಎಂದವನ ನಿಲುವು. ಅವನಿಗೆ ಬಂಧನವೂ ಇಲ್ಲ, ಮುಕ್ತಿಯೂ ಇಲ್ಲ. ಅವನಿಗೆ ವ್ಯವಹಾರವೂ ಒಂದೇ ಪರಮಾರ್ಥವೂ ಒಂದೇ. ವ್ಯವಹಾರದಲ್ಲೇ ಪರಮಾರ್ಥ; ಪರಮಾರ್ಥದಲ್ಲಿಯೇ ವ್ಯವಹಾರ.

**ಯೋ ವಿಲಂಘ್ಯಾಶ್ರಮಾನ್ವರ್ಣಾನಾತ್ಮನ್ಯೇವ ಸ್ಥಿತಃ ಸದಾ ।**
**ಅತಿವರ್ಣಾಶ್ರಮೀ ಯೋಗೀ ಅವಧೂತಃ ಸ ಕಥ್ಯತೇ ॥ ೨ ॥**

**ಭಾವಾನುವಾದ** :- ಅವಧೂತನು ಎಲ್ಲ ಆಶ್ರಮಗಳನ್ನೂ ವರ್ಣಗಳನ್ನೂ ದಾಟಿ ತನ್ನಲ್ಲಿಯೇ ತಾನು ಎಂದೂ ನೆಲೆಸಿರುವನು. ಅವನ ವರ್ಣವಾಗಲೀ ಆಶ್ರಮವಾಗಲಿ ಇತರ ವರ್ಣಗಳನ್ನೂ ಆಶ್ರಮಗಳನ್ನೂ ಮೀರಿರುವುದು. ಅವನು ಯೋಗಿ.

**ವಿವರಣೆ** :- ಸಾಮಾನ್ಯ ಜನರಿಗೆ ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ, ಸಂನ್ಯಾಸ ಎಂಬ ಆಶ್ರಮಗಳಿರುತ್ತವೆ; ಒಂದಲ್ಲ ಒಂದು ಆಶ್ರಮದಲ್ಲಿ ಯಾರಾದರೂ ಇರಲೇಬೇಕು. ಆಶ್ರಮಕ್ಕೆ ತಕ್ಕಂತೆ ಕಟ್ಟುಪಾಡುಗಳಿರುತ್ತವೆ, ಕರ್ತವ್ಯಗಳಿರುತ್ತವೆ. ಒಂದೊಂದು ಆಶ್ರಮವೂ ಬದುಕಿನಲ್ಲಿ ನಮಗೆ ಅಗತ್ಯವಾದ ನೆಲೆಗಳು, ಹಂತಗಳು, ಮೆಟ್ಟಿಲು ಗಳು. ಆಶ್ರಮ ಎಂಬ ಮಾತಿಗೆ ಎಲ್ಲಿ ಇದ್ದುಕೊಂಡು ದುಡಿಯಬೇಕೋ ಅದು ಎಂಬರ್ಥ. ಅವಧೂತನಿಗೆ ಆಶ್ರಮದ ಗೋಜಿಲ್ಲ, ಎಂದರೆ

ಅವನಿಗೆ ಯಾವ ಕಟ್ಟು ಕಟ್ಟಳೆಗಳೂ ಇಲ್ಲ, ಕರ್ತವ್ಯಗಳೂ ಇಲ್ಲ ಎಂದರ್ಥ. ಕೆಲವು ಅವಧೂತರು ಗೃಹಸ್ಥರಾಗಿರುವುದುಂಟು; ಆದರೆ ಅವರಿಗೆ ಗಾರ್ಹಸ್ಥ್ಯ ಧರ್ಮದ ಅಂಕೆ-ಆತಂಕಗಳಿರುವುದಿಲ್ಲ. ಹೆಂಡಿರು-ಮಕ್ಕಳೆಂಬ ನಂಟರು ಇಷ್ಟರೆಂಬ ಮೋಹವಾಗಲಿ, ಸಂಕುಚಿತ ದೃಷ್ಟಿಯಾಗಲಿ ಇರುವುದಿಲ್ಲ. ಸ್ವಕೀಯರು, ಪರರು ಎಂಬ ಎಣಿಕೆ ಅವರಿಗಿರದು. ಹಲವು ಅವಧೂತರು ಯತಿಗಳಂತೆ (ಸಂನ್ಯಾಸಿಗಳಂತೆ) ಕಾಣಿಸಿಕೊಳ್ಳುತ್ತಾರೆ. ಆದರೆ ಉಳಿದ ಸಂನ್ಯಾಸಿಗಳಂತಲ್ಲ ಅವರು; ಆಶ್ರಮಧರ್ಮ ಅವರನ್ನು ನಿರ್ಬಂಧಿಸುವುದಿಲ್ಲ. ಗೃಹಸ್ಥನಾಗಲಿ ಸಂನ್ಯಾಸಿಯಾಗಲಿ ಅವಧೂತನದು ಸ್ವೇಚ್ಛಾಚಾರವೇ.

ಹಾಗೆಯೇ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ವರ್ಣ ವ್ಯವಸ್ಥೆಯಾಗಲಿ ಅವಧೂತನ ಪಾಲಿಗೆ ಇರದು. ಇವೆಲ್ಲ ಸಾಮಾಜಿಕ ವ್ಯವಸ್ಥೆಯ, ಲೋಕಜೀವನದ ಪ್ರಕಾರಗಳು ; ಸಮುದಾಯಜೀವನದ ಧೋರಣೆಗಳು. ಲೋಕೋತ್ತರವಾದ ಸಿದ್ಧಿಯನ್ನು ಪಡೆದವನಿಗೆ ಇದರ ಎಣಿಕೆಯಿರದು. ಅವನು ಆತ್ಮನಿಷ್ಠನಾದುದರಿಂದ, ಆತ್ಮನಿಗೆ ವರ್ಣಾಶ್ರಮಗಳ ಸೋಂಕು ಇಲ್ಲದಿರುವುದರಿಂದ, ಅವನು 'ಅತಿ ವರ್ಣಾಶ್ರಮಿ'; ಸರ್ವಸಮಭಾವ ಅವನಲ್ಲಿ ಬೇರೂರಿರುತ್ತದೆ. ಎಲ್ಲ ಜೀವಿಗಳ ಹಿತವನ್ನೂ ಬಯಸುವ ಅವನಿಗೆ ಬ್ರಾಹ್ಮಣ, ಕ್ಷತ್ರಿಯ, ಗೃಹಸ್ಥ, ಯತಿ ಮೊದಲಾದ ಭೇದದೃಷ್ಟಿ ಇರುವುದು ಹೇಗೆ ? ತಾನೇ ಪರಿಸರದ ಬಂಧನಗಳನ್ನೆಲ್ಲ ದಾಟಿ, ಕುಟುಂಬದ ಕಟ್ಟುಪಾಡನ್ನು ಕೈಬಿಟ್ಟು, ದೇಹಾಭಿಮಾನವನ್ನೂ ಬದಿಗಿಟ್ಟು, ಆತ್ಮನಲ್ಲಿ ಆತ್ಮನಾಗಿ ಬಿಡಿಬೀಸಾಗಿ ನಿಂತವನು ಅವಧೂತ.

ಅಂಥವನಿಗೆ ಯಾವ ಕಟ್ಟುಪಾಡು? ಅವಧೂತನ ನೆಲೆ ಆತ್ಮದಲ್ಲಿ. ಆತ್ಮವಾದರೋ ಆಕಾಶದಂತೆ ನಿರ್ಗುಣ, ನಿರಾಕಾರ, ನಿರ್ಲಿಪ್ತ,

ನಿರ್ಮಲ, ವ್ಯಾಪಕ, ಏಕರೂಪ. ಆಶ್ರಮ, ವರ್ಣ ಮೊದಲಾದ ಕಟ್ಟುಪಾಡುಗಳು ಜೀವಕ್ಕೂ ಅನ್ವಯಿಸುವುದಿಲ್ಲ. ಜೀವಭಾವದ ವಿವರಗಳು ಅವು. ಜೀವವೆಂದರೆ ದೇಹ, ಇಂದ್ರಿಯ, ಮನಸ್ಸು, ಅಹಂಕಾರ, ಬುದ್ಧಿ ಈ ಉಪಾಧಿಗಳಿಂದ ವಿಶಿಷ್ಟವಾದುದು. ಈ ಉಪಾಧಿಗಳಿಂದಾಗಿ ಆತ್ಮವು ಜೀವವಾಗಿ ತೋರಿಕೊಳ್ಳುತ್ತದೆ. ಹೊರಗೆ ಮೈಚಾಚಿ ಪ್ರಪಂಚದೊಂದಿಗೆ ವ್ಯವಹರಿಸುವಾಗ ಜೀವಭಾವ. ವ್ಯವಹಾರಕ್ಕಾಗಿಯೇ ವರ್ಣ, ಆಶ್ರಮಗಳ ವ್ಯವಸ್ಥೆ. ವರ್ಣ, ಆಶ್ರಮಗಳ ಕಟ್ಟುಪಾಡಿನಲ್ಲಿ ನಿಂತವರಿಗೆ ದೇಹವಾಸನೆ, ಲೋಕವಾಸನೆ, ಶಾಸ್ತ್ರವಾಸನೆಗಳು ತಪ್ಪಿದ್ದಲ್ಲ; ದಾರೇಷಣ, ಪುತ್ರೇಷಣ, ವಿತ್ತೇಷಣಗಳೂ ತಪ್ಪಿದ್ದಲ್ಲ. ವಾಸನೆಗಳೊಂದಿಗೆ, ಈಷಣೆಗಳೊಂದಿಗೆ ಜೀವವು ಕೂಡಿಕೊಂಡು ಇರುವಾಗ ಪ್ರಪಂಚಭಾವ ಇದ್ದೇ ಇರುತ್ತದೆ.

ಅವಧೂತನು ಜೀವಭಾವವನ್ನೂ ಪ್ರಪಂಚಭಾವವನ್ನೂ ಬಿಟ್ಟು ಬಿಡಿಬೀಸಾಗಿ ನಿಂತಿರುವವನು. ಅವನಿಗೆ ಯಾವ ಅಂಕೆ-ಆತಂಕಗಳೂ ಇಲ್ಲ. ಆದರೆ ಅವನು ನೆಲೆಯಿಲ್ಲದವನಲ್ಲ, ಅತಂತ್ರನಲ್ಲ. ಎಷ್ಟೋ ಮಂದಿ ವರ್ಣಾಶ್ರಮದ ಕಟ್ಟುಪಾಡುಗಳಿಲ್ಲದೆ ಬಿಡಿಬೀಸಾಗಿ ಬದುಕಿರುತ್ತಾರೆ, ಆದರೆ ಅವರಿಗೆ ಮತ್ತೆ ಯಾವ ನೆಲೆಯೂ ಇರುವುದಿಲ್ಲ. ಅವರ ಬದುಕು ಗಾಳಿಗೊಡ್ಡಿದ ಸೊಡರಿನಂತೆ, ನೀರಲ್ಲಿ ತೇಲಿ ಹರಿಯುವ ಸೋರೆ ಬುರುಡೆಯಂತೆ. ಅವಧೂತರು ಹೀಗಲ್ಲ. ಅವರು ತಮ್ಮಲ್ಲೇ (ಎಂದರೆ ಆತ್ಮದಲ್ಲೇ) ನೆಲೆನಿಂತಿರುವುದರಿಂದ, ಇದಕ್ಕಿಂತ ಉತ್ತಮವಾದ, ಸುಭದ್ರವಾದ ನೆಲೆ ಬೇರೊಂದಿಲ್ಲವಾದುದ ರಿಂದ, ಇದು ಸಹಜವೂ ಆದುದರಿಂದ, ಅವರು ವರ್ಣ, ಆಶ್ರಮ, ವೃತ್ತಿ, ಧರ್ಮ, ಕರ್ಮ ಮೊದಲಾದ ಯಾವ ಕೃತಕನೆಲೆಯನ್ನೂ ಎಷ್ಟು ಮಾತ್ರವೂ ಅವಲಂಬಿಸಲಾರರು. ಈ ನೆಲೆಗಳೆಲ್ಲ ಮನುಷ್ಯರಿಂದ ನಿರ್ಮಿತವಾದವು; ಕಾಲಕಾಲಕ್ಕೆ ವಿಕಾರವನ್ನು ಹೊಂದುವವು,

ದೇಶ-ನಿಮಿತ್ತಗಳಿಂದ ಅನರ್ಥಕಾರಿಗಳಾದುವು. ಇವೆಲ್ಲ ಸ್ಥಿರವೂ ಅಲ್ಲ, ಸುಖಕರವೂ ಅಲ್ಲ. ದಿಟವಾಗಿ ಬಂಧನಗಳೇ.

ಇಂಥ ಹೊರಗಣ ನೆಲೆಗಳನ್ನೆಲ್ಲ ಕೈಬಿಟ್ಟು ತನ್ನಲ್ಲೇ ತಾನು ನೆಲೆಸಿದ ಅವಧೂತನು ದಿಟವಾದ ಅರ್ಥದಲ್ಲಿ ಸ್ವಸ್ಥ (ತನ್ನಲ್ಲಿ ತಾನು ಇರುವವನು). ಅವನಿಗೆ ಬೇರೆ ಯಾವ ಅವಲಂಬನೆಯ, ಆಸರೆಯ ಅಗತ್ಯವೂ ಇರದು. ಜಡ್ಡಾಗಿರುವ ಮೈ ಸ್ವಸ್ಥವಲ್ಲ; ಅಸ್ವಸ್ಥ. ಅದಕ್ಕೆ ಮದ್ದು ಬೇಕು, ಚಿಕಿತ್ಸೆ ಬೇಕು, ಉಪಚಾರ ಬೇಕು, ಶುಶ್ರೂಷೆ ಬೇಕು. ಪಥ್ಯಾಹಾರ ಬೇಕು, ಇವೆಲ್ಲವನ್ನೂ ಅವಲಂಬಿಸಿರುವಾಗ ಅದು ಸ್ವ-ಸ್ಥ ಹೇಗೆ ? ನಾವೆಲ್ಲ ಈ ದೃಷ್ಟಿಯಿಂದ ಅಸ್ವಸ್ಥರೇ. ನಮ್ಮಲ್ಲಿ ನಾವು ನೆಮ್ಮದಿಯಿಂದ ಇರಲಾರೆವು. ನಮಗೆ ಮನೆ, ಮಡದಿ, ಮಠ, ವೃತ್ತಿ, ಧನ, ಧಾನ್ಯ, ಮಕ್ಕಳು ಮರಿ, ಧರ್ಮ, ಆಚಾರ, ವಿನೋದ ಮೊದಲಾದುವೆಲ್ಲ ಇದ್ದರೇ ನೆಮ್ಮದಿ. ಇವುಗಳಲ್ಲಿ ಯಾವುದು ಕೊರೆಯಾದರೂ ಆತಂಕವೇ, ಉದ್ವೇಗವೇ, ಭಯವೇ, ಶೋಕವೇ. ಅವಧೂತನಿಗೆ ಇದು ಯಾವುದರ ಗೊಂದಲವೂ ಇರದು. ತನ್ನಲ್ಲಿಯೇ ತಾನಿದ್ದುಕೊಂಡು ಹೊರಗಣ ನಂಟನ್ನು ಎಷ್ಟು ಮಾತ್ರಕ್ಕೂ ಬಯಸದಿದ್ದಮೇಲೆ ನೆಮ್ಮದಿಯೇ.

**ಸ್ವೈರಂ ಸ್ವೈರವಿಹರಣಂ ತತ್ಸಂಸರಣಂ ।**
**ಸಾಂಬರಾ ವಾ ದಿಗಂಬರಾ ವಾ । ನ ತೇಷಾಂ ಧರ್ಮಾಧರ್ಮೌ**
**ನ ಮೇಧ್ಯಾಮೇಧ್ಯೌ । ಸದಾ ಸಾಂಗ್ರಹಣ್ಯೇಷ್ಟ್ಯಾಶ್ವಮೇಧ-**
**ಮಂತರ್ಯಾಗಂ ಯಜತೇ ।**
**ಸ ಮಹಾಮಖೋ ಮಹಾಯೋಗಃ । ಕೃತ್ಸ್ನಮೇತಚ್ಚಿತ್ರಂ ಕರ್ಮ ।**
**ಸ್ವೈರಂ ನ ವಿಗಾಯೇತ್ತನ್ಮಹಾವ್ರತಂ । ೨ (೩)**

**ಭಾವಾನುವಾದ :-** ಮನಸ್ಸಿಗೆ ಬಂದಂತೆ ವಿಹರಿಸುವುದು ಅವರ ನಡೆ (ಸಂಸರಣ). ಬೆತ್ತಲೆಯಾಗಿಯೋ ಬಟ್ಟೆ ಧರಿಸಿಯೋ ಇರುವರು. ಇದು ಧರ್ಮ, ಇದು ಅಧರ್ಮ ಎಂಬ ಎಣಿಕೆ ಅವರಿಗಿರದು; ಇದು ಮೇಧ್ಯ ಅದು ಅಮೇಧ್ಯ ಎಂಬ ಭೇದವೂ ಇರದು. ಎಂದೂ (ಎಡೆಬಿಡದೆ) ಒಡಲ ಒಳಗೇ ಸಾಂಗ್ರಹಣೆ ಎಂಬ ಇಷ್ಟಿ, ಅಶ್ವಮೇಧ ವೆಂಬ ಯಾಗ ಇವನ್ನು ನಡೆಸುತ್ತಲೆ ಇರುವರು. ಅಂತರ್ಯಾಗವೇ ಅವರ ಪಾಲಿಗೆ ಮಹಾಯಜ್ಞ, ಮಹತ್ತಾದ ಯೋಗ. ಅವರ ಕೆಲಸವೆಲ್ಲ ಅದ್ಭುತವಾಗಿಯೇ ಇರುತ್ತದೆ (ಬಗೆಬಗೆಯಾಗಿರುತ್ತದೆ). ಸ್ವೇಚ್ಛೆಯನ್ನು ಬಿಡಬಾರದೆಂಬುದು ಅವನಿಗೆ ಮಹಾವ್ರತ.

**ವಿವರಣೆ :-** ಅವಧೂತರು ಅವಿದ್ಯಾ-ಕಾಮ-ಕರ್ಮದ ಈ ಪ್ರಪಂಚವ್ಯವಹಾರದಿಂದ ದೂರವಾಗಿರುವರು. ಬೇರೆಯ ಜನರಂತೆ ಅವರು ನಡೆದುಕೊಳ್ಳುವುದಿಲ್ಲ. ಮನಸ್ಸಿನ ವಿಕಲ್ಪಗಳು ಅವರಿಗಿಲ್ಲ ವಾದುದರಿಂದ, ನಮ್ಮಲ್ಲಿ ಬಳಕೆಯಲ್ಲಿರುವ ಧರ್ಮ, ಅಧರ್ಮ, ಪುಣ್ಯ, ಪಾಪ, ಸದಾಚಾರ, ಅನಾಚಾರ, ವರ್ಣಾಶ್ರಮ ಸಮ್ಮತವಾದ ನಡಾವಳಿ, ವರ್ಣಾಶ್ರಮಗಳನ್ನು ತಿರಸ್ಕರಿಸಿದ ನಡಾವಳಿ ಮೊದಲಾದ ವಿಭಾಗ ಅವರಿಗೆ ಇರದು. ತಮಗೆ ತೋರಿದಂತೆ ಇರುತ್ತಾರೆ. ಬೇರೆಯವರು ಒಪ್ಪುವರೋ ಬಿಡುವರೋ ಎಂಬ ಎಣಿಕೆ ಅವರಿಗಿಲ್ಲ. ಸಮಾಜವನ್ನು ಮೆಚ್ಚಿಸುವ ಆತಂಕ ಅವರಿಗೇನಿರದು. ಬೇಕೆಂದರೆ ಬಟ್ಟೆ ಧರಿಸಿ ಓಡಿಯಾಡುತ್ತಾರೆ; ಬೇಡವೆನಿಸಿದರೆ ಬೆತ್ತಲೆಯಾಗಿಯೆ ಇರುತ್ತಾರೆ. ನಾಚಿಕೆ, ಮಾನ, ಮರ್ಯಾದೆ ಮೊದಲಾದ ಕಲ್ಪನೆಗಳು ಅವರಿಗಿರುವುದಿಲ್ಲ. ಅವರ ನೆಲೆ ಲೋಕೋತ್ತರವಾದುದು.

ಧರ್ಮ, ಅರ್ಥ, ಕಾಮಗಳೆಂಬ ತ್ರಿವರ್ಗವು ಪ್ರಾಪಂಚಿಕ ವ್ಯವಹಾರದಲ್ಲಿ ಮುಖ್ಯವಾಗುತ್ತದೆ. ಇದನ್ನು ಒಟ್ಟಾರೆ

ಧರ್ಮವೆನ್ನುತ್ತಾರೆ. ಅದಿಲ್ಲದೆ ವ್ಯಕ್ತಿಯ ಅಭ್ಯುದಯವಿರದು, ಸಮುದಾಯದ ಸುಸ್ಥಿತಿ ಇರದು. ವ್ಯಕ್ತಿಯ ಪ್ರಗತಿಗಾಗಲಿ ಸಮುದಾಯದ ನೆಮ್ಮದಿಗಾಗಲಿ ಅಡ್ಡಿ ಬಂದರೆ ಅದು ಅಧರ್ಮವೆನಿಸಿಕೊಳ್ಳುತ್ತದೆ. ಲೋಕದ ನೆಲೆಯಲ್ಲಿ ಈ ವಿಭಾಗ ಯುಕ್ತವಾದುದು; ಶಾಸ್ತ್ರ ಇದನ್ನು ಸಮರ್ಥಿಸುತ್ತದೆ. ಆದರೆ ಲೋಕೋತ್ತರನಾದ ಅವಧೂತನಿಗೆ ಈ ವಿಭಾಗ ಹೊಂದಲಾರದು.

ವೇದೋಕ್ತವಾದ ಕರ್ಮಗಳನ್ನು (ಎಂದರೆ ಯಜ್ಞಯಾಗಾದಿಗಳನ್ನು) ಮಾಡುವುದು ಬಹಿರ್ಯಾಗ. ಅಗ್ನ್ಯಾಧಾನ, ಪರಿಕರ ಸಂಗ್ರಹಣ, ಋತ್ವಿಗ್ವರಣ, ಹವನ ಮೊದಲಾದ ಕ್ರಿಯೆಗಳು ಹೊರಗೆ ನಡೆಯತಕ್ಕುವು ; ದ್ರವ್ಯಗಳನ್ನೂ ಪುರುಷಪ್ರಯತ್ನವನ್ನೂ ಕ್ರಿಯೆಗಳನ್ನೂ ಅವಲಂಬಿಸುತ್ತವೆ. ಹೀಗೆ ಮಾಡುವಾಗ ಲೌಕಿಕಪ್ರಯೋಜನಗಳೇ (ಸ್ವರ್ಗಸುಖ, ಧನ, ಪಶುಸಂಪತ್ತು, ಯಶಸ್ಸು, ದೀರ್ಘಾಯುಸ್ಸು ಮೊದಲಾದವು) ಉದ್ದೇಶ. ಆತ್ಮನಿಷ್ಠನಾದ ಅವಧೂತನಿಗೆ ಇಂಥ ಲೌಕಿಕಪ್ರಯೋಜನಗಳು ಬೇಡವಾದುದರಿಂದ, ಅವನು ಕೈಕೊಳ್ಳುವುದು ಅಂತರ್ಯಾಗ. ಮನಸ್ಸಿನೊಳಗೇ ವೇದೋಕ್ತವಾದ ಕರ್ಮಗಳನ್ನು ನಿರ್ವಹಿಸಿಬಿಡುತ್ತಾನೆ. ಅವನ ಮನಸ್ಸೇ ಯಜಮಾನ, ಮನಸ್ಸೇ ಅಗ್ನಿ, ಮನಸ್ಸೇ ಋತ್ವಿಜ. ಅವನ ಪಾಲಿಗೆ ಯಾಗವೆಂದರೆ ಯೋಗವೇ. ಹೊರಗಣ ಸಾಮಗ್ರಿಗಳ ಆಲಂಬನೆಯಾಗಲಿ, ಬೇರೆ ವ್ಯಕ್ತಿಗಳ ನೆರವಾಗಲಿ ಅವನಿಗೆ ಬೇಕಾದುದಿಲ್ಲ, ಮತ್ತೆ ಅಂತರ್ಯಾಗವನ್ನಾದರೂ ತನಗೆ ಸರಿಯೆನಿಸಿದಾಗ, ತನಗೆ ತೋರಿದಂತೆ ಮಾಡುವನು. ಯಾವ ಶಾಸ್ತ್ರದ ವಿಧಿಯಾಗಲಿ ಅವನಿಗೆ ವಿಧಿಯಲ್ಲ. ಆದುದರಿಂದ ಅವನು ಮಾಡುವ ಕೆಲಸಗಳು ಇತರರಿಗೆ ಸೋಜಿಗವೆನಿಸುತ್ತವೆ. ಆದರೆ ತನ್ನ ಮನಸ್ಸಿಗೆ ಬಂದುದನ್ನೆ ಮಾಡಬೇಕೆಂಬುದು ಅವನ ವ್ರತ. ಬೇರೆಯವರ

ಮೆಚ್ಚುಗೆಯನ್ನೇನು ಅವನು ಬಯಸುವುದಿಲ್ಲ. ತನಗೆ ತೋರಿದಂತೆ ಮಾಡುವುದನ್ನೇನು ಅವನು ಕೈಬಿಡುವುದಿಲ್ಲ.

ಸಾಧನೆಯಲ್ಲಿ ಕೂಡ ಪಾರಂಪರಿಕ ಮತ್ತು ಸಾಕ್ಷಾತ್ ಎಂಬ ವಿಭಾಗವಿದೆ. ಯಜ್ಞಯಾಗಾದಿ ಕರ್ಮಗಳು ಅಂತಃಕರಣಶುದ್ಧಿಗೆ ಕಾರಣವಾಗಿ, ಅನಂತರ ಆತ್ಮಜ್ಞಾನದ ಉದಯಕ್ಕೆ ಎಡೆ ಮಾಡಿಕೊಡುವುದರಿಂದ ಪಾರಂಪರಿಕ ಸಾಧನೆಯಲ್ಲಿ ಸೇರುತ್ತವೆ. ಸಾಕ್ಷಾತ್ ಸಾಧನೆಯೆಂದರೆ ಆತ್ಮಜ್ಞಾನಕ್ಕೆ ನೇರಾಗಿ ದಾರಿಯಾಗುವ ಶ್ರವಣ-ಮನನ-ನಿದಿಧ್ಯಾಸಗಳು. ಕರ್ಮಕಾಂಡದಲ್ಲಿ ಧರ್ಮ-ಅಧರ್ಮ, ಮೇಧ್ಯ-ಅಮೇಧ್ಯ, ಸಂಗ್ರಹಣೆ-ಅಶ್ವಮೇಧ ಮೊದಲಾದ ಯಜ್ಞಗಳ ಎಣಿಕೆ, ಇವೆಲ್ಲ ಪ್ರಸಕ್ತವಾಗುತ್ತವೆ. ಯಾವುದೇ ಕರ್ಮವಾಗಲಿ ನಿತ್ಯ-ನೈಮಿತ್ತಿಕ ಎಂಬ ಬಗೆಗಳಾಗಿದ್ದರೆ (ಎಂದರೆ ಯಾವುದೇ ಬಯಕೆಯಿಲ್ಲದೆ ಕರ್ತವ್ಯವೆಂಬಂತೆ ಮಾಡುವ, ಮಾಡಲೇ ಬೇಕಾದ, ಮಾಡದೆ ಬಿಟ್ಟರೆ ಪ್ರತ್ಯವಾಯವೆಂಬ ದೋಷವನ್ನು ತರುವ) ಪರಂಪರೆಯಿಂದ ಸಾಧನೆಯಾಗಬಹುದು. ಇಂಥ ಕರ್ಮದಿಂದ ಅಂತಃಕರಣಶುದ್ಧಿ, ಅದರಿಂದ ಜ್ಞಾನಕ್ಕೆ ಅಧಿಕಾರ, ಅಧಿಕಾರದಿಂದ ಶ್ರವಣ - ಮನನ - ನಿದಿಧ್ಯಾಸಗಳೆಂಬ ಸಾಕ್ಷಾತ್ ಸಾಧನೆ, ಅದರಿಂದ ಆತ್ಮಜ್ಞಾನ.

ಅವಧೂತರಿಗೆ ಆತ್ಮಜ್ಞಾನ ಆಗಲೇ ಸಿದ್ಧವಾಗಿದೆಯಾಗಿ ಅವರಿಗೆ ಯಾವ ಸಾಧನೆಯ ಅಗತ್ಯವೂ ಇರದು. ಸಾಮಾನ್ಯರಿಗೆ ಶಾಸ್ತ್ರ ವಿಧಿಸುವ ಕರ್ಮದ ಕಟ್ಟುಪಾಡು ಅವರಿಗೆ ಅನ್ವಯಿಸುವುದಿಲ್ಲ. ಆದರೂ ಅವರ ಉಪದೇಶವು ಅಂತರ್ಯಾಗದ ಸ್ವಾರಸ್ಯವನ್ನು ಎತ್ತಿ ಹೇಳುತ್ತದೆ. ಬಹಿರ್ಯಾಗ ಉಪಕರಣಗಳಿಂದ, ಹೊರಗಣ ಕೆಲಸಗಳಿಂದ, ದೇಹಶ್ರಮದಿಂದ, ಇಂದ್ರಿಯ ವ್ಯಾಪಾರದಿಂದ ನಡೆಯುವಂಥದು;

ಇಲ್ಲಿ ಯಾರಾಗಲಿ ಮನಸ್ಸಿಗೆ ಬಂದಂತೆ ನಡೆದುಕೊಳ್ಳುವಹಾಗಿಲ್ಲ. ಸಂಸಾರಬಂಧನಕ್ಕಿಂತ ಹೆಚ್ಚು ಕಟಪಟೆಯದು ಈ ಕರ್ಮಬಂಧನ, ಕರ್ಮಕಾಂಡದ ಬಂಧನ!

ಅಂತರ್ಯಾಗವು ಮಾನಸಿಕಕ್ರಮವೇ ಆದುದರಿಂದ ಮಾಡುವವನಿಗೆ ಹೆಚ್ಚು ಸ್ವಾತಂತ್ರ್ಯವಿದೆ. ಅವಧೂತರು ಸ್ವೇಚ್ಛಾಚಾರಿಗಳು. ಅವರಿಗೆ ಯಾವ ಕಟ್ಟುಪಾಡೂ ಹಿಡಿಸುವುದಿಲ್ಲ. ಬಹಿರ್ಯಾಗವೋ ಅಂತರ್ಯಾಗವೋ ಎಂದು ಕೇಳಿದರೆ ಅಂತರ್ಯಾಗವೆಂದೇ ಹೇಳಿಯಾರು. ಅಂತರ್ಯಾಗವಾಗಲಿ ಅವರಿಗೇನು ಅದರ ಅಗತ್ಯವಿರದು. ಆದರೆ ಅದಕ್ಕಿಂತ ಇದು ಮೇಲು, ಕುರುಡುಕಣ್ಣಿಗಿಂತ ಮೆಳ್ಳಗಣ್ಣು ಮೇಲು ಎಂಬಂತೆ. ಬಹಿರ್ಯಾಗ ಸಂಪೂರ್ಣವಾಗಿ ಹೊರಗಣ ಆಸರೆಯುಳ್ಳದ್ದೇ. ಅದು ಶರೀರಕ್ಕೆ ಕೂಡ ಹೊರಗಿನದೇ. ಪ್ರಪಂಚಭಾವವನ್ನು ಗಟ್ಟಿಯಾಗಿ ಹಿಡಿದದ್ದೇ. ಅಂತರ್ಯಾಗವಾದರೆ ಎಲ್ಲ ಮನಸ್ಸಿನ ವ್ಯಾಪಾರವೇ, ಮನಸ್ಸಿನ ಸಂಕಲ್ಪ - ವಿಕಲ್ಪಗಳೇ, ಮಾನಸಿಕ ಪ್ರವೃತ್ತಿಗಳೇ. ಆದರೆ ಬಹಿರ್ಯಾಗದ ಜಾಡಿನಲ್ಲೇ, ಅದರ ಮಾದರಿಯನ್ನು ಹಿಡಿದೇ ಅಂತರ್ಯಾಗ. ಅದೂ ಯಾಗವೇ ಆದರೂ ಹೊರಗಣ ಪ್ರವೃತ್ತಿ, ಪರಿಕರ, ಕ್ರಿಯೆಗಳಿಲ್ಲದೆ ನಡೆಯುವುದು ಅದರ ಸ್ವಾರಸ್ಯ.

ಅಂತರ್ಯಾಗವು ಬಹಿರ್ಯಾಗದಂತೆ ಬಂಧಕವಲ್ಲ; ಮನಸ್ಸಿನ ಸಮಾಧಾನವೇ ಮುಖ್ಯಪ್ರಯೋಜನವಾಗಿ ಉಳ್ಳದ್ದು. ಅದರಿಂದ ಮನಸ್ಸಿಗೊಂದು ಸಂಸ್ಕಾರವೊದಗುತ್ತದೆ. ಮನಸ್ಸು ಬೇಕಾದಂತೆ ತನ್ನದೇ ಆದ ಕಲ್ಪನೆಗಳನ್ನು ಮೂಡಿಸಿಕೊಳ್ಳುವುದರಲ್ಲಿ ಸೌಲಭ್ಯವನ್ನು ಪಡೆದುಕೊಳ್ಳುತ್ತದೆ. ಇದರಿಂದಾಗಿ ಮನಸ್ಸು ವ್ಯಾಪಕವಾಗಿ, ಹೊರಗಣ ಆಸರೆಯಿಲ್ಲದೆ, ಆತ್ಮದತ್ತ ಸರಿಯಲು ತೊಡಗುತ್ತದೆ. ಮನಸ್ಸಿನ

ಅಧಿಕಾರ ನಿಂತಮೇಲೆ ಆತ್ಮವನ್ನು ಕಾಣಲಾಗುವುದು. ಮನಸ್ಸಿನ ಅಧಿಕಾರ ನಿಲ್ಲಲು ಅಂತರ್ಯಾಗ ನೆರವಾದೀತು. ನೆರವಾಗಿಯೇ ಆಗುವುದೆಂಬ ನಿಯಮವೇನಿಲ್ಲವೆನ್ನಿ.

ಅಂತರ್ಯಾಗವನ್ನು ಮಹಾಯೋಗವೆಂದು ಇಲ್ಲಿ ಬಣ್ಣಿಸಿದ್ದಾರೆ. ಯೋಗವೆಂದರೆ ಸಮಾಧಿ ('ಯುಜ್ ಸಮಾಧೌ' ಎಂಬ ಧಾತುವಿನಿಂದ). ಮನಸ್ಸು ಏಕಾಗ್ರವಾಗಿ ನಿಲ್ಲುವುದು ಸಮಾಧಿ ('ಸಮ್ಯಗಾಧೀಯತೇ ಮನಃ ಯಸ್ಮಿನ್' ಅಥವಾ 'ಯೇನ' ಎಂದು ಮಾತಿನ ಅರ್ಥ). ಮನಸ್ಸು ಏಕಾಗ್ರವಾಗಿ ಆತ್ಮದಲ್ಲೇ ನಿಲ್ಲುವುದು ಮಹಾಯೋಗ. ಆತ್ಮದಲ್ಲಿ ಮನಸ್ಸು ಮರೆಯಾಗುವುದೆಂದರ್ಥ. ಅವಧೂತರ ಉಪದೇಶವೇ ಇದು. ಅದು ಮಹಾಮಖವೂ ಹೌದು. ಮಖವೆಂದರೆ ಯಾಗ. ಯಾಗವೆಂದರೆ ದೇವತೆಯನ್ನುದ್ದೇಶಿಸಿ ನಮ್ಮದಾದ ದ್ರವ್ಯವನ್ನು ತ್ಯಾಗಮಾಡುವುದು ಎಂದರ್ಥ. ಅಂತರ್ಯಾಗದಲ್ಲಿ ಆತ್ಮವೇ ದೇವತೆ, ಮನಸ್ಸು ದ್ರವ್ಯ. ಆತ್ಮನಿಗಾಗಿ ಮನಸ್ಸನ್ನು ಕೈಬಿಡುವುದೇ ಅಂತರ್ಯಾಗವಾಯಿತು.

**ನ ಸ ಮೂಢವಲ್ಲಿಪ್ಯತೇ ।**
**ಯಥಾ ರವಿಃ ಸರ್ವರಸಾನ್ ಪ್ರಭುಂಕ್ತೇ**
**ಹುತಾಶನಶ್ಚಾಪಿ ಹಿ ಸರ್ವಭಕ್ಷಃ ।**
**ತಥೈವ ಯೋಗೀ ವಿಷಯಾನ್ ಭುಂಕ್ತೇ ನ**
**ಲಿಪ್ಯತೇ ಪುಣ್ಯಪಾಪೈಶ್ಚ ಶುದ್ಧಃ ।। ೪ ।।**

**ಭಾವಾನುವಾದ** :- ಅವಧೂತನಿಗೆ, ಸಾಮಾನ್ಯ ಮನುಷ್ಯರಿಗಿರುವಂತೆ, ತಾನು ಮಾಡಿದ ಕರ್ಮಗಳ ಲೇಪವಿರದು. ಹೇಗೆ ಸೂರ್ಯನು ಭೂಮಿಯ ಮೇಲಿರುವ ಎಲ್ಲ ರಸಗಳನ್ನೂ ಹೀರಿಕೊಳ್ಳುವನೋ, ಬೆಂಕಿಯು ಹೇಗೆ ಎಲ್ಲವನ್ನೂ ಸುಟ್ಟುಬಿಡುವುದೋ, ಹಾಗೆಯೆ

ಅವಧೂತನಾದ ಯೋಗಿಯು ಲೌಕಿಕವಾದ ಎಲ್ಲ ವಿಷಯಗಳನ್ನೂ ಅನುಭವಿಸುವನು; ಮತ್ತೆ ಪುಣ್ಯ, ಪಾಪ ಎಂಬುದರ ಸೋಂಕು ಇನಿತೂ ಇರದೆ, ಶುದ್ಧವಾಗಿರುವನು.

**ವಿವರಣೆ :-** ಅವಧೂತನೆಂದರೆ ಜ್ಞಾನಿ; ಆತ್ಮಜ್ಞಾನವಿರುವವನು. ಅನಾತ್ಮವಾದುದಕ್ಕೆ ಅವನು ಅಂಟಿಕೊಳ್ಳುವುದಿಲ್ಲ. ಆತ್ಮಾನಾತ್ಮವಿವೇಕ ಅವನಿಗಿರುತ್ತದೆ. ಹಾಗಲ್ಲದವನು ಮೂಢ, ಅವಿವೇಕಿ. ನಾವೆಲ್ಲ ಮೂಢರೇ, ಅವಿವೇಕಿಗಳೇ. ಶಾಸ್ತ್ರಜ್ಞಾನವಿದ್ದವರು ಕೂಡ ಆತ್ಮಾನುಭವ ವಿರದಿದ್ದರೆ ಮೂಢರೇ. ಅವರು ಮಾಡುವ ಎಲ್ಲ ಕೆಲಸಗಳೂ, ಲೌಕಿಕವಾಗಲಿ ವೈದಿಕವಾಗಲಿ, ಅವರಿಗೆ ಅಂಟಿಕೊಳ್ಳುವುವು. ಫಲಾಪೇಕ್ಷೆ ಯಿಂದ, ಕರ್ತೃತ್ವಾಭಿಮಾನದಿಂದ (ನಾನು ಮಾಡುತ್ತೇನೆ ಎಂಬ ಅನಿಸಿಕೆಯಿಂದ) ಮಾಡುವ ಯಾವುದೇ ಕೆಲಸವೂ ಲೇಪವನ್ನೊದಗಿಸು ತ್ತದೆ. ಕರ್ಮದ ಫಲವನ್ನು ಅನುಭವಿಸಲೇಬೇಕು. ಅವಧೂತನಾದರೋ ಬಯಕೆಯಿರದೆ, ಅಭಿಮಾನವನ್ನು ತೊರೆದು ಕೆಲಸಮಾಡುತ್ತಾನೆ. ಹಾಗಾಗಿ ಅವನಿಗೆ ತಾನು ಮಾಡಿದ ಕೆಲಸದಿಂದ ಲೇಪವಿರದು.

ಅವನು ಕೆಲಸಮಾಡುವುದೇ ಇಲ್ಲವೆಂದಲ್ಲ. ಅವನು ಗೃಹಸ್ಥ ನಾಗಿರಬಹುದು, ಯತಿಯಾಗಿರಬಹುದು. ತನಗೆ ತೋರಿದಂತೆ ಕೆಲಸದಲ್ಲಿ ತೊಡಗಿರುತ್ತಾನೆ. ಲೌಕಿಕವಾದ, ಇಂದ್ರಿಯಗಳಿಗೆ ಸಂಬಂಧಿಸಿದಂತೆ, ವಿಷಯಗಳನ್ನು ಅನುಭವಿಸುತ್ತಾನೆ. ಸಾಮಾನ್ಯ ಜನರು ಸುಖವನ್ನು ಅನುಭವಿಸಿದಂತೆಯೇ ಇವನೂ ಅನುಭವಿಸ ಬಹುದು. ಆದರೆ ಯಾವುದಕ್ಕೂ ಅಂಟಿಕೊಳ್ಳುವುದಿಲ್ಲ. ಸೂರ್ಯನ ಬೆಳಕು ಶುಚಿ-ಕಲುಷಿತ, ಯೋಗ್ಯ-ಅಯೋಗ್ಯ, ಒಳಿತು-ಕೆಡಕು ಎಂಬ ಯಾವ ಭೇದವೂ ಇಲ್ಲದೆ ಎಲ್ಲ ಪದಾರ್ಥಗಳ ಮೇಲೂ ಸಮನಾಗಿ ಬೀಳುತ್ತದೆ; ಕಮಲವನ್ನೂ ಬೆಳಗುತ್ತದೆ, ಕೆಸರನ್ನೂ ಬೆಳಗುತ್ತದೆ; ವಿರಕ್ತನ

ಮೇಲೂ ಬೀಳುತ್ತದೆ, ಕಾಮುಕನ ಮೇಲೂ ಬೀಳುತ್ತದೆ. ಯಾವುದರಿಂದಲೂ ಲೇಪಗೊಳ್ಳುವುದು ಇಲ್ಲ. ಕೆಸರಿನ ಮೇಲೆ ಬಿದ್ದ ಸೂರ್ಯನ ಬೆಳಕು ಅಶುಚಿಯಾಗುವುದಿಲ್ಲ. ಹಾಗೆಯೇ ಬೆಂಕಿಗೆ ಇದನ್ನು ಸುಡಬೇಕು, ಅದನ್ನು ಸುಡಬಾರದು ಎಂಬ ಎಣಿಕೆಯೇನಿರುವುದಿಲ್ಲ.

ಮನುಷ್ಯನಿಗೆ ಕರ್ಮಗಳ ಲೇಪವಾಗುವುದು ಈ ಬಗೆಯ ಮನಸ್ಸಿನ ವಿಕಲ್ಪಗಳಿಂದ; ಫಲದ ಬಯಕೆ, ನಾನು ಮಾಡುವೆನೆಂಬ ಅಭಿಮಾನ ಎರಡೂ ಮನಸ್ಸಿನ ವಿಕಲ್ಪಗಳೇ. ಈ ಕೆಲಸ ಮಾಡಿ ಇದನ್ನು ಪಡೆದುಕೊಳ್ಳುವೆನು ಎಂಬುದು ಸಂಕಲ್ಪ; ಮನಸ್ಸಿನದು. ಈ ಸಂಕಲ್ಪಕ್ಕೆ ಅನುಬಂಧಿಯಾಗಿ ಪುಣ್ಯ, ಪಾಪಗಳೆಂಬ ಕರ್ಮಫಲಗಳು ಸಿದ್ಧವಾಗುತ್ತವೆ. ಸಂಕಲ್ಪವೇ ಇರದಿದ್ದರೆ ಪುಣ್ಯ-ಪಾಪಗಳೆಲ್ಲಿಯವು ? ಅವಧೂತನಿಗೆ ಸಂಕಲ್ಪವೇ ಇರುವುದಿಲ್ಲ; ಹಾಗಾಗಿ ಪುಣ್ಯ-ಪಾಪಗಳ ಸೋಂಕೂ ಇರಲಾರದು. ಪ್ರಪಂಚದ ವ್ಯವಹಾರ ಅವನಿಗಿಲ್ಲವಾದುದ ರಿಂದ ಅವನು ಶುದ್ಧ. ಯಾವುದರ ಲೇಪವೂ ಇರದು. ಲೇಪ ಒದಗುವುದು ಮನಸ್ಸಿನ ಸಂಕಲ್ಪದಿಂದಲೇ; ಲೇಪದಿಂದಲೇ ಸ್ವಭಾವಶುದ್ಧವಾದ ಮನಸ್ಸು ಅಶುದ್ಧವಾಗುವುದು. ಅವಧೂತ ಎಂದೂ ಶುದ್ಧನೇ.

'ಮೂಢ' ಎಂಬ ಮಾತು ಬಂದಿತಷ್ಟೆ? ಅದರ ರೂಢಿಯ ಅರ್ಥ ತಿಳಿವಳಿಕೆಯಿಲ್ಲದವನು ಎಂದಿದ್ದರೂ ಯೌಗಿಕವಾಗಿ (ಎಂದರೆ ಧಾತುವನ್ನು ಹಿಡಿದ ಅರ್ಥ) 'ಮೋಹಗೊಂಡವನು', 'ಮರುಳಾದವನು' ('ಮುಹ್' ಧಾತುವಿನಿಂದ) ಎಂದರ್ಥವಾಗುತ್ತದೆ. ಮೋಹಗೊಳ್ಳುವುದು ಮನಸ್ಸೇ. ಮನಸ್ಸಿನ ವಿಕಲ್ಪಗಳು ಆತ್ಮವನ್ನು ಮರೆಮಾಚಿ ಪ್ರಪಂಚಭಾವವನ್ನು ಮುಂದೆಮಾಡುತ್ತವೆ. ದಿಟವಾದುದನ್ನು ಸಟೆಯಾಗಿಸುತ್ತವೆ; ಸಟೆಯಾದುದನ್ನು ದಿಟವಾಗಿಸುತ್ತವೆ. ಈ ವಿಕಲ್ಪಗಳು ಮೇಲೆದ್ದುಕೊಳ್ಳುವುದೂ ದೇಹವಾಸನೆ, ಲೋಕವಾಸನೆ,

ಶಾಸ್ತ್ರವಾಸನೆಗಳಿಂದ. ದೇಹವನ್ನು ಕುರಿತಾದ ಚಿಂತೆಯು ಅಗತ್ಯ, ಅನಗತ್ಯ ಕರ್ತವ್ಯಗಳನ್ನು ಮೂಡಿಸುತ್ತದೆ. ಲೋಕದ ಮೆಚ್ಚುಗೆಯನ್ನು ಬಯಸುವಾಗ ಈ ಕರ್ತವ್ಯಗಳಿಗೆ ಬೇರೆ ಬೇರೆ ಪ್ರಕಾರಗಳು ಏರ್ಪಡುತ್ತವೆ. ಶಾಸ್ತ್ರ ಅಥವಾ ಪುಸ್ತಕಗಳಿಂದ ಪಡೆದುಕೊಂಡ ತಿಳಿವಳಿಕೆ ಹೊಸ ಹೊಸ ಆಲೋಚನೆಯ ಉಪಾಧಿಗಳನ್ನು ಒದಗಿಸುತ್ತದೆ. ಇವೆಲ್ಲದರ ಪರಿಣಾಮವಾಗಿ ಮನಸ್ಸು ತಿಳಿಯಾಗಿರುವುದು ಸಾಧ್ಯವೇ ಇಲ್ಲವಾಗುತ್ತದೆ. ಮನಸ್ಸಿನ ತುಂಬ ವಿಕಲ್ಪಗಳು ಆಟವಾಡುತ್ತ ಗೊಂದಲವನ್ನುಂಟುಮಾಡುತ್ತವೆ. ಇದರ ಸಿಲುಕು ಮನಸ್ಸಿನಲ್ಲೇ ಉಳಿದುಕೊಳ್ಳುತ್ತದೆ. ಇದನ್ನೇ ಲೇಪವೆನ್ನುವುದು.

ಮನಸ್ಸಿನಲ್ಲಿ ಪ್ರಪಂಚವು ಗಟ್ಟಿಯಾದುದು, ಮುಖ್ಯವಾದುದು, ಸುಖವನ್ನು ತಂದುಕೊಡುವಂಥದು, ಆಕರ್ಷಕವಾದುದು ಎಂಬ ಭಾವನೆಗಳು ಮೂಡಿಕೊಂಡಿರುವಾಗ ಮಾಡಿದ ಆಲೋಚನೆಗಳೂ, ಅಂಥ ಆಲೋಚನೆಗಳಿಂದ ಮೈದಳೆದ ಕೆಲಸಗಳೂ ಲೇಪಕ್ಕೆ ಕಾರಣವಾಗುತ್ತವೆ. ಮನಸ್ಸಿನ ವಿಕಲ್ಪಗಳು ಮನಸ್ಸಿನಿಂದ ಹುಟ್ಟಿ ಮನಸ್ಸಿನಲ್ಲೇ ಉಳಿಯುವುವು; ಇಂದ್ರಿಯ ವ್ಯಾಪಾರ ಮತ್ತು ದೈಹಿಕ ಕ್ರಿಯೆಗಳು ನಡುವೆ ಬರುತ್ತವೆ. ವಿಕಲ್ಪಗಳು ಮನಸ್ಸಿಗೇ ಅಂಟಿಕೊಳ್ಳುವುದು ಲೇಪ. ಇದರಿಂದಾಗಿ ಮನಸ್ಸು ಬಗ್ಗಡದ ನೀರಿನಂತಾಗುತ್ತದೆ. ಸಹಜವಾಗಿ ಮನಸ್ಸಿಗಿರುವ ಸ್ವಚ್ಛತೆ ಮರೆಯಾಗುತ್ತದೆ.

ಇಂಥ ಮನಸ್ಸಿನಿಂದ ಮುಂದೆ ಒದಗಿಬರುವ ವಿಕಲ್ಪಗಳು ಇನ್ನಷ್ಟು ಜಟಿಲವಾಗಿ, ಕೆಸರಾಗಿ ಪ್ರಪಂಚಭಾವ ಇನ್ನೂ ಆಳವಾಗಿ ಬಿಡುತ್ತದೆ. ಹೊರಗಣ ಪ್ರವೃತ್ತಿ, ವಿಷಯಗಳ ಮೇಲಣ ಆಸಕ್ತಿ ಇನ್ನಷ್ಟು ಹೆಚ್ಚುತ್ತವೆ. ಇದು ಲೇಪದ ಫಲ. ಲೇಪವು ಇನ್ನೂ ದಟ್ಟವಾದ ಲೇಪಕ್ಕೆ ದಾರಿಮಾಡಿಕೊಡುತ್ತದೆ. ಮನಸ್ಸು ತಿಳಿಯಾಗುವ ಸಂಭವವೇ ಇರದು.

ಸೂರ್ಯನ ಬೆಳಕು, ಬೆಂಕಿಯ ಕಾವು ಇವನ್ನು ಅವಧೂತನ ಕ್ರಿಯೆಗೆ ಹೋಲಿಸಿರುವರು. ಸೂರ್ಯನಾಗಲಿ, ಬೆಂಕಿಯಾಗಲಿ ಲೇಪವಿಲ್ಲದ್ದು, ಲೇಪವನ್ನು ಒದಗಿಸದ್ದು. ಬೆಳಕು ಸ್ವಚ್ಛತೆಗೆ ಕಾರಣವಾಗುತ್ತದೆ. ಕತ್ತಲೆಯನ್ನು ತೊಲಗಿಸುತ್ತದೆ, ತೇವವನ್ನು ತೊಡೆದುಹಾಕುತ್ತದೆ. ಬೆಂಕಿಯು ಎಲ್ಲವನ್ನೂ ಸುಟ್ಟು ಬೂದಿ ಮಾಡುತ್ತದೆ. ಹೀಗೆ ಸೂರ್ಯನಾಗಲಿ ಬೆಂಕಿಯಾಗಲಿ ಕೆಲಸಮಾಡುವಾಗ ಮೋಹವಿರುವುದಿಲ್ಲ, ಅದು-ಇದು ಎಂಬ ಭೇದಭಾವವಿರುವುದಿಲ್ಲ, ಯಾವ ಉದ್ದೇಶವೂ ಇರುವುದಿಲ್ಲ, ಬಯಕೆಯ ಗಾಳಿಗಂಧವೂ ಇರುವುದಿಲ್ಲ; ಎಂದರೆ ಜೀವಭಾವದಿಂದ ಅವು ಕೆಲಸ ಮಾಡುವುದಿಲ್ಲ.

ಅವಧೂತನ ಕೆಲಸವಾದರೂ ಹೀಗೆಯೇ. ಪ್ರಪಂಚಭಾವವೆಂಬ ಕತ್ತಲೆಯನ್ನು ನೀಗುವ ಸೂರ್ಯನೆಂದರೆ ತಾನು ಆತ್ಮವೆಂಬ ಅರಿವು. ಜೀವಭಾವವನ್ನು ಸುಡುವ ಬೆಂಕಿಯೂ ಅದೇ. ಅವಧೂತನ ಬಂಡವಾಳವೆಂದರೆ ಇದು. ಉಪನಿಷತ್ತು ಬ್ರಹ್ಮನಿಷ್ಠೆಯೆಂದು ಕರೆಯುವುದು ಈ ಸ್ಥಿತಿಯನ್ನೇ.

**ದುಃಖಿನೋಽಜ್ಞಾಃ ಸಂಸರಂತು ಕಾಮಂ ಪುತ್ರಾದ್ಯಪೇಕ್ಷಯಾ ।**
**ಪರಮಾನಂದ ಪೂರ್ಣೋಽಹಂ ಸಂಸರಾಮಿ ಕಿಮಿಚ್ಛಯಾ ॥ ೫ ॥**

**ಅನುತಿಷ್ಠಂತು ಕರ್ಮಾಣಿ ಪರಲೋಕಯಿದಾಸವಃ ।**
**ಸರ್ವಲೋಕಾತ್ಮಕಃ ಕಸ್ಮಾದನುತಿಷ್ಠಾಮಿ ಕಿಂ ಕಥಂ ॥ ೬ ॥**

**ವ್ಯಾಚಕ್ಷತಾಂ ತೇ ಶಾಸ್ತ್ರಾಣಿ ವೇದಾನಧ್ಯಾಪಯಂತು ವಾ ।**
**ಯೇಽತ್ರಾಧಿಕಾರಿಣೋ ಮೇ ತು ನಾಧಿಕಾರೋಽಕ್ರಿಯತ್ವತಃ ॥ ೭ ॥**

ಭಾವಾನುವಾದ :- ಅವಧೂತ ಹೇಳುತ್ತಾನೆ - ತಿಳಿವಳಿಕೆಯಿರದ ಜನ ಬೇಕಾದರೆ ಮಕ್ಕಳು - ಮರಿ ಎಂಬ ಬಯಕೆಗಳಿಂದ

ಸಂಸಾರಿಗಳಾಗಿ ದುಃಖಪಡಲಿ; ದುಃಖಿಗಳಾಗಿ ಸಂಸಾರದಲ್ಲಿರಲಿ. ನಾನಾದರೋ ಪರಿಪೂರ್ಣವಾದ ಆನಂದದಲ್ಲಿರುವವನು; ಯಾವ ಬಯಕೆಯಿರದ ನಾನು ಸಂಸಾರದಲ್ಲಿದ್ದು ಯಾಕೆ ದುಃಖಪಡಬೇಕು ? ಪರಲೋಕಕ್ಕೆ ಹೋಗಬೇಕೆನ್ನುವವರು ಬೇಕಾದರೆ ವೇದೋಕ್ತಕರ್ಮಗಳನ್ನು ಮಾಡಲಿ. ಎಲ್ಲ ಲೋಕಗಳೂ ನನ್ನಲ್ಲಿಯೇ ಇರುವಾಗ ನಾನು ಕರ್ಮ ಮಾಡಬೇಕಾದುದು ಯಾವ ಕಾರಣಕ್ಕಾಗಿ ? ಬೇಕಾದವರು ಅದರಲ್ಲಿ ಅಧಿಕಾರವಿದ್ದವರು ಶಾಸ್ತ್ರಗಳನ್ನು ಹೇಳಲಿ, ವೇದಗಳನ್ನು ಓದಲಿ. ನನಗಂತೂ ಕರ್ಮದ ಗೊಡವೆಯಿರದು; ಅಧಿಕಾರದ ಸೊಲ್ಲೇ ಇಲ್ಲ.

**ವಿವರಣೆ :-** ಅವಧೂತನಿಗೂ ಸಾಮಾನ್ಯಜನರಿಗೂ ಇರುವ ಅಂತರವನ್ನು ಇಲ್ಲಿ ಮೂರು ಶ್ಲೋಕಗಳಲ್ಲಿ ತಿಳಿಯಹೇಳಲಾಗಿದೆ. ಸಾಮಾನ್ಯರಿಗೆ ಹೆಂಡಿರು-ಮಕ್ಕಳು, ಮನೆ-ಮಠ, ಹೊನ್ನು-ಹಿರಿಮೆ ಮೊದಲಾದ ಹಲವು ಬಯಕೆಗಳಿರುತ್ತವೆ. ಬಯಕೆಗಳನ್ನು ತೀರಿಸಿಕೊಳ್ಳಲು ಕೆಲಸದಲ್ಲಿ ತೊಡಗುತ್ತಾರೆ. ಇದು ಹುಟ್ಟು-ಸಾವುಗಳಿಗೆ ಕಾರಣವಾಗುತ್ತದೆ. ಇದೇ ಸಂಸಾರ. ಇದಕ್ಕೆ ಮೂಲ, ದಿಟವಾದುದು ಏನು, ತೋರಿಕೆ ಯಾವುದು ಎಂಬ ವಿವೇಕವಿಲ್ಲದಿರುವುದು. ಇದನ್ನು ಅವಿದ್ಯೆಯೆನ್ನುತ್ತಾರೆ. ಹೀಗೆ ಅವಿದ್ಯಾ-ಕಾಮ-ಕರ್ಮ-ಫಲ-ಭೋಗ-ಸುಖದುಃಖ ಈ ಸರಪಳಿ ಒದಗಿಬರುತ್ತದೆ. ಅವಧೂತರು ಅವಿದ್ಯೆಯನ್ನೇ ತೊಡೆದು ಹಾಕಿರುತ್ತಾರೆ. ಚಿತ್ತವಿಶುದ್ಧಿಪ್ರಕರಣದಲ್ಲಿ ಹೇಳಿರುವಂತೆ,

**'ಯತ್ಸತ್ಯಮಿತಿ ಬಾಲಾನಾಂ ತನ್ಮಿಥ್ಯಾ ಖಲು ಯೋಗಿನಾಂ ॥'**

ತಿಳಿವಳಿಕೆಯಿಲ್ಲದವರಿಗೆ ಯಾವುದು ಸತ್ಯವೋ, ಯೋಗಿಗೆ ಅದು ಮಿಥ್ಯೆ. ಅವನು ಇರುವುದನ್ನು ಇರುವಂತೆಯೇ ಕಾಣುವನು;

ತೋರಿಕೆಗಳು ಅವನನ್ನು ಮರುಳುಮಾಡಲಾರವು. ದುಃಖವಿರುವುದು ಸಂಸಾರದಲ್ಲಿಯೇ. ಸಂಸಾರವನ್ನೇ ಒದರಿಬಿಟ್ಟವನಿಗೆ ದುಃಖವೆಲ್ಲಿಯದು ? ಆತ್ಮದ ಸ್ವಭಾವ ಆನಂದ; ಜೀವಭಾವದಿಂದ ಸುಖದುಃಖಗಳ ಅನುಭವ. ಅವಧೂತನಿಗೆ ಜೀವಭಾವವಿರದು; ಆತ್ಮಸ್ಥಿತಿಯೇ ಇರುವಾಗ ಅವನು ಆನಂದಪರಿಪೂರ್ಣನೇ.

ಈ ಲೋಕದ ಕಷ್ಟ-ದುಃಖಗಳಿಗೆ ಕಾರ್ಪಣ್ಯ-ಕೊರತೆಗಳಿಗೆ ಅಂಜಿ ಪರಲೋಕದ ಸುಖ-ಸಮೃದ್ಧಿಗಳ ಕನಸು ಕಾಣುವುದನ್ನು ಸಾಮಾನ್ಯ ಜನರಲ್ಲಿ ಕಾಣಬಹುದು. ಅವಧೂತನು ಆತ್ಮನಿಷ್ಠನಾದುದರಿಂದ ಅವನಿಗೆ ಈ ಲೋಕದ ಕಷ್ಟ-ದುಃಖಗಳು, ಕೊರತೆ-ಕಾರ್ಪಣ್ಯಗಳು ತೋರಿಕೊಳ್ಳುವುದಿಲ್ಲ. ಎಲ್ಲ ಲೋಕಗಳ ಸುಖವೂ ಅವನಲ್ಲಿಯೇ ಇದೆ; ಅವನು ಪರಮಾನಂದಪರಿಪೂರ್ಣ. ಸ್ವರ್ಗಸುಖವನ್ನನುಭವಿಸ-ಬೇಕೆನ್ನುವವರು ಬ್ರಾಹ್ಮಣಾದಿಗ್ರಂಥಗಳಲ್ಲಿ ವಿಧಿಸಿರುವ ಯಜ್ಞಯಾಗಾದಿ ಕರ್ಮಗಳಲ್ಲಿ ತೊಡಗುತ್ತಾರೆ. ಅವಧೂತನಿಗೆ ತಾನಿರುವ ಆತ್ಮಾನಂದವೇ ಅನುಭವದಲ್ಲಿರುವಾಗ ಅವನು ಇಂಥ ಕರ್ಮಗಳನ್ನು ಮಾಡಬೇಕಾದ ಅಗತ್ಯವೇನು? ಕರ್ಮಗಳಿಂದ ಬರುವ ಫಲ ಆಗಾಮಿ, ಮುಂದೆಂದೋ ಬರುವುದು; ಅವಧೂತನಿಗೆ ಅದು ಈಗಲೇ ಇದೆ. ಮತ್ತೆ, ಅವನ ಆನಂದವೇನು ತಾನು ಮಾಡಿದ ಕರ್ಮಗಳಿಂದ ಬಂದ ಫಲವಲ್ಲ. ಎಂದೆಂದೂ ಇರುವ ಆತ್ಮನ ಸಹಜಸ್ವಭಾವವೇ ಅದು. ವಸ್ತುತಂತ್ರ ಅದು, ಪುರುಷತಂತ್ರವಲ್ಲ.

ವೇದೋಕ್ತ ಕರ್ಮಗಳನ್ನು ಮಾಡಲು ಅಧಿಕಾರವಿರಬೇಕು – 'ಅರ್ಥೀ ಸಮರ್ಥೋ ವಿದ್ವಾನ್ ಅಧಿಕ್ರಿಯತೇ' ಎಂಬ ಮಾತಿದೆ. ಕರ್ಮ ಮಾಡಬೇಕೆನ್ನುವವನಿಗೆ ಕರ್ಮಫಲದ ಬಯಕೆಯಿರಬೇಕು; ಬಯಕೆಯೇ ಇರದಿದ್ದರೆ ಕರ್ಮವನ್ನೇಕೆ ಕೈಕೊಳ್ಳುತ್ತಾನೆ? ಕರ್ಮ

ಮಾಡಲು ಅಗತ್ಯವಾದ ದೇಹದಾರ್ಢ್ಯ, ಧನ ಸಮೃದ್ಧಿ, ವಸ್ತು ಸಂಗ್ರಹಣ, ಜನಾನುರಾಗ ಎಲ್ಲವೂ ಇರಬೇಕು. ಇದು ಸಾಮರ್ಥ್ಯ. ಮತ್ತೆ, ಕರ್ಮ ಮಾಡುವ ಕ್ರಮ, ದೇವತೆ, ಸಂವಿಧಾನ, ಮಂತ್ರಗಳು ಇವೆಲ್ಲವೂ ಕರ್ಮ ಮಾಡುವವನಿಗೆ ತಿಳಿದಿರಬೇಕು. ಇದು ವಿದ್ವತ್ತು. ಇಷ್ಟಿದ್ದರೆ ಅಧಿಕಾರವೆಂದಾಯಿತು.

**ನಿದ್ರಾಭಿಕ್ಷೇ ಸ್ನಾನಶೌಚೇ ನೇಚ್ಛಾಮಿ ನ ಕರೋಮಿ ಚ ।**
**ದ್ರಷ್ಟಾರಶ್ಚೇತ್ ಕಲ್ಪಯಂತು ಕಿಂ ಮೇ ಸ್ಯಾದನ್ಯಕಲ್ಪನಾತ್ ॥ ೮ ॥**

**ಭಾವಾನುವಾದ** :- ನಿದ್ರೆ ಮಾಡುವುದು, ಭಿಕ್ಷೆ ಬೇಡುವುದು (ಯತಿಯಾಗಿದ್ದುಕೊಂಡು), ಸ್ನಾನ, ಶೌಚ ಮೊದಲಾದುವೆಲ್ಲ ನನಗೆ ಹಿಡಿಸುವುದಿಲ್ಲ, ಅವುಗಳನ್ನು ಮಾಡುವುದೂ ಇಲ್ಲ. ನೋಡುತ್ತಿರುವವರು ಬೇಕಾದರೆ ನಾನು ಹೀಗೆ ಮಾಡುತ್ತಿರುವೆನೆಂದು ಅಂದುಕೊಳ್ಳಲಿ; ಆ ಕಲ್ಪನೆಗಳೇ ಇಲ್ಲದ ನನಗೆ ಅವರ ಕಲ್ಪನೆಗಳಿಂದೇನು ?

**ವಿವರಣೆ** :- ದೇಹಕ್ಕೆ ವಿಹಿತವಾದುದು ಎಚ್ಚರ, ನಿದ್ರೆ. ದೇಹ ಉಳಿಯುವ ಸಲುವಾಗಿ ಆಹಾರ. ಆಹಾರ ತಾನಾಗಿ ಬರುವುದಲ್ಲ; ಅದನ್ನು ಪಡೆದುಕೊಳ್ಳಬೇಕು. ಸಂನ್ಯಾಸಿಯಾದವನು ಭಿಕ್ಷೆಯೆತ್ತಿ ಆಹಾರವನ್ನು ಪಡೆದುಕೊಳ್ಳುವನು. ದೇಹದ ಅಭಿಮಾನವಿದ್ದರೆ ಆಯಾಸ ಪರಿಹಾರಕ್ಕಾಗಿ ನಿದ್ರೆ ಮಾಡಬೇಕೆನಿಸುತ್ತದೆ; ದೇಹದ ಸುಖಕ್ಕಾಗಿ ಆಹಾರವನ್ನು ಸ್ವೀಕರಿಸಬೇಕೆನಿಸುತ್ತದೆ. ದೇಹದ ಅಭಿಮಾನವಿಲ್ಲದ ಅವಧೂತನಿಗೆ ಈ ಬಯಕೆಗಳಿರುವುದಿಲ್ಲ. ಅವನು ನಿದ್ರೆ ಮಾಡುತ್ತಾನೆ, ದಿಟ; ಆಹಾರವನ್ನೂ ಉಣ್ಣುವನು ಹೌದು. ಆದರೆ ಆತ್ಮನಿಗೆ ನಿದ್ರೆಯ ಅಥವಾ ಆಹಾರದ ಅಗತ್ಯವಿದೆಯೆಂದು ಅವನಿಗನಿಸದು. ನಿದ್ರೆ ಮಾಡುವಾಗಲಾಗಲಿ ಆಹಾರವನ್ನು ಸ್ವೀಕರಿಸುವಾಗಲಾಗಲಿ ತಾನು ಮಾಡುತ್ತಿರುವೆನೆಂಬ ಕಲ್ಪನೆ ಅವನಿಗಿರದು. ದೇಹ ನಿದ್ರೆ

ಮಾಡುತ್ತದೆ. ಆಹಾರವನ್ನು ಉಣ್ಣುತ್ತದೆ. ಆದರೆ ಅವಧೂತ ಇರುವುದು ದೇಹದಲ್ಲಲ್ಲ, ಆತ್ಮದಲ್ಲಿ. ದೇಹಕ್ಕಿಂತ ಬೇರೆಯಾಗಿರುವ ತನ್ನ ಇರವಿನ ಅರಿವು ಅವನದು. ಆ ನೆಲೆಯಲ್ಲಿ ಅವನು ನಿದ್ರೆ ಮಾಡುವುದೂ ಇಲ್ಲ, ಭಿಕ್ಷೆ ಬೇಡುವುದೂ ಇಲ್ಲ.

ಹಾಗೆಯೇ ಮೀಯುವುದು, ಮಡಿಯುಡುವುದು, ಒಳಗೆ-ಹೊರಗೆ ಶುಚಿಮಾಡುಕೊಳ್ಳುವುದು ಮೊದಲಾದ ವರ್ಣಾಶ್ರಮೋಚಿತ ವಿಧಿಗಳು ಸಾಮಾನ್ಯ ಮನುಷ್ಯರಿಗೆ ಕಟ್ಟುಪಾಡುಗಳು. ಅವಧೂತನನ್ನು ಅವು ನಿರ್ಬಂಧಿಸುವುದಿಲ್ಲ. ಅವನು ಸ್ನಾನ ಮಾಡಬಹುದು, ಶುಚಿಯಾಗಿರಬಹುದು; ಆದರೆ ಅವು ಅನಾತ್ಮ ಸಂಬಂಧವುಳ್ಳವು ಎಂಬ ಅರಿವು ಅವನಿಗಿರುತ್ತದೆ. ಆತ್ಮನಿಗೆ ಸ್ನಾನವಾಗಲಿ ಶೌಚವಾಗಲೀ ಬೇಕಾದುದಿಲ್ಲ. ಆತ್ಮ ಯಾವಾಗಲೂ ಶುದ್ಧವೇ, ಶುಚಿಯೇ. ಅವಧೂತನದು ಆತ್ಮನಿಷ್ಠೆ, ಆತ್ಮರತಿ, ಆತ್ಮತೃಪ್ತಿ. ಹೀಗಾಗಿ ಅವನಲ್ಲಿ ದೇಹೇಂದ್ರಿಯಗಳಿಗೆ ಸಂಬಂಧಪಟ್ಟ ಕಲ್ಪನೆಗಳಿಗೆ ಅವಕಾಶವಿರದು.

ನೋಡುವವರು ಎಂದರೆ ಅವಧೂತನ ಸುತ್ತಮುತ್ತ ಇರುವ ಮಂದಿ; ಅವರೇನು ಅವಧೂತರಲ್ಲ. ಅವರಿಗೆ ಆತ್ಮದ ನೆಲೆಯಲ್ಲಿ ವ್ಯವಹರಿಸುವ ಸೌಕರ್ಯವಿರುವುದಿಲ್ಲ, ಅವರು ಅವಧೂತನನ್ನು ನೋಡುವುದೂ ಅವನ ದೇಹ, ಇಂದ್ರಿಯಗಳ ಮೂಲಕವೇ. ಅವನ ನಡೆ-ನುಡಿಗಳನ್ನಷ್ಟೆ ಅವರು ಗಮನಿಸುವುದು. ತಮ್ಮಂತೆ ಅವನೂ ದೇಹವುಳ್ಳವನು, ತಮ್ಮಂತೆ ಅವನೂ ಸಂಸಾರದಲ್ಲಿರುವವನು ಎಂಬ ಎಣಿಕೆ ಅವರದ್ದು. ತಮ್ಮಂತೆಯೇ ನಿದ್ರೆ, ಆಹಾರಸ್ವೀಕಾರ, ಸ್ನಾನ, ಶೌಚ ಮೊದಲಾದುವುಗಳಲ್ಲಿ ಅವಧೂತನೂ ತೊಡಗಿರಬೇಕೆಂದು ನಿರೀಕ್ಷಿಸುವರು. ಅವರ ಕಲ್ಪನೆಗಳು ಅವಧೂತನಿಗಿರುವುದಿಲ್ಲ. ಈ ತಿಳಿವಳಿಕೆ ಅವರಿಗಿರುವುದಿಲ್ಲ. ಬೇರೆಯವರ ಕಲ್ಪನೆಗಳಿಗೆ ತಾನು

ಹೊಂದಿಕೊಳ್ಳಬೇಕೆಂಬ ಕಾತರವಾಗಲಿ ಅವಧೂತನಿಗಿರದು. ತನ್ನ ಪಾಡು ತನ್ನದು ; ಹೇಗೆ ಬೇಕೋ ಹಾಗೆ ಇರುವ ಸ್ವತಂತ್ರ್ಯ ತನಗಿದೆ. ಬೇರೆಯವರ ಅನಿಸಿಕೆಗಳ, ಬಯಕೆಗಳ ಗೊಡವೆ ತನಗೇಕೆ ?

ಅವಧೂತನು ಪ್ರಪಂಚವನ್ನೇ ಬಿಟ್ಟವನು, ಎಂದರೆ ತನ್ನ ಒಳಗೆ ಇದ್ದ ಪ್ರಪಂಚಭಾವವನ್ನು ಕಿತ್ತೊಗೆದವನು; ಎಂದ ಮೇಲೆ ತನ್ನನ್ನು ನೋಡುವವರನ್ನು ಮೆಚ್ಚಿಸಬೇಕೆಂಬ ಗೀಳು ಅವನಿಗಿರದು. ನೋಡುವವರ ಕಲ್ಪನೆ ಏನಿದ್ದರೆ ಅವನಿಗೇನು ? ತನ್ನೊಳಗೇ ಕಲ್ಪನೆಗಳಿಲ್ಲದಿದ್ದಮೇಲೆ ಬೇರೆಯವರ ಕಲ್ಪನೆಗಳನ್ನೇಕೆ ಕಟ್ಟಿಕೊಂಡಾನು? ಅವನದು ಆತ್ಮಾಭ್ಯಾಸ. ತಾನು ಯಾವಾಗಲೂ ಎಲ್ಲ ಸ್ಥಿತಿಗಳಲ್ಲೂ ಎಲ್ಲ ಸಂದರ್ಭಗಳಲ್ಲೂ ಆತ್ಮನೇ ಎಂದು ದೃಢಪಡಿಸಿಕೊಳ್ಳುವುದು ಆತ್ಮಾಭ್ಯಾಸ. ತಾನು ದೇಹವಲ್ಲ, ಇಂದ್ರಿಯಗಳಲ್ಲ, ಮನಸ್ಸಲ್ಲ, ಇವೆಲ್ಲದರ ಸಂಘಾತರೂಪವಾದ ಜೀವವೂ ಅಲ್ಲ. ಈ ಬಗೆಯ ಸಂಕೋಚ, ನಿರ್ಬಂಧ, ಆವರಣಗಳಿಲ್ಲದ ಆತ್ಮ ತಾನು ಎಂದುಕೊಂಡಾಗ, ಹೊರಗೆ ಹರಿಯುವ ಮನಸ್ಸು ಒಳಗೆ ತಲೆಹಾಕುತ್ತದೆ, ಅಂತರ್ಮುಖವಾಗುತ್ತದೆ. ಹಾಗಾಗಿ ಅದು ಆತ್ಮಾಕಾರವನ್ನೇ ತಳೆಯುತ್ತದೆ. ಉಳಿದಂತೆ ಯಾವ ಕಲ್ಪನೆಗಳಿಗೂ ಆಗ ಅಲ್ಲಿ ಎಡೆಯಿರುವುದಿಲ್ಲ.

ಅವನು ದೈನಂದಿನ ಕರ್ತವ್ಯಗಳನ್ನು ಮಾಡುವಾಗ ಅವುಗಳ ಮೇಲೆ ಗಮನವಿರುವುದಿಲ್ಲ. ಅವು ಯಾಂತ್ರಿಕವಾಗಿ, ಸ್ವಾಭಾವಿಕವಾಗಿ ನಡೆದುಹೋಗುತ್ತವೆ. ಇವನ ಇಚ್ಛೆ, ಸಂಕಲ್ಪ ಇವು ಯಾವುವೂ ಅಲ್ಲಿರುವುದಿಲ್ಲ. ಹಾಗೆ ಮಾಡುವಾಗ ದೇಹಾಭಿಮಾನವಾಗಲಿ ಇರುವುದಿಲ್ಲ. ಅವು ಆತ್ಮಕ್ಕೆ ಸಂಬಂಧಪಟ್ಟ ಕೆಲಸಗಳಲ್ಲವಲ್ಲ ? ಅವನಿರುವುದು ಆತ್ಮದಲ್ಲಿ. ಅವನ ಪಾಲಿಗೆ ಆತ್ಮವೊಂದೇ (ಎಂದರೆ ತಾನೊಂದೇ) ದಿಟ.

**ಶೃಣ್ವಂತ್ವಜ್ಞಾತತತ್ತ್ವಾಸ್ತೇ ಜಾನನ್ ಕಸ್ಮಾಚ್ಛೃಣೋಮ್ಯಹಂ ।**
**ಮನ್ಯಂತಾಂ ಸಂಶಯಾಪನ್ನಾ ನ ಮನ್ಯೇಽಹಮಸಂಶಯಃ ॥ ೯ ॥**

**ವಿಪರ್ಯಸ್ತೋ ನಿದಿಧ್ಯಾಸೇ ಕಿಂ ಧ್ಯಾನಮವಿಪರ್ಯಯೇ ।**
**ದೇಹಾತ್ಮತ್ವವಿಪರ್ಯಾಸಂ ನ ಕದಾಚಿದ್ ಭಜಾಮ್ಯಹಂ ॥ ೧೦ ॥**

**ಅಹಂ ಮನುಷ್ಯ ಇತ್ಯಾದಿ ವ್ಯವಹಾರೋ ವಿನಾಪ್ಯಮುಂ ।**
**ವಿಪರ್ಯಾಸಂ ಚಿರಾಭ್ಯಸ್ತವಾಸನಾತೋಽವಕಲ್ಪತೇ ॥ ೧೧ ॥**

**ಭಾವಾನುವಾದ** :- ಅವರು (ಸಾಮಾನ್ಯ ಜನರು) ತತ್ತ್ವವನ್ನು ತಿಳಿದವರಲ್ಲ; ಅವರು ಬೇಕಾದರೆ ಶಾಸ್ತ್ರವನ್ನು ಕೇಳಲಿ (ಶ್ರವಣ ಮಾಡಲಿ). ತತ್ತ್ವವನ್ನರಿತು ಕೊಂಡ ನಾನು ಶ್ರವಣ ಮಾಡಬೇಕಾದುದೇಕೆ ? ಸಂಶಯಗಳಿರುವ ಅವರು ಮನನಮಾಡಲಿ. ನನಗೇನು ಸಂಶಯವಿರದು, ನಾನೇಕೆ ಮನನಮಾಡಬೇಕು ? ವಿಪರ್ಯಾಸಕ್ಕೆ (ಎಂದರೆ ತಪ್ಪು ಕಲ್ಪನೆಗಳಿಗೆ) ಈಡಾದವರು ನಿದಿಧ್ಯಾಸ ಮಾಡಲಿ. ನನಗೇನು ವಿಪರ್ಯಯ ಇರದಲ್ಲ, ನಾನು ಧ್ಯಾನ ಮಾಡಬೇಕಾದುದೇಕೆ ? ದೇಹವೇ ಆತ್ಮವೆಂದು ಬಗೆಯುವುದು ವಿಪರ್ಯಾಸ. ನನಗೆ ಎಂದೂ ಇದು ಇರುವುದಿಲ್ಲ. 'ನಾನು ಮನುಷ್ಯ' ಮೊದಲಾದ ವ್ಯವಹಾರವು ಈ ವಿಪರ್ಯಾಸವಿಲ್ಲದೆ ಒದಗದು; ಬಹು ಕಾಲದಿಂದ ಬಳಕೆಗೆ ಬಂದ ವಿಪರ್ಯಾಸದ ವಾಸನೆಯೇ ವ್ಯವಹಾರಕ್ಕೆ ಕಾರಣವಾಗುತ್ತದೆ.

**ವಿವರಣೆ** :- ವೇದಾಂತ ಶಾಸ್ತ್ರದಲ್ಲಿ ಬ್ರಹ್ಮಜ್ಞಾನಕ್ಕೆ ಸಾಕ್ಷಾತ್ ಸಾಧನೆಯಾಗಿ ಶ್ರವಣ (ಶಾಸ್ತ್ರವನ್ನು ಗುರುಗಳಿಂದ ಕೇಳಿ ತಿಳಿದು ಕೊಳ್ಳುವುದು), ಮನನ (ಅನಂತರ ಶಾಸ್ತ್ರದ ತಾತ್ಪರ್ಯವನ್ನು ತಮ್ಮ ಯುಕ್ತಿಯಿಂದ, ಅನುಭವದಿಂದ ವಿಚಾರಮಾಡಿ ಮನವರಿಕೆಯಿಂದ

ಖಚಿತಪಡಿಸಿಕೊಳ್ಳುವುದು), ನಿದಿಧ್ಯಾಸನ (ಹಾಗೆ ಖಚಿತಪಡಿಸಿ ಕೊಂಡದ್ದನ್ನು ಏಕಾಗ್ರಚಿತ್ತದಿಂದ ಅನುಸಂಧಾನ ಮಾಡುವುದು) ಎಂಬ ಮೂರು ಹಂತಗಳನ್ನು ಹೇಳಿದ್ದಾರೆ.

ಬ್ರಹ್ಮವೆಂದರೆ ಯಥಾರ್ಥತತ್ತ್ವ; ಇರುವ ಆ ವಸ್ತುವನ್ನು ಅದು ಇದ್ದಂತೆಯೇ ತಿಳಿಯುವುದು ಜ್ಞಾನ. ಸಾಮಾನ್ಯ ಜನರಿಗೆ ಬ್ರಹ್ಮವಾಗಲಿ ಬ್ರಹ್ಮಜ್ಞಾನದ ವಿಚಾರವಾಗಲಿ ತಿಳಿದೇ ಇರುವುದಿಲ್ಲ. ಅವರ ವ್ಯವಹಾರ ದಲ್ಲಿ ಇದು ಬಂದಿರುವುದಿಲ್ಲ. ಹಾಗಿರುವುದರಿಂದ ಶಾಸ್ತ್ರವನ್ನು ಶ್ರವಣಮಾಡಿಯೇ ಆತ್ಮ, ಬ್ರಹ್ಮ ಎಂಬುದನ್ನು ತಿಳಿದುಕೊಳ್ಳಬೇಕು. ಅವಧೂತರು ವ್ಯವಹಾರದಿಂದ ದೂರವಾಗಿದ್ದುಕೊಂಡು ಆತ್ಮನಿಷ್ಠ ರಾಗಿಯೇ ಇರುತ್ತಾರೆ, ಬ್ರಹ್ಮ ಅವರ ನೇರ ಅನುಭವದಲ್ಲಿಯೇ ಇರುತ್ತದೆ. ಅಂಥವರು ಶ್ರವಣವನ್ನೇಕೆ ಮಾಡಬೇಕು ?

ಶಾಸ್ತ್ರದಿಂದ ತಿಳಿದುಕೊಂಡದ್ದರಲ್ಲಿ ಸಂಶಯಗಳಿರುತ್ತವೆ, ಸರಿಯಾಗಿ ತಾತ್ಪರ್ಯ ಸ್ಫುರಿಸುವುದಿಲ್ಲ. ಆಗ ಮನನ ಮಾಡಬೇಕು. ಮನನದಿಂದ ಸಂಶಯಪರಿಹಾರವಾಗುತ್ತದೆ. ಅವಧೂತರ ಅನುಭವ ಆತ್ಮಸ್ವರೂಪವನ್ನೇ ಕುರಿತದ್ದು. ಅವರಿಗೆ ಸಂಶಯಗಳಿರುವುದು ಹೇಗೆ ? ನೇರವಾಗಿ ಕಂಡದ್ದರಲ್ಲಿ ಸಂದೇಹವೇನು ? ಅವರು ಮನನ ಮಾಡಬೇಕಾದುದೇಕೆ ?

ಶಾಸ್ತ್ರದಿಂದ ಅಧ್ಯಾತ್ಮವನ್ನು ಅರಿತುಕೊಂಡಮೇಲೆ, ಮನನದಿಂದ ಸಂದೇಹಗಳನ್ನೆಲ್ಲ ತೊಲಗಿಸಿಕೊಂಡಮೇಲೆ ನಿದಿಧ್ಯಾಸನವೆಂಬ ವಿಧಿ. ಇರುವ ತತ್ತ್ವವನ್ನು ಬೇರೆ ರೀತಿಯಾಗಿ ಕಂಡುಕೊಂಡರೆ, ಅದು ವಿಪರ್ಯಾಸ (ಅನ್ಯಥಾಜ್ಞಾನ). ದೇಹವನ್ನೆ ಆತ್ಮವೆಂದು ಬಗೆಯು ವುದು, ಜಗತ್ತಿನ ತೋರಿಕೆಯನ್ನು ದಿಟವೆಂದೇ ಬಗೆಯುವುದು

ವಿಪರ್ಯಾಸ (ಅಥವಾ ವಿಪರ್ಯಯ). ಇದನ್ನು ಹೋಗಲಾಡಿಸಿಕೊಳ್ಳುವ ಉಪಾಯ ನಿದಿಧ್ಯಾಸನ ಅಥವಾ ಧ್ಯಾನ. ವಸ್ತು ನೇರವಾಗಿ ಅನುಭವಕ್ಕೆ ಬರದಿದ್ದಾಗ ಮನಸ್ಸು ಅದನ್ನು ಹೀಗೆ, ಹಾಗೆ ಎಂದು ಕಲ್ಪಿಸಿಕೊಳ್ಳುತ್ತದೆ.

ಅವಧೂತರದ್ದು ನೇರವಾದ ಅನುಭವವೇ ಆದುದರಿಂದ ವಿಪರ್ಯಾಸ ಎಲ್ಲಿಯದು ? ಅವರು ಧ್ಯಾನದಲ್ಲಿ ತೊಡಗುವ ಅಗತ್ಯವಾದರೂ ಏನು ? ಅವರಿಗೆ ದೇಹವೇ ಆತ್ಮ ಎಂಬ ಕಲ್ಪನೆ ಇರುವುದೇ ಇಲ್ಲ. ದೇಹದಲ್ಲಿದ್ದರೂ ಆತ್ಮ ಆತ್ಮವೇ, ಆತ್ಮವೇನು ದೇಹವಾಗುವುದಿಲ್ಲ. 'ನಾನು ಮನುಷ್ಯ' ಎಂದು ನಾವು ಹೇಳಿಕೊಳ್ಳುವಾಗ ನಮ್ಮ ದೇಹ ಇಂದ್ರಿಯಗಳು ಮನಸ್ಸು ಇವು ಎಣಿಕೆಗೆ ಬಂದು ಮನುಷ್ಯತ್ವವನ್ನು ಆತ್ಮದ ಮೇಲೆ ಅಧ್ಯಾರೋಪ ಮಾಡುವುದಾಗುತ್ತದೆ. ಆತ್ಮವೇನು ದಿಟವಾಗಿ ಮನುಷ್ಯನಲ್ಲ. ಇರುವ ಎಲ್ಲವೂ ಆತ್ಮವೇ (ಸರ್ವಂ ಖಲ್ವಿದಂ ಬ್ರಹ್ಮ) ಎನ್ನುವಾಗ ಸಣ್ಣ ಹುಳುವಿನಿಂದ ಹಿಡಿದು ಸೃಷ್ಟಿಕರ್ತನಾದವನವರೆಗೆ ಆತ್ಮವೇ ಇರುವುದು. ಆದರೆ ಎಲ್ಲೆಲ್ಲಿಯೂ ಮೊದಲಿಂದಲೂ 'ಇದು', 'ಅದು', 'ನಾನು', 'ನೀನು' ಎಂಬ ತಪ್ಪು ತಿಳುವಳಿಕೆಯ ವ್ಯವಹಾರವೇ ವಾಡಿಕೆಯಲ್ಲಿದೆ. ಲೋಕವ್ಯವಹಾರಕ್ಕೆ ಮೂಲ ಈ ವಿಪರ್ಯಾಸವೇ. ಅವಧೂತನಿಗಾದರೆ ಇದಿರದು.

ಶ್ರವಣ ಮನನ-ನಿದಿಧ್ಯಾಸಗಳನ್ನು ಆತ್ಮಸಾಕ್ಷಾತ್ಕಾರಕ್ಕೆ ಉಪಾಯಗಳೆಂದು ಹೇಳಿದೆವಲ್ಲ ? ಅವುಗಳಲ್ಲಿ ಶ್ರವಣವೆಂದರೆ ಏನನ್ನಾದರೂ ಕೇಳುವುದಲ್ಲ. ಆತ್ಮತತ್ತ್ವವನ್ನು ತಿಳಿಯಹೇಳುವ ಉಪನಿಷದ್‌ವಾಕ್ಯಗಳನ್ನು ಗುರು ಮುಖೇನ ಕೇಳುವುದು. ಗುರುವೆಂದರೆ ಬರಿಯ ಪಂಡಿತನಲ್ಲ, ವಾಕ್ಯಗಳ ಶಬ್ದಾರ್ಥವನ್ನು

ಅರಿತುಕೊಂಡು, ವಾಕ್ಯಗಳ ವ್ಯಾಕರಣಾದಿ ವಿಶೇಷಗಳನ್ನು ವಿವರಿಸು ವವನಲ್ಲ. ಆತ್ಮತತ್ತ್ವದ ಅನುಭವವನ್ನು ತಾನೇ ಪಡೆದುಕೊಂಡಿದ್ದು, ಶಿಷ್ಯರಾಗಿ ಬಂದವರಿಗೆ ಅನುಭವವನ್ನು ಒದಗಿಸುವ ಸಾಮರ್ಥ್ಯ ವುಳ್ಳವನು ಗುರು. ಗುರುವಿನಿಂದ ಶಿಷ್ಯನಿಗೆ ಬೇಕಾದುದು ಬರಿಯ ಶ್ರವಣವಲ್ಲ, ಆತ್ಮಸಾಕ್ಷಾತ್ಕಾರ. ಇದನ್ನು ಒದಗಿಸಲಾರದವನು ಎಂಥ ಗುರು ? ಪಾಠ ಹೇಳುವವನು ಅಧ್ಯಾಪಕ; ವೇದಾಂತಪಾಠವಾಗಲಿ ಅದನ್ನು ಹೇಳುವವನು ಅಧ್ಯಾಪಕನೇ, ಗುರುವಲ್ಲ. ದೇಹಕ್ಕಿಂತ ಬೇರೆಯಾದ ಆತ್ಮತತ್ತ್ವದ ಇರವನ್ನು ಅರಿವನ್ನು ಮನದಟ್ಟುಮಾಡಿ ಕೊಳ್ಳುವುದು ವೇದಾಂತ ಶ್ರವಣದಿಂದ.

ಶ್ರದ್ಧೆಯಿಂದ ತತ್ತ್ವವನ್ನು ತಿಳಿದುಕೊಂಡನಂತರ ಅದನ್ನು ತನ್ನದಾಗಿ ಮಾಡಿಕೊಳ್ಳುವುದು ಮನನವೆನಿಸಿಕೊಳ್ಳುತ್ತದೆ. ಇಲ್ಲಿ ಆತ್ಮತತ್ತ್ವವನ್ನು ಹಿಡಿದುಕೊಳ್ಳುವುದು ಸಾಧ್ಯವಾಗುತ್ತದೆ. ಹೀಗೆ ಆಗುವಾಗ ಅಧ್ಯಾಪಕನ ಪಾತ್ರವೇನು ಇರದು. ಸಾಧಕನೇ ತನ್ನ ಸಾಮಾನ್ಯ ಅನುಭವದ ಆಧಾರದ ಮೇಲೆ ವಿಚಾರಮಾಡಿ ಯುಕ್ತಿಯಿಂದ ಆತ್ಮತತ್ತ್ವವು ಅನುಭವಕ್ಕೆ ಬರುವ ಬಗೆಯನ್ನು ನಿರ್ಧರಿಸಿಕೊಳ್ಳುತ್ತಾನೆ. ಆತ್ಮದ ಇರವು ದೃಢವಾಗಿ ನಿಶ್ಚಯಕ್ಕೆ ಬಂದಮೇಲೆ, ಅದು ಸ್ವತಃಸಿದ್ಧವೆಂದೂ ಕೇವಲ ಅನುಭವಗಮ್ಯವೆಂದೂ ನಿರ್ಣಯಕ್ಕೆ ಬರುವುದು ಮನನದಿಂದ.

ಇಷ್ಟಾದರೆ ಸಾಲದು. ಅದರಿಂದೇನು ಆತ್ಮ ಸಾಕ್ಷಾತ್ಕಾರವಾದಂತಲ್ಲ. ಜೀವಭಾವ ಇರುವಾಗ, ಪ್ರಪಂಚಭಾವ ಬೇರೂರಿರುವಾಗ ಅಷ್ಟು ಸುಲಭವಾಗಿ ಆತ್ಮದ ಅರಿವು ಮೂಡಿಬಿಡುವುದಿಲ್ಲ. ಬಹಿಃಪ್ರವೃತ್ತಿ, ವಿಷಯಾಸಕ್ತಿ ಎರಡೂ ಜೀವದ ಗುಣಗಳು. ದಾರೇಷಣ, ಪುತ್ರೇಷಣ, ವಿತ್ತೇಷಣಗಳು ಅಂತಃಕರಣದಲ್ಲಿ ಆಳವಾಗಿ ಬೇರು ಬಿಟ್ಟಿರುತ್ತವೆ; ದೇಹ ವಾಸನೆ, ಲೋಕ ವಾಸನೆ, ಶಾಸ್ತ್ರ ವಾಸನೆಗಳು ಜೀವಕ್ಕೆ

ಅಂಟಿಕೊಂಡಿರುತ್ತವೆ. ಅವನ್ನೆಲ್ಲ ಒಮ್ಮೆಲೆ ಕೈಬಿಡುವೆವೆನ್ನುವುದು ಆಗದ ಮಾಡು. ಆತ್ಮತತ್ತ್ವದ ನಿಶ್ಚಯವಾದಮೇಲೆ ಜೀವನಿಶ್ಚಯವೆಂಬುದು ತೊಲಗಬೇಕು. ತಾನು ಜೀವವಲ್ಲ, ಆತ್ಮ (ದೇಹ, ಇಂದ್ರಿಯ, ಮನಸ್ಸು, ನಾನು ಎಂಬ ಉಪಾಧಿಗಳುಳ್ಳದ್ದು ಜೀವ, ಅವು ಇಲ್ಲದ್ದು ಆತ್ಮ) ಎಂಬುದನ್ನು ಅನುಭವಕ್ಕೆ ತಂದುಕೊಳ್ಳುವುದು ಮುಖ್ಯ. ಇದು ಆತ್ಮಾಭ್ಯಾಸ; ಇದನ್ನೇ ನಿದಿಧ್ಯಾಸನವೆನ್ನುತ್ತಾರೆ. ಆತ್ಮಧ್ಯಾನವೆಂದರೂ ಇದೇ. ತಾನು ಆತ್ಮವೆಂದು ಕಂಡುಕೊಂಡು, ಆತ್ಮತ್ವದಲ್ಲಿಯೇ ನೆಲೆಗೊಳ್ಳುವುದು ಇಲ್ಲಿನ ಕೆಲಸ. ಯಾವುದೇ ವ್ಯವಹಾರದಲ್ಲಿಯಾದರೂ ಪ್ರಸಂಗದಲ್ಲಿಯಾದರೂ ತಾನು ದಿಟವಾಗಿ ವ್ಯವಹಾರಗಳಿಂದ ದೂರವಾದ ಆತ್ಮವೇ ಎಂಬ ಎಚ್ಚರವಹಿಸುವುದು ನಿದಿಧ್ಯಾಸನ.

ಸಾಮಾನ್ಯ ಜನರು ಆತ್ಮವನ್ನು ಮರೆಯುತ್ತಾರೆ. ತಾವು ಜೀವ ವೆಂದು ನಿರ್ಧರಿಸಿಕೊಳ್ಳುತ್ತಾರೆ. ಜೀವಭಾವದ ಮೂಲಕ ಪ್ರಪಂಚದಲ್ಲಿ ವ್ಯವಹರಿಸುತ್ತಾರೆ. ಬಹಿಃಪ್ರವೃತ್ತಿ, ವಿಷಯಾಸಕ್ತಿಗಳಿಂದಾಗಿ ಸುಖ ದುಃಖಗಳಿಗೆ ಪಕ್ಕಾಗುತ್ತಾರೆ, ಕ್ಲೇಶಪಡುತ್ತಾರೆ. ವೇದಾಂತಶ್ರವಣ ಮಾಡಿದವರಿಗೂ ತಾವು ಜೀವರೆಂಬ ನಿಶ್ಚಯ ಸಡಿಲವಾಗಿರುವುದಿಲ್ಲ. ಮನನದಿಂದ ನಿರ್ಣಯಮಾಡಿಕೊಂಡಿದ್ದವರಿಗೂ ತಾವು ಆತ್ಮವೇ ಎಂಬ ಅರಿವು ದೃಢವಾಗಿರುವುದಿಲ್ಲ; ಒಮ್ಮೊಮ್ಮೆ ತೋರಿಕೊಂಡು, ಜೀವನಿಶ್ಚಯದ ಒತ್ತಡದಿಂದ ಮರೆಯಾಗಿಬಿಡುತ್ತದೆ. ಶ್ರವಣ-ಮನನಗಳೆರಡೂ ವ್ಯರ್ಥವಾದಂತೆಯೇ. ಹುಟ್ಟಿದಂದಿನಿಂದ ಅನುಸರಿಸಿ ಕೊಂಡು ಬಂದದ್ದಲ್ಲವೆ ಜೀವನಿಶ್ಚಯ ? ಅದು ಪ್ರಬಲವಾಗಿಯೆ ಇರುತ್ತದೆ. ಇದು ಹೋಗಬೇಕೆಂದರೆ ನಿದಿಧ್ಯಾಸನವೇ ದಾರಿ.

ನಿದಿಧ್ಯಾಸನವೆಂದರೆ ಆತ್ಮಧ್ಯಾನ ಎಂದು ಹೇಳಿದೆವಲ್ಲ ? ತಾನು ಆತ್ಮವೆಂಬ ಅನುಭವವು ಗಟ್ಟಿಯಾಗಿ ಬೇರೂರಿಕೊಳ್ಳುವ ಉಪಾಯ

ಇದು. ಇದೇ ಆತ್ಮಾಭ್ಯಾಸ. ಮತ್ತೆ ಮತ್ತೆ, ಎಡೆಬಿಡದೆ, ನಡೆಯ ಬೇಕಾದುದರಿಂದ ಅಭ್ಯಾಸವೆನಿಸಿಕೊಳ್ಳುತ್ತದೆ. ಇಲ್ಲಿ ತಾನು ಆತ್ಮವೆಂಬ ಅನುಭವ ಎನ್ನುವಾಗ ಅನುಭವಿಸುವವನು, ಅನುಭವ, ಅನುಭವಕ್ಕೆ ಬರುವ ವಸ್ತು ಎಂಬ ಮುಕ್ಕೋಟಿಗಳಿರವು. ಸಂಸ್ಕೃತದಲ್ಲಿ ಈ ಮೂವರ ಕೂಟವನ್ನು 'ತ್ರಿಪುಟಿ' ಎನ್ನುತ್ತಾರೆ. ಆತ್ಮಾಭ್ಯಾಸದಲ್ಲಿ ಈ ಬಗೆಯ ತ್ರಿಪುಟಿ ಇರುವುದಿಲ್ಲ. ಅನುಭವಿಸುವವನೇ ಅನುಭವಕ್ಕೆ ಬರುವ ವಸ್ತು, ಆತ್ಮ ; ಮತ್ತೆ ಅನುಭವವೂ ಅದೇ. ಅನುಭವವನ್ನು ಬಿಟ್ಟು ಅಲ್ಲಿ ಬೇರೇನೂ ಇರುವಂತಿಲ್ಲ. ಅಖಂಡಾನುಭವ ಎಂದರೆ ಇದು. ಆತ್ಮವೇ ತಾನಾಗುವುದು. ಎಲ್ಲವಾಗುವುದು; ಒಡೆಯದೆ ಉಂಡೆಯಾಗಿರು ವುದು. ಹೀಗಿರುವಾಗ ಜೀವಭಾವವಿಲ್ಲ, ಪ್ರಪಂಚ ಭಾವವಿಲ್ಲ.

**ಆರಬ್ಧಕರ್ಮಣಿ ಕ್ಷೀಣೇ ವ್ಯವಹಾರೋ ನಿವರ್ತತೇ ।**
**ಕರ್ಮಕ್ಷಯೇ ತ್ವಸೌ ನೈವ ಶಾಮ್ಯೇದ್ ಧ್ಯಾನಸಹಸ್ರತಃ ॥ ೧೨ ॥**

**ವಿರಲತ್ವಂ ವ್ಯವಹೃತೇರಿಷ್ಟಂ ಚೇದ್ ಧ್ಯಾನಮಸ್ತು ತೇ ।**
**ಬಾಧಿತಕರ್ಮವ್ಯವಹೃತಿಂ ಪಶ್ಯನ್ ಧ್ಯಾಯಾಮ್ಯಹಂ ಕುತಃ ॥ ೧೩ ॥**

**ಭಾವಾನುವಾದ :-** ಪ್ರಾರಬ್ಧಕರ್ಮಗಳು ನಾಶವಾಗಲಾಗಿ ವ್ಯವಹಾರವೂ ಅಡಗುತ್ತದೆ. ಇದಕ್ಕೆ ಕರ್ಮನಾಶ ಒಂದೇ ದಾರಿ. ಸಾವಿರಧ್ಯಾನಗಳಿಂದಲೂ ಇದನ್ನು ಸಾಧಿಸಲಾಗುವುದಿಲ್ಲ. ವ್ಯವಹಾರ ಸಡಿಲವಾಗಬೇಕೆಂದರೆ, ಅದು ದಟ್ಟವಾಗಿದ್ದುದು ಕರಗಬೇಕೆಂದರೆ, ಧ್ಯಾನ ಮಾಡು. ಆದರೆ ಕರ್ಮದ ವ್ಯವಹಾರದಿಂದಲೇ ನಾನು ದೂರವಾಗಿದ್ದೇನೆ. ನನಗೆ ಧ್ಯಾನದಲ್ಲಿ ತೊಡಗುವ ಹವ್ಯಾಸವೇಕೆ ?

**ವಿವರಣೆ :-** ಕರ್ಮಗಳಲ್ಲಿ ಸಂಚಿತ, ಆಗಾಮಿ, ಪ್ರಾರಬ್ಧ ಎಂದು ಮೂರು ಬಗೆಗಳು. ಹಿಂದಣ ಜನ್ಮಗಳಿಂದ ಅನುಸರಿಸಿಕೊಂಡು

ಬಂದಿರುವುದು ಸಂಚಿತ (ಎಂದರೆ ಕೂಡಿಟ್ಟುಕೊಂಡದ್ದು). ಮುಂದಿನ ಜನ್ಮಗಳಲ್ಲಿ ಮಾಗಿ ಫಲಕೊಡುವ ಕರ್ಮಗಳು ಆಗಾಮಿ (ಮುಂದೆ ಬರುವುದು). ಫಲಕೊಡಲು ಆಗಲೇ ಶುರುವಾಗಿರುವುದು ಪ್ರಾರಬ್ಧ. ನಮ್ಮ ಈ ದೇಹ, ಸ್ವಭಾವ, ವಂಶ, ಮನೆತನ, ಸಾಮರ್ಥ್ಯ, ಕೊರತೆಗಳು, ದೋಷಗಳು, ಅನುಕೂಲ ಅಥವಾ ಪ್ರತಿಕೂಲ ಪರಿಸರ, ಇವೆಲ್ಲ ಪ್ರಾರಬ್ಧ ಕರ್ಮಗಳಿಂದಲೇ ಒದಗಿಬಂದಿರುವುವು. ನಮ್ಮ ಲೌಕಿಕ ವ್ಯವಹಾರವು ಇದರಿಂದಲೇ ಸಿದ್ಧವಾಗಿರುವುದು. ಆತ್ಮಜ್ಞಾನದಿಂದ ಇವೆಲ್ಲ ಕರ್ಮಗಳೂ ಸುಟ್ಟುಹೋಗುತ್ತವೆ. ಹಾಗೆ ಕರ್ಮಗಳು ನಾಶಗೊಂಡಾಗ ವ್ಯವಹಾರವೂ ನಿಂತಿತೆಂದರ್ಥ. ಆತ್ಮಜ್ಞಾನದ ಪ್ರಯೋಜನವಿಲ್ಲದೆ, ಎಷ್ಟು ಧ್ಯಾನಮಾಡಿದರೂ (ಯೋಗ ಪದ್ಧತಿಯಲ್ಲಿ) ಪ್ರಾರಬ್ಧ ಕರ್ಮವೂ ಮರೆಯಾಗುವುದಿಲ್ಲ, ಅದರಿಂದಾದ ವ್ಯವಹಾರವೂ ನಿಲ್ಲುವುದಿಲ್ಲ.

ಧ್ಯಾನದಿಂದ ಪ್ರಯೋಜನವಿಲ್ಲವೆಂದಲ್ಲ. ಯೋಗದ ಧ್ಯಾನವಲ್ಲದೆ, ವೇದಾಂತದ ಶ್ರವಣ-ಮನನಗಳ ತರುವಾಯ ನಿದಿಧ್ಯಾಸನದಲ್ಲಿ ತೊಡಗುವಾಗಲೂ ಮೇಲೆ ಹೇಳಿದ ವಿಪರ್ಯಾಸ ಅಳಿಯುತ್ತದೆ. ನಿಬಿಡವಾಗಿರುವ ಕರ್ಮವು ಧ್ಯಾನದಿಂದಾಗಿ ವಿರಳವಾಗುತ್ತದೆ. ಆಗ ವ್ಯವಹಾರದಲ್ಲೂ ಸಂಶಯ ವಿಪರ್ಯಾಸಗಳು ಕೃಶವಾಗುತ್ತವೆ. ಜ್ಞಾನ ಮೂಡಿಕೊಳ್ಳಲು ಇದು ನೆರವಾಗುತ್ತದೆ. ಆತ್ಮ ಜ್ಞಾನದಿಂದ ಪರಮಾರ್ಥ ಸಿದ್ಧಿಸುತ್ತದೆ; ವ್ಯವಹಾರ ದೂರ ಸರಿಯುತ್ತದೆ. ಇದು ಸಾಮಾನ್ಯ ಜನರ ಮಾತಾಯಿತು. ಅವಧೂತನಾದವನಿಗಾದರೋ ಕರ್ಮಗಳ ಕಟ್ಟುಪಾಡೇ ಇಲ್ಲ. ಕರ್ಮಗಳ ಕಟ್ಟುಪಾಡನ್ನು ಕಿತ್ತು ಬಿಸಾಡಿದವನೆಂದೇ ಅವನು ಅವಧೂತ. ವ್ಯವಹಾರದ ಅಂಕೆ ಆಡಳಿತಗಳೂ ಅವನನ್ನು ಕಟ್ಟಿ ಹಾಕಲಾರವು ಎಂದ ಮೇಲೆ ಅವನು ಧ್ಯಾನಮಾಡಬೇಕಾದ ಅಗತ್ಯವೆಲ್ಲಿದೆ ?

ಇಲ್ಲಿ ಧ್ಯಾನವೆಂಬ ಉಪಾಯದ ಪ್ರಸ್ತಾಪ ಬಂದಿತು. ಪತಂಜಲಿಯ ಅಷ್ಟಾಂಗಯೋಗದಲ್ಲಿ ಧಾರಣೆಗೆ ಹೊಂದಿಕೊಂಡಂತೆ, ಸಮಾಧಿಗೆ ಪೂರ್ವಭಾವಿಯಾಗಿ ಧ್ಯಾನವೆಂಬ ಹಂತವನ್ನು ಹೇಳಿದೆ. ಇಲ್ಲಿನ ಯೋಗವು ಚಿತ್ತವೃತ್ತಿನಿರೋಧಕ್ಕಾಗಿ, ಮನಸ್ಸಿನ ಕಲ್ಪನೆಗಳನ್ನು ತಡೆಗಟ್ಟುವುದಕ್ಕಾಗಿ. ಈ ಉದ್ದೇಶದಿಂದ ಧ್ಯಾನಮಾಡುವಾಗ ಧ್ಯೇಯ (ಧ್ಯಾನದ ವಸ್ತು), ಧ್ಯಾತೃ (ಧ್ಯಾನ ಮಾಡುವವನು), ಧ್ಯಾನ (ಧ್ಯಾನದ ಕೆಲಸ) ಎಂಬ ತ್ರಿಪುಟಿ ಇರುತ್ತದೆ. ವೇದಾಂತದಲ್ಲಿ ಶ್ರವಣ-ಮನನ-ನಿದಿಧ್ಯಾಸನಗಳೆಂಬ ಕ್ರಮದಲ್ಲಿ ನಿದಿಧ್ಯಾಸನವೇ ಧ್ಯಾನ. ಇದು ಆತ್ಮಧ್ಯಾನ, ಆತ್ಮಾಭ್ಯಾಸ. ಇಲ್ಲಿ ತ್ರಿಪುಟಿ ಇರದು; ಮನಸ್ಸಿನ ಕಲ್ಪನೆಗಳೂ ಇರಲಾರವು. ಈ ಧ್ಯಾನ ಚಿತ್ತವೃತ್ತಿ ನಿರೋಧವಲ್ಲ, ಆತ್ಮದ ಅಖಂಡಾನುಭವ.

ಮನಸ್ಸು ಆತ್ಮಾಕಾರವನ್ನೇ ತಳೆಯುತ್ತದೆ ಎಂದರೂ ಸರಿಯೆ. ಆದರೆ ಆತ್ಮಕ್ಕೆ ಆಕಾರವೊಂದಿದೆಯೆಂದರ್ಥವಲ್ಲ. ಮನಸ್ಸು ತನ್ನ ಬಹಿಃಪ್ರವೃತ್ತಿಯನ್ನೂ ವಿಷಯಾಸಕ್ತಿಯನ್ನೂ ಬಿಟ್ಟು, ಅಂತರ್ಮುಖವಾಗಿ ಆತ್ಮದತ್ತ ಹೊರಳುತ್ತದೆ. ಆತ್ಮದಂತೆ ನಿರ್ಗುಣ, ನಿರಾಕಾರ, ವ್ಯಾಪಕವಾಗುತ್ತದೆ. ಹೀಗೆ ಹೇಳುವಾಗ ಸಾಧ್ಯ (ಪಡೆದುಕೊಳ್ಳಬೇಕಾದುದು, ಆತ್ಮ) ಮತ್ತು ಸಾಧನ (ಪಡೆದುಕೊಳ್ಳುವ ಉಪಾಯ, ಮನಸ್ಸು) ಎರಡೂ ಒಂದಾಗಿಬಿಡುತ್ತವೆ. ಆಗ ಧ್ಯಾನವೆಂಬ ಕ್ರಿಯೆ ಬೇರೆಯಾಗಿ ನಡೆಯಬೇಕಾದುದಿಲ್ಲ.

ವಿಕ್ಷೇಪೋ ನಾಸ್ತಿ ಯಸ್ಮಾನ್ಮೇ ನ ಸಮಾಧಿಸ್ತತೋ ಮಮ ।
ವಿಕ್ಷೇಪೋ ವಾ ಸಮಾಧಿರ್ವಾ ಮನಸಃ ಸ್ಯಾದ್ವಿಕಾರಿಣಃ ।
ನಿತ್ಯಾನುಭವರೂಪಸ್ಯ ಕೋ ಮೇಽತ್ರಾನುಭವಃ ಪೃಥಕ್ ॥ ೧೪ ॥

**ಭಾವಾನುವಾದ :-** ನನಗೆ ವಿಕ್ಷೇಪವೇ ಇರದು, ಎಂದ ಮೇಲೆ ಸಮಾಧಿಯೂ ಇರದು. ವಿಕ್ಷೇಪವಾಗಲಿ, ಸಮಾಧಿಯಾಗಲಿ ಅವು ಮನಸ್ಸಿನ ವಿಕಾರಗಳೇ. ನಿತ್ಯವಾದ ಆತ್ಮನನ್ನು ಎಂದೂ ಅನುಭವಿಸುವ ನನಗೆ ಬೇರೆಯಾಗಿ ಸಮಾಧಿಯ ಅನುಭವವೇನು ?

**ವಿವರಣೆ :-** ವಿಕ್ಷೇಪವೆಂದರೆ ಮನಸ್ಸು ಅತ್ತಿತ್ತ ಹರಿದಾಡುವುದು, ನೆಲೆಗಾಣದೆ ಅಂಡಲೆಯುವುದು. ಸಾಮಾನ್ಯ ಜನರ ಮನಃಸ್ಥಿತಿ ಇದು. ಯಾವುದರ ಮೇಲೂ ಮನಸ್ಸು ನೆಲೆಗೊಳ್ಳುವುದಿಲ್ಲ. ಮನಸ್ಸಿಗೆ ಅಂಕೆ, ಕಟ್ಟುಪಾಡು, ನಿರ್ಬಂಧ ಎಂಬುದೇನೂ ಇರದು. ಏಕಾಗ್ರ ಎಂಬುದಕ್ಕೆ ವಿರುದ್ಧವಾದುದು ವಿಕ್ಷಿಪ್ತ. ವಿಕ್ಷಿಪ್ತವಾದ ಮನಸ್ಸಿನಲ್ಲಿ ರಜಸ್ಸಿನ ಅಂಶ ಹೆಚ್ಚು, ಅದಕ್ಕಾಗಿಯೇ ನೆಮ್ಮದಿಯೆಂಬುದಿರದು. ಏಕಾಗ್ರವನ್ನು ಸಾಧಿಸಿಕೊಳ್ಳಲೆಂದೇ ಧ್ಯಾನವಿರುವುದು. ಧ್ಯಾನದಲ್ಲಿ ಸತ್ತ್ವದ ಅಂಶ ಪ್ರಧಾನವಾಗುತ್ತದೆ. ಸಮಾಧಿಗೆ ಇದು ದಾರಿ. ಸಮಾಧಿಯಲ್ಲಿ ಮನಸ್ಸು ಮರೆಯಾದಂತೆಯೇ ಇರುತ್ತದೆ (ಸತ್ತ್ವಗುಣವನ್ನು ಮೀರಿದ ಸ್ಥಿತಿ ಇದು). ಅಷ್ಟಾಂಗ ಯೋಗದಲ್ಲಿ ಚಿತ್ತವೃತ್ತಿ ನಿರೋಧವನ್ನು ಯೋಗವೆಂದು ಕರೆದಿದ್ದಾರೆ. ಚಿತ್ತ (ಎಂದರೆ ಮನಸ್ಸಿನ) ವೃತ್ತಿಗಳಲ್ಲಿ ಮೂಢ (ತಮೋಗುಣ ಪ್ರಧಾನವಾಗಿರುವುದು), ವಿಕ್ಷಿಪ್ತ (ರಜೋಗುಣ ಪ್ರಧಾನ), ಏಕಾಗ್ರ (ಸತ್ತ್ವಗುಣ ಪ್ರಧಾನ) ಮತ್ತು ನಿರುದ್ಧ (ಮೂರು ಗುಣಗಳನ್ನು ದಾಟಿದ್ದು, ಮನಸ್ಸು ವೃತ್ತಿ ಶೂನ್ಯವಾಗಿ ಅಡಗುವುದು) ಎಂಬ ನಾಲ್ಕನ್ನು ಎಣಿಕೆ ಮಾಡುತ್ತಾರೆ.

ಮೊದಲ ಎರಡು ಸಾಮಾನ್ಯ ಜನರ ಸ್ಥಿತಿ. ಅಲ್ಲಿ ಯೋಗವೆಂಬುದಿಲ್ಲ. ಮೂರನೆಯದು ಯೋಗದ ಆರಂಭ. ಇಲ್ಲಿ ಮುಖ್ಯವಾಗುವುದು ಧಾರಣಾ–ಧ್ಯಾನಗಳು. ಕಡೆಯದು ದಿಟವಾಗಿ ವೃತ್ತಿಯೇ ಅಲ್ಲ; ವೃತ್ತಿಶೂನ್ಯವಾದ ಚಿತ್ತ. ಅದನ್ನೇ ಸಮಾಧಿಯೆನ್ನುತ್ತಾರೆ (ಸಮ್ಯಕ್

ಆಧೀಯತೇ ಮನಃ); ಮನಸ್ಸನ್ನು ಉಳಿದೆಲ್ಲೆಡೆಗಳಿಂದ ಸೆಳೆದು ಒಂದೆಡೆ ನಿಲ್ಲಿಸುವುದು. ಆದರೆ ಇದೂ ಮನಸ್ಸಿನ ಒಂದು ಸ್ಥಿತಿಯೇ. ಆ ಕಾರಣದಿಂದ ಇಲ್ಲಿ ವಿಕ್ಷೇಪದಂತೆ ಸಮಾಧಿಯೂ ಮನಸ್ಸಿನ ವಿಕಾರವೇ ಎಂದು ಹೇಳಿದ್ದಾರೆ.

ವಿಕ್ಷೇಪವಿದ್ದಾಗ ದುಃಖ, ಈ ದುಃಖ ನೀಗಿಕೊಳ್ಳುವುದು ಸಮಾಧಿಯಲ್ಲಿ. ಚಿತ್ತದಲ್ಲಿ ವಿಕ್ಷೇಪವಿರುವಾಗ ಅದನ್ನು ಯೋಗದಿಂದ ನಿಯಂತ್ರಿಸಿ ಸಮಾಧಿಯಲ್ಲಿ ನಿಲ್ಲಿಸಲು ಪ್ರಯತ್ನಿಸುತ್ತಾರೆ. ಅವಧೂತ ನಿಗೆ ಚಿತ್ತವಿಕ್ಷೇಪವೇ ಇರದು; ಎಂದ ಮೇಲೆ ಸಮಾಧಿಯ ಸೊಲ್ಲು ಯಾತಕ್ಕೆ ? ಅವನ ಚಿತ್ತವು ಎಡೆಬಿಡದೆ ಆತ್ಮವನ್ನೇ ಪ್ರತಿಬಿಂಬಿಸುತ್ತಿರು ವಾಗ, ಸಮಾಧಿ ಎಂಬ ಚಿತ್ತೈಕಾಗ್ರ್ಯಸ್ಥಿತಿಯ ಅನುಭವವು ಬೇರೆಯಾಗಿ ಬರುತ್ತದೆಯೇ ?

ಆತ್ಮ ನಿತ್ಯವಾದದ್ದು; ಎಂದರೆ ವಿಕಾರಗಳಿಲ್ಲದ್ದು (ಹುಟ್ಟುವುದು, ಬೆಳೆಯುವುದು, ಬದಲಾಗುವುದು, ಮುಪ್ಪಡರುವುದು, ಸಾಯುವುದು ಇವೆಲ್ಲ ವಿಕಾರಗಳು). ಯೋಗದ ದಾರಿ ಇರುವುದು ಆತ್ಮಕ್ಕಲ್ಲ; ಮನಸ್ಸಿಗೆ. ಮನಸ್ಸಿನ ಯಾವುದೇ ವೃತ್ತಿಯಾಗಲಿ ಅದು ವಿಕಾರವೇ, ಎಂದರೆ ಹುಟ್ಟುತ್ತದೆ, ಬೆಳೆಯುತ್ತದೆ, ಇಳಿಯುತ್ತದೆ, ಅಡಗುತ್ತದೆ. ಸಮಾಧಿಯೆಂದಾಗಲೂ ಅದು ಆರಂಭವಾಗುತ್ತದೆ, ಕೆಲ ಕಾಲ ಇರುತ್ತದೆ, ಮತ್ತೆ ಮರೆಯಾಗುತ್ತದೆ. ಸಮಾಧಿಯು ಮರೆಯಾದಾಗ ವ್ಯುತ್ಥಿತ ಸ್ಥಿತಿ, ಸಾಮಾನ್ಯ ವ್ಯವಹಾರದ ಎಚ್ಚರ; ಸಮಾಧಿಯಿಂದ ಎದ್ದು ಬರುವುದು ಅದು. ಆತ್ಮನಿಗೆ ಸಮಾಧಿಯೆಂಬುದಿದ್ದರೆ ವ್ಯುತ್ಥಿತ ಸ್ಥಿತಿಯೂ ಇರಬೇಕಾಗುತ್ತಿದ್ದಿತು. ಹಾಗಿಲ್ಲದುದರಿಂದ ಆತ್ಮ ನಿತ್ಯ. ಆತ್ಮನಿಗೆ ಸಮಾಧಿಯಿರದು. ಸಮಾಧಿಯ ಸ್ಥಿತಿ ಇರುವುದು ಮನಸ್ಸಿಗೇ.

ಪಾತಂಜಲ ಅಷ್ಟಾಂಗ ಯೋಗದ ಕಡೆಯ ಹಂತ ಸಮಾಧಿ; ಧ್ಯಾನದನಂತರ ಬರುವುದು. ಹೀಗೆ ಸಮಾಧಿಯು ಯೋಗದ ಒಂದು ಅಂಗವೇ. ಅದರ ಸ್ವರೂಪ ಚಿತ್ತವೃತ್ತಿ ನಿರೋಧವಷ್ಟೆ, ಆತ್ಮಾನುಭವವಲ್ಲ. ಅವಧೂತನಿಗಾದರೋ ಅಖಂಡ ಆತ್ಮಾನುಭವವಿರುವುದರಿಂದ ಚಿತ್ತವೃತ್ತಿ ನಿರೋಧವು ತಾನಾಗಿ ಆಗಿಬಿಟ್ಟಿರುತ್ತದೆ. ಅದನ್ನು ಬೇರೆಯಾಗಿ ಕೈಗೂಡಿಸಿಕೊಳ್ಳಬೇಕಾದ ಅಗತ್ಯವಿರದು. ಮೇಲಾಗಿ ಅವಧೂತನಿಗೆ ವ್ಯವಹಾರ-ಪರಮಾರ್ಥ ಎರಡೂ ಸಮವೇ. ವ್ಯವಹಾರದಲ್ಲಿರುವಾಗಲೂ, ಚಿತ್ತವೃತ್ತಿಗಳ ಸಂಭವ ಇರುವಾಗಲೂ ಅವನು ಆತ್ಮನಿಷ್ಠೆಯಲ್ಲೇ ಇರುತ್ತಾನೆ, ಆತ್ಮನಾಗಿಯೇ ಇರುತ್ತಾನೆ. ತನ್ನ ಹೃದಯದಲ್ಲಿ ಆತ್ಮದ ಆನಂದ ಬೆಳಗುತ್ತಲೆ ಇರುತ್ತದೆ. ಆತ್ಮದ ಆನಂದ ಎನ್ನುವುದು ಮಾತಿನ ಧೋರಣೆಯಷ್ಟೆ. ಆತ್ಮವೇ ಆನಂದ; ಆತ್ಮಾನುಭವ ಎಂದರೆ ಆನಂದಾನುಭವವೇ. ಅದು ಅಚ್ಚಳಿಯದೆ, ಎಡೆಬಿಡದೆ ಇದ್ದರೆ ನಿತ್ಯವಾದ ಆನಂದಾನುಭವ.

**ಕೃತಂ ಕೃತ್ಯಂ ಪ್ರಾಪಣೀಯಂ ಪ್ರಾಪ್ತಮಿತ್ಯೇವ ನಿತ್ಯಶಃ ।**
**ವ್ಯವಹಾರೋ ಲೌಕಿಕೋ ವಾ ಶಾಸ್ತ್ರೀಯೋ ವಾಽನ್ಯಥಾಪಿ ವಾ ।**
**ಮಮಾಕರ್ತುರಲೇಪಸ್ಯ ಯಥಾರಬ್ಧಂ ಪ್ರವರ್ತತಾಂ ॥ ೧೫ ॥**

**ಅಥವಾ ಕೃತಕೃತ್ಯೋಽಪಿ ಲೋಕಾನುಗ್ರಹಕಾಮ್ಯಯಾ ।**
**ಶಾಸ್ತ್ರೀಯೇಣೈವ ಮಾರ್ಗೇಣ ವರ್ತೇಽಹಂ ಮಮ ಕಾ ಕ್ಷತಿಃ ॥ ೧೬ ॥**

**ಭಾವಾನುವಾದ** :- ಮಾಡಬೇಕಾದದ್ದು ಮಾಡಿಯಾಯಿತು; ಪಡೆದುಕೊಳ್ಳಬೇಕಾದದ್ದನ್ನು ಪಡೆದುಕೊಂಡದ್ದಾಯಿತು, ಹೀಗೆಂಬ ವ್ಯವಹಾರವಿದೆಯಲ್ಲ; ಅದು ಲೌಕಿಕ ವಿಷಯಗಳಲ್ಲಾಗಲಿ ಶಾಸ್ತ್ರವಿಧಿಯನ್ನು ಕುರಿತದ್ದಾಗಲಿ, ಬೇರೆ ಯಾವುದೇ ಆಗಲಿ, ಹೇಗೆ ಆರಂಭವಾಯಿತೋ ಹಾಗೆ ನಡೆದುಕೊಂಡು ಹೋಗಲಿ. ಯಾವುದನ್ನು

ಮಾಡುವವನೂ ನಾನಲ್ಲ; ನನಗೆ ಯಾವುದರ ಲೇಪವೂ ಇರದು. ಅಥವಾ ಮಾಡಬೇಕಾದದ್ದನ್ನು ಮಾಡುವಾಗ, ಜನರಿಗೆ ಒಳಿತಾಗಲೆಂಬ ಬಯಕೆಯಿಂದ, ನಾನು ಶಾಸ್ತ್ರವಿಧಿಸುವ ಬಗೆಯಲ್ಲೇ ನಡೆದುಕೊಂಡರೆ, ತಪ್ಪೇನು? ನನಗೆ ಅದರಿಂದ ಯಾವ ತೊಂದರೆ ?

**ವಿವರಣೆ** :- ಸಾಮಾನ್ಯ ಜನರಿಗೆ 'ಇದು ಕರ್ತವ್ಯ; ಇದು ಪುರುಷಾರ್ಥ' ಎಂಬ ಎಣಿಕೆಯಿರುತ್ತದೆ. ಆದರಿಂದಾಗಿ 'ಇದನ್ನು ಮಾಡಬೇಕು; ಇದನ್ನು ಪಡೆದುಕೊಳ್ಳಬೇಕು' ಎಂಬ ಬಯಕೆಯೂ ಇರುತ್ತದೆ. ಮಾಡುವುದಕ್ಕೆ, ಪಡೆದುಕೊಳ್ಳುವುದಕ್ಕೆ ಪ್ರಯತ್ನವನ್ನೂ ಮಾಡುತ್ತಾರೆ. ಪ್ರಯತ್ನವು ಯಶಸ್ವಿಯಾದರೆ 'ಮಾಡಿದ್ದಾಯಿತು; ಪಡೆದುಕೊಂಡದ್ದಾಯಿತು' ಎಂಬ ಸಮಾಧಾನವಿರುತ್ತದೆ. ಇದು ಶರೀರ, ಇಂದ್ರಿಯಗಳು, ಮನಸ್ಸು ಇವುಗಳಿಗೆ ಸುಖವನ್ನುಂಟು ಮಾಡುವ ವಿಷಯಗಳಲ್ಲೂ ಸರಿಯೇ; ಇನ್ನು ಆಧ್ಯಾತ್ಮಿಕ, ಅಭ್ಯುದಯದಲ್ಲಿ ಶಾಸ್ತ್ರ ತಿಳಿಯಹೇಳುವ ಧರ್ಮ, ಅರ್ಥ, ಕಾಮ ಎಂಬ ಪುರುಷಾರ್ಥಗಳಲ್ಲೂ ಸರಿಯೆ. ಎರಡನ್ನೂ ಬಿಟ್ಟು, ಕಳ್ಳರು, ಕಾಮುಕರು, ಕಪಟಿಗಳು ಇವರು ತೊಡಗುವ ಕೆಲಸಗಳಲ್ಲೂ ಸರಿಯೆ. ಏನೇ ಆದರೂ ಮಾಡುವವರಿದ್ದಾರೆ, ಮಾಡಿದ ಕೆಲಸಕ್ಕೆ ಫಲವೊಂದಿದ್ದು ಅದು ಮಾಡಿದವರನ್ನು ಅಂಟಿಕೊಳ್ಳುತ್ತದೆ.

ಅವಧೂತರ ವಿಚಾರ ಹೀಗಲ್ಲ. ಆತ್ಮನಿಷ್ಠರಾದುದರಿಂದ ಅವರಿಗೆ ಕರ್ತವ್ಯ (ಮಾಡಬೇಕಾದುದು), ಪ್ರಾಪ್ತವ್ಯ (ಪಡೆದುಕೊಳ್ಳಬೇಕಾದುದು) ಎಂಬುದೆರಡೂ ಮುಗಿದಿರುತ್ತದೆ. ಆದರೂ ಅವರಿಗೆ ದೇಹವಿರುತ್ತದೆ, ಇಂದ್ರಿಯಗಳಿರುತ್ತವೆ, ವ್ಯವಹಾರವಿರುತ್ತದೆ, ಅವರು ಸಂಸಾರದಲ್ಲಿರುತ್ತಾರೆ. ಹೀಗಾಗಿ ಅವರು ಕೆಲಸಗಳಲ್ಲಿ ತೊಡಗಿಯೆ ಇರುತ್ತಾರೆ. ಮಾಡಬೇಕಾದುದನ್ನು ಮಾಡುತ್ತಾರೆ,

ಪಡೆದುಕೊಳ್ಳಬೇಕಾದುದನ್ನು ಪಡೆದುಕೊಳ್ಳುತ್ತಾರೆ. ಆದರೆ ದಿಟವಾಗಿ ಅವರು ಮಾಡಿದಂತೆಯೂ ಅಲ್ಲ, ಪಡೆದುಕೊಂಡಂತೆಯೂ ಅಲ್ಲ. ಮಾಡಿದ ಕೆಲಸ ಅವರನ್ನೇನು ಅಂಟಿಕೊಳ್ಳುವುದಿಲ್ಲ; ಪಡಕೊಂಡದ್ದೇನು ಅವರನ್ನು ವಿಕಾರಕ್ಕೀಡುಮಾಡುವುದಿಲ್ಲ.

ಮಾಡಬೇಕಾದುದನ್ನು ಅವರು ಮಾಡುವಾಗ, ನೆರೆಹೊರೆಯವರಿಗೆ ಹಿತವಾದುದನ್ನೇ ಮಾಡಿಯಾರು. ಇತರರಿಗೆ ಒಳಿತನ್ನೇ ಅವರು ಬಯಸುವುದು. ತನ್ನ ಕೆಲಸದಿಂದ ಬೇರೆಯವರಿಗೆ ತೊಂದರೆಯಾಗದಂತೆ ಎಚ್ಚರ ವಹಿಸುವರು. ಲೋಕಾನುಗ್ರಹ ಕಾಮನೆಯೆಂದರೆ ಇದು. ತಾವು ಸಂಸಾರದಲ್ಲಿ, ದೇಹದಿಂದ ಇರುವಷ್ಟು ಕಾಲ ಸುತ್ತಮುತ್ತ ಇರುವ ಮಂದಿಗೆ ಒಳ್ಳೆಯದಾಗಬೇಕು; ಅವರೂ ತಮ್ಮಂತೆ ಆಧ್ಯಾತ್ಮದ ತುತ್ತತುದಿಯನ್ನು ಮುಟ್ಟುವಂತಾಗಬೇಕು. ಸಂಸಾರಿಗಳಾಗಿರುವ ಜನರೂ ಸುಖವಾಗಿರಬೇಕಲ್ಲವೆ ? ಎಲ್ಲರೂ ಅವಧೂತರಾಗುವುದು ಹೇಗೆ ? ಅವಧೂತರಾದವರಿಗೂ ಒಂದು ಕರ್ತವ್ಯವಿದೆಯೆಂದು ಹೇಳಿದರೆ ತಪ್ಪಲ್ಲ; ಅದನ್ನು ಭಗವದ್ಗೀತೆ ಲೋಕಸಂಗ್ರಹವೆಂದು ಕರೆದಿದೆ. ಶಾಸ್ತ್ರವು ತೋರಿಸುವ ದಾರಿ ಇದೇ. ಜ್ಞಾನಿಯಾದವನ ಕರ್ತವ್ಯ ಲೋಕಸಂಗ್ರಹ; ಲೋಕಾನುಗ್ರಹ ಕಾಮನೆ. ಅವಧೂತನಿಗೆ ಇದು ಒಪ್ಪಿಗೆಯೇ. ಆದರೆ ಅದನ್ನವನು ಕರ್ತವ್ಯವೆಂದೇನು ಎಣಿಸುವುದಿಲ್ಲ; ಅದರಲ್ಲಿ ಆಡಂಬರವೂ ಇರುವುದಿಲ್ಲ, ಸಹಜವೆಂಬಂತೆ ಇದು ನಡೆಯುತ್ತದೆ.

ಆದರೆ ಲೋಕಸಂಗ್ರಹವನ್ನು ಮಾಡುವಾಗ ಅವಧೂತನು ತನ್ನ ನೆಲೆಯಿಂದ ಕೆಳಗೆ ಜಾರುವುದಿಲ್ಲ; ಲೋಕದ ನೆಲೆಗೆ ಬಂದಿಳಿಯುವುದಿಲ್ಲ. ಅವನ ನಿತ್ಯಾತ್ಮಾನುಭವವು ಎಂದಿನಂತೆಯೇ ಇನಿತೂ ಮುಕ್ಕಾಗದೆ ಇರುತ್ತದೆ; ಅದರಲ್ಲಿ ಯಾವ ವಿಕಾರವೂ ಇರುವುದಿಲ್ಲ. ಜನರಿಗೆ

ಒಳಿತನ್ನು ಮಾಡಿದ್ದರಿಂದ ಅವಧೂತನಿಗೇನು ತೊಂದರೆಯಿರುವುದಿಲ್ಲ. ಅವನಿಗೆ ಲಾಭವೆಂಬುದೂ ಇಲ್ಲ.

**ದೇವಾರ್ಚನ ಸ್ನಾನ ಶೌಚಭಿಕ್ಷಾದೌ ವರ್ತತಾಂ ವಪುಃ ।**
**ತಾರಂ ಜಪತು ವಾಕ್ ತದ್ವತ್ ಪಠತ್ವಾಮ್ನಾಯಮಸ್ತಕಂ ॥ ೧೭ ॥**

**ವಿಷ್ಣುಂ ಧ್ಯಾಯತು ಧೀರ್ಯದ್ವಾ ಬ್ರಹ್ಮಾನಂದೇ ವಿಲೀಯತಾಂ ।**
**ಸಾಕ್ಷ್ಯಹಂ ಕಿಂಚಿದಪ್ಯತ್ರ ನ ಕುರ್ವೇ ನಾಪಿ ಕಾರಯೇ ॥ ೧೮ ॥**

**ಭಾವಾನುವಾದ** :- ನನ್ನ ಶರೀರವು ಬೇಕೆಂದರೆ ದೇವರ ಪೂಜೆ, ಸ್ನಾನ, ಶೌಚ, ಭಿಕ್ಷೆ ಮೊದಲಾದ ಕೆಲಸಗಳಲ್ಲಿ ತೊಡಗಿರಲಿ. ನನ್ನ ಮಾತು ಓಂಕಾರವನ್ನು ಜಪಿಸುತ್ತಿರಲಿ; ವೇದದ ಶಿರೋಭಾಗವಾದ ಉಪನಿಷತ್ತುಗಳನ್ನು ಅಧ್ಯಯನ ಮಾಡುತ್ತಿರಲಿ. ಮನಸ್ಸು ವಿಷ್ಣುವನ್ನು ಧ್ಯಾನಮಾಡುತ್ತಿರಲಿ ಅಥವಾ ಬ್ರಹ್ಮಾನಂದದಲ್ಲಿ ಮುಳುಗಿರಲಿ. ಏನು ಮಾಡುತ್ತಿದ್ದರೂ ನಾನು ಮಾಡುವವನಲ್ಲ, ಮಾಡಿಸುವವನೂ ಅಲ್ಲ. ನಾನು ಎಲ್ಲಕ್ಕೂ ಸಾಕ್ಷಿಯಂತೆ ಇರುವೆನು.

**ವಿವರಣೆ** :- ಮೇಲೆ ಹೇಳಿದ ಶಾಸ್ತ್ರ ತೋರಿಸುವ ದಾರಿಯನ್ನು ಇಲ್ಲಿ ವಿವರಿಸಿದ್ದಾರೆ. ಅವಧೂತರು ಎಲ್ಲವನ್ನೂ ಕಿತ್ತೊಗೆದವರು; ಅವರಿಗೆ ಧರ್ಮ-ಅಧರ್ಮ, ಪುಣ್ಯ-ಪಾಪ, ಒಳಿತು-ಕೆಡಕು ಎಂಬ ಯಾವ ಎಣಿಕೆಯೂ ಇರದು. ಆದರೂ ಜನರಿಗೆ ಒಳಿತಾಗುವ ಬಯಕೆಯಿಂದ ಶಾಸ್ತ್ರ ತೋರಿಸುವ ದಾರಿಯನ್ನು ಮೆಚ್ಚಿಕೊಳ್ಳುತ್ತಾರೆ. ತಾತ್ತ್ವಿಕವಾಗಿ ಸದಾಚಾರ-ಅನಾಚಾರಗಳೆರಡೂ ಅವಧೂತನಿಗೆ ಸಮನೇ. ಆದರೆ ಸದಾಚಾರವು ಜನರ ಸುಖಕ್ಕೆ ಕಾರಣವಾಗುವುದರಿಂದ

ಅದನ್ನು ಹಿಡಿದರೆ ಒಳಿತು, ತಾವೂ ಜನರಿಗೆ ಮಾರ್ಗದರ್ಶನ ಮಾಡಲು ಅದನ್ನೇ ಹಿಡಿಯುತ್ತಾರೆ ಅವಧೂತರು.

ಆದರೆ ಇತರರಂತೆ ಇದನ್ನು ಜೀವಭಾವದಿಂದ, ಅಥವಾ ಫಲಾಪೇಕ್ಷೆಯಿಂದ ಅವಧೂತರು ಮಾಡುವುದಿಲ್ಲ. ಸಾಕ್ಷಿಭಾವದಿಂದ ಮಾಡುತ್ತಾರೆ. ಸಮುದ್ರದ ನೀರು ಅಲೆಯಾಗಿ ಎದ್ದುಕೊಂಡಾಗ, ಅದೂ ನೀರೇ. ಸಮುದ್ರವು ಅಲೆಯನ್ನು ನೋಡುತ್ತಿರುವಂತೆ, ತನ್ನ ಒಂದು ಪ್ರಸಾರವನ್ನೇ ತಾನು ನಿರೀಕ್ಷಿಸುತ್ತಿರುವಂತೆ, ಇದು ಸಾಕ್ಷಿಭಾವ. ಮೈ, ಮನಸ್ಸು, ಮಾತು ಮೂರರ ಮೂಲಕ ಕೆಲಸ ನಡೆದರೂ, ಆತ್ಮ ನಿರ್ಲಿಪ್ತವೇ. ಆತ್ಮದ ಆಸರೆಯ ಮೇಲೇ ಕೆಲಸವೆಲ್ಲ ನಡೆದರೂ ಆತ್ಮವೇನೂ ಕೆಲಸ ಮಾಡಿದಂತಾಗಲಿಲ್ಲ. ಆತ್ಮ ಮಾಡುವುದೂ ಇಲ್ಲ, ಮಾಡಿಸುವುದೂ ಇಲ್ಲ. ದೀಪದ ಬೆಳಕಿನಲ್ಲಿ ಹಲವು ಕೆಲಸಗಳು ನಡೆಯಬಹುದು; ಆದರೆ ದೀಪವೇನು ಯಾವ ಕೆಲಸವನ್ನಾದರೂ ಮಾಡುವುದೇ ? ಅಥವಾ ಮಾಡಿಸುವುದೇ ? ದೀಪದ ಬೆಳಕಿನಲ್ಲಿ ಮಾಡಿದ ಕೆಲಸ ದೀಪಕ್ಕೇನು ಅಂಟಿಕೊಳ್ಳುವುದೆ ? ಮಾಡಿದ ಕೆಲಸ ಒಳ್ಳೆಯದಾಗಲಿ ಕೆಟ್ಟದ್ದಾಗಲಿ ದೀಪಕ್ಕೆ ಅದರ ನಂಟು ಇರದು. ಪುಣ್ಯ-ಪಾಪಗಳ ಸೋಂಕು ಜೀವಭಾವಕ್ಕಷ್ಟೇ, ಆತ್ಮವಸ್ತುವಿಗೆ ಇರದು.

ಸಂಸಾರದಲ್ಲಿ ತೊಡಗಿರುವುದು, ತೊಳಲುವುದು ಜೀವ (ಎಂದರೆ ದೇಹ, ಇಂದ್ರಿಯ, ಮನಸ್ಸು ಎಂಬ ಉಪಾಧಿಗಳನ್ನು ಹೊಂದಿರುವುದು); ಆತ್ಮವಲ್ಲ. ಉಪನಿಷತ್ತಿನಲ್ಲೊಂದು ರೂಪಕ. ಒಂದೇ ಮರದ ಮೇಲೆ ಎರಡು ಹಕ್ಕಿಗಳು, ಒಟ್ಟಿಗೆ ಇರುವುವು, ಹೊಂಬಣ್ಣದವು. ಅವುಗಳಲ್ಲಿ ಒಂದು ಹಕ್ಕಿ ಮರದ ಹಣ್ಣುಗಳನ್ನು ತಿನ್ನುತ್ತದೆ,

ಸಿಹಿ-ಕಹಿಗಳನ್ನನುಭವಿಸುತ್ತದೆ. ಇನ್ನೊಂದು ಹಕ್ಕಿ ಏನನ್ನೂ ತಿನ್ನದೆ, ಸುಮ್ಮನೆ ನೋಡುತ್ತಿದೆ –

**ದ್ವಾ ಸುಪರ್ಣಾ ಸಯುಜಾ ಸಖಾಯಾ**
**ಸಮಾನಂ ವೃಕ್ಷಂ ಪರಿಷಸ್ವಜಾತೇ ।**
**ತಯೋರೇಕಂ ಪಿಪ್ಪಲಂ ಸ್ವಾದ್ವತ್ತಿ**
**ಅನಶ್ನನ್ನನ್ಯೋಽಭಿಚಾಕಶೀತಿ ॥** (ಮುಂಡಕ ಉಪನಿಷತ್ತು ೩,೧,೧)

ಈ ರೂಪಕದಲ್ಲಿ ಮರವೆಂದರೆ ನಮ್ಮ ದೇಹ. ಇದನ್ನಡರಿ ಕುಳಿತ ಎರಡು ಹಕ್ಕಿಗಳು ಜೀವ, ಆತ್ಮ; ಅಥವಾ ಜೀವಾತ್ಮ, ಪರಮಾತ್ಮ. ಜೀವಾತ್ಮನು ಸಂಸಾರದ ಸುಖದುಃಖಗಳನ್ನನುಭವಿಸುವವನು. ಪರಮಾತ್ಮನು ಕೇವಲ ಸಾಕ್ಷಿಯಾಗಿರುವವನು. ಜೀವಾತ್ಮ, ಪರಮಾತ್ಮ ಎಂದಾಗ ಎರಡು ಆತ್ಮಗಳು ಎಂದೇನು ತಿಳಿಯಬಾರದು. ಆತ್ಮ ಒಂದೇ. ಅದು ದೇಹವೇ ಮೊದಲಾದ ಉಪಾಧಿಗಳಿಂದ ಕೂಡಿ ಕೊಂಡಿದ್ದಾಗ ಜೀವಭಾವವನ್ನು ತಳೆಯುತ್ತದೆ. ಆಗ ಜೀವ ಅಥವಾ ಜೀವಾತ್ಮ ಎನಿಸಿಕೊಳ್ಳುತ್ತದೆ. ಈ ಉಪಾಧಿಗಳಿಲ್ಲದಿರುವಾಗ ಅದು ಆತ್ಮ ಅಥವಾ 'ಪರಂ ಆತ್ಮಾ'. ಆತ್ಮದಲ್ಲೇ ಎರಡು ಅವಸ್ಥೆಗಳು (ಉಪಾಧಿಗಳಿರುವುದು, ಉಪಾಧಿಯಿಲ್ಲದ್ದು) ಎಂದೂ ಅಲ್ಲ. ಆತ್ಮನಿಗೆ ಯಾವ ಉಪಾಧಿಯೂ ದಿಟವಾಗಿ ಇರದು. ಸ್ಫಟಿಕದ ನೆರೆಯಲ್ಲಿ ಕೆಂಪು ಹೂವಿದ್ದರೆ ಸ್ಫಟಿಕ ಕೆಂಪಾಗಿ ಕಾಣುತ್ತದೆ. ಆದರೆ ದಿಟವಾಗಿ ಸ್ಫಟಿಕಕ್ಕೆ ಕೆಂಬಣ್ಣವೇನು ಇರದು. ಸ್ಫಟಿಕ ಆತ್ಮ, ಕೆಂಪು ಹೂವು ಉಪಾಧಿ. ಸ್ಫಟಿಕಕ್ಕೇ ಕೆಂಪು ಹೂವೇನು ಅಂಟಿಕೊಂಡಿರುವುದಿಲ್ಲ. ಹೂವಿರಲಿ ಬಿಡಲಿ, ಸ್ಫಟಿಕ ಸ್ಫಟಿಕವೇ.

**ಕೃತಕೃತ್ಯತಯಾ ತೃಪ್ತಃ ಪ್ರಾಪ್ತಪ್ರಾಪ್ಯತಯಾ ಪುನಃ ।**
**ತೃಪ್ಯನ್ನೇವಂ ಸ್ವಮನಸಾ ಮನ್ಯತೇಽಸೌ ನಿರಂತರಂ ॥ ೧೯ ॥**

**ಭಾವಾನುವಾದ :-** ಮಾಡಬೇಕಾದುದನ್ನು ಮಾಡಿದ ಸಮಾಧಾನ, ಪಡೆದುಕೊಳ್ಳಬೇಕಾದುದನ್ನು ಪಡೆದುಕೊಂಡ ಸಮಾಧಾನ, ಹೀಗೆ ಸಮಾಧಾನವನ್ನು ತನ್ನ ಮನಸ್ಸಿನಿಂದಲೇ ಎಡೆಬಿಡದೆ ಈ ಅವಧೂತನು ಅನುಭವಿಸುವನು.

**ವಿವರಣೆ :-** ಅವಧೂತನಿಗೂ ಇತರರಂತೆಯೇ ಮಾಡಬೇಕಾದುದನ್ನು ಮಾಡಿದಾಗ, ಪಡೆದುಕೊಳ್ಳಬೇಕಾದುದನ್ನು ಪಡೆದುಕೊಂಡಾಗ ಸಮಾಧಾನವೆನಿಸುತ್ತದೆ; ತೃಪ್ತಿ ಎಂದರೆ ಸಂತೋಷದಿಂದ ಕೂಡಿದ ಸಮಾಧಾನ. ಆದರೆ ಇತರರು ಇದು ವ್ಯಕ್ತಿತ್ವದ ಯಾವ ನೆಲೆಯಲ್ಲಿ ಒದಗಿಬರುವುದು ಎಂಬುದನ್ನು ಕಂಡುಕೊಳ್ಳಲಾರರು. ಮಾಡಬೇಕಾ-ದುದರಲ್ಲಿ ಅಥವಾ ಮಾಡಿದುದರಲ್ಲಿ, ಪಡೆದುಕೊಳ್ಳಬೇಕಾದುದರಲ್ಲಿ ಅಥವಾ ಪಡೆದುಕೊಂಡದ್ದರಲ್ಲಿ ತಾವು ನಿಂತು, ಅದಕ್ಕೆ ಅಂಟಿಕೊಂಡು ಸಮಾಧಾನಪಡುತ್ತಾರೆ; ತಮ್ಮನ್ನು ಅವುಗಳಿಂದ ಬೇರ್ಪಡಿಸಿಕೊಂಡು ತೃಪ್ತಿಯನ್ನು ಪಡೆಯಲಾರರು. ಅವರ ತೃಪ್ತಿಯ ಅನುಭವ ಶುದ್ಧವಾದುದಲ್ಲ, ನಿರ್ಲಿಪ್ತವಾದುದಲ್ಲ. ಅಲ್ಲಿ ಅಹಂಭಾವ ಇರುತ್ತದೆ. ನಾನು ಮಾಡಿದೆ, ನನ್ನ ತೃಪ್ತಿ ಎಂಬುದು ಎದ್ದು ನಿಲ್ಲುತ್ತದೆ.

ಅವಧೂತನಾದರೋ ಮಾಡಬೇಕಾದುದನ್ನು ಮಾಡುತ್ತಾನೆ, ಪಡೆದುಕೊಳ್ಳಬೇಕಾದುದನ್ನು ಪಡೆದುಕೊಳ್ಳುತ್ತಾನೆ, ಆದರೆ ಅವನ ನೆಲೆ ಅವುಗಳಲ್ಲಲ್ಲ. ತನ್ನಲ್ಲಿ ತಾನು ನಿಂತು ತನ್ನ (ಆತ್ಮದ) ತೃಪ್ತಿಯನ್ನಷ್ಟೆ ಅನುಭವಿಸುತ್ತಾನೆ. ಮಾಡಿದ್ದಾಗಲಿ ಪಡೆದುಕೊಂಡದ್ದಾಗಲಿ ಅವನಿಗೆ ಇನಿತೂ ಅಂಟಿಕೊಳ್ಳುವುದಿಲ್ಲ.

ಸಮಾಧಾನವೆನ್ನುವುದು ಮನಸ್ಸಿನ ಒಂದು ವ್ಯಾಪಾರ ಎಂದು ಅವನ ಅರಿವಿನಲ್ಲಿರುತ್ತದೆ. ಮನಸ್ಸಿನ ಮೇಲೆ ಅವನ ಒಡೆತನವಿರುವುದರಿಂದ, ಮನಸ್ಸಿನ ವಿಕಾರಕ್ಕೆ ಅವನು ಎಡೆಮಾಡಿ

ಕೊಡುವುದಿಲ್ಲ. ಆತ್ಮನಿಷ್ಠೆ ಅವನಿಗಿರುವುದರಿಂದ ಆತ್ಮ ಯಾವಾಗಲೂ ನೆಮ್ಮದಿಯನ್ನೆ ಅನುಭವಿಸುತ್ತಿರುತ್ತದೆ. ಸಮಾಧಾನ ಎನ್ನುವುದು ಮನಸ್ಸಿನ ಅನುಭವ ಎನ್ನಬಹುದಾದರೂ ದಿಟವಾಗಿ ಆತ್ಮದ ಸಮಾಧಾನವನ್ನು ಅದು ಪ್ರತಿಬಿಂಬಿಸುತ್ತದೆ. ಆತ್ಮದ ಸಮಾಧಾನ ಎಂದೂ ಯಾವ ಕಾರಣಕ್ಕೂ ಕದಲಲಾರದು. ನಿತ್ಯವಾದ ಆತ್ಮದ ನಿತ್ಯಸ್ವರೂಪವೇ ಅದು.

ಅವಧೂತನ ಸಮಾಧಾನವಾದರೋ ಅವನು ಹೀಗೆ ಮಾಡಿದ್ದರಿಂದ, ಪಡೆದುಕೊಂಡದ್ದರಿಂದ ಒದಗಿಬಂದುದಲ್ಲ. ಅವನ ಸ್ವರೂಪಧರ್ಮವೇ ಅದು. 'ಶಾಂತೋಽಯಮಾತ್ಮಾ' ಎನ್ನುವ ಶ್ರುತಿಯೇ ಇದೆಯಲ್ಲವೆ ? ಇದರ ಅನುಭವವೆಂದರೆ ಮನಸ್ಸಿನಿಂದ ಆಗಬೇಕಾದುದು. ಅವಧೂತನ ಮನಸ್ಸು ನಮ್ಮ ಮನಸ್ಸಿನಂತಲ್ಲದೆ ತಿಳಿಯಾಗಿರುತ್ತದೆ; ವ್ಯಾಪಕವಾಗಿರುತ್ತದೆ. ಇಂದ್ರಿಯಗಳ ಜೊತೆಗೆ, ವಿಷಯಗಳ ಕಡೆಗೆ ಓಡುವಂಥದಲ್ಲ. ತನ್ನ ಒಳಗಿದ್ದುಕೊಂಡು ತನ್ನನ್ನೆ ಬೆಳಗುವ ಆತ್ಮದತ್ತ ಅದು ಹೊರಳಿದಾಗ ಅಂತರ್ಮುಖವೆನ್ನುತ್ತಾರೆ. ಈ ಸ್ಥಿತಿಯಲ್ಲಿ ಅದು ಆತ್ಮವನ್ನು ಕಂಡುಕೊಂಡಾಗ ಅದಕ್ಕೆ ಒದಗುವ ಸಮಾಧಾನ ಅವಧೂತನ ಅನುಭವಕ್ಕೆ ಬರುತ್ತದೆ. ಶಾಂತವಾದ ಆತ್ಮದ ಪ್ರತಿಬಿಂಬವನ್ನು ಮನಸ್ಸು ತನ್ನಲ್ಲಿ ಮೂಡಿಸಿಕೊಂಡಾಗಲೇ ಅದರ ಸಮಾಧಾನ. ಮನಸ್ಸು ಆತ್ಮಾಕಾರವನ್ನು ತಳೆಯಿತು ಎಂದು ಹೇಳುವುದೂ ಇದೆ.

ಇಷ್ಟಾಗಿ, ಯಾರಿಗಾಗಲಿ ಮಾಡಬೇಕಾದದ್ದೇನು? ಪಡೆದುಕೊಳ್ಳ ಬೇಕಾದದ್ದೇನು ? ಆತ್ಮವನ್ನು ಬಿಟ್ಟು ಬೇರೇನು ಇದ್ದೀತು ? ಆತ್ಮವನ್ನು ಅರಿತುಕೊಳ್ಳುವುದೇ ಎಲ್ಲ ಮನುಷ್ಯರ ಕರ್ತವ್ಯ; ಆತ್ಮ ಸಾಕ್ಷಾತ್ಕಾರವನ್ನು

ಪಡೆದುಕೊಳ್ಳಬೇಕು ಎಂದರೂ ಅದೇ ಅರ್ಥ. ಆತ್ಮಾನುಭವವೇ ಕರ್ತವ್ಯ, ಆನಂದಾನುಭವೇ ಪ್ರಾಪ್ತವ್ಯ. ಎರಡೂ ಒಂದೇ.

ಧನ್ಯೋಽಹಂ ಧನ್ಯೋಽಹಂ
ನಿತ್ಯಂ ಸ್ವಾತ್ಮಾನಮಂಜಸಾ ವೇದ್ಮಿ ।
ಧನ್ಯೋಽಹಂ ಧನ್ಯೋಽಹಂ
ಬ್ರಹ್ಮಾನಂದೋ ವಿಭಾತಿ ಮೇ ಸ್ಪಷ್ಟಂ ॥ ೨೦ ॥

ಧನ್ಯೋಽಹಂ ಧನ್ಯೋಽಹ್ಣಂ ದುಃಖಂ
ಸಾಂಸಾರಿಕಂ ನ ವೀಕ್ಷೇದ್ಯ ।
ಧನ್ಯೋಽಹಂ ಧನ್ಯೋಽಹಂ
ಸ್ವಸ್ಯಾಜ್ಞಾನಂ ಪಲಾಯಿತಂ ಕ್ವಾಪಿ ॥ ೨೧ ॥

ಧನ್ಯೋಽಹಂ ಧನ್ಯೋಽಹಂ ಕರ್ತವ್ಯಂ
ಮೇ ನ ವಿದ್ಯತೇ ಕಿಂಚಿತ್ ।
ಧನ್ಯೋಽಹಂ ಧನ್ಯೋಽಹಂ ಪ್ರಾಪ್ತವ್ಯಂ
ಸರ್ವಮತ್ರ ಸಂಪನ್ನಂ ॥ ೨೨ ॥

ಧನ್ಯೋಽಹಂ ಧನ್ಯೋಽಹಂ ತೃಪ್ತೇರ್ಮೇ
ಕೋಽಪಮಾ ಭವೇಲ್ಲೋಕೇ ।
ಧನ್ಯೋಽಹಂ ಧನ್ಯೋಽಹಂ ಧನ್ಯೋ
ಧನ್ಯಃ ಪುನಃ ಪುನರ್ಧನ್ಯಃ ॥ ೨೩ ॥

ಅವಧೂತನ ಉದ್ಗಾರ ಹೀಗೆ –

ಭಾವಾನುವಾದ :- ನಾನು ಧನ್ಯ, ನಾನೇ ಧನ್ಯ, ನನ್ನಾತ್ಮವನ್ನು ಒಡನೆಯೆ, ಇದ್ದುದು ಇದ್ದಂತೆಯೇ ಅರಿತುಕೊಂಡಿದ್ದೇನೆ.

ಬ್ರಹ್ಮಾನಂದವು ನನ್ನಲ್ಲಿ ಸ್ಪಷ್ಟವಾಗಿ ಬೆಳಗುತ್ತಿದೆ. ಈಗ ನಾನು ಸಂಸಾರದ ದುಃಖವನ್ನು ಕಾಣುತ್ತಲೇ ಇಲ್ಲ. ಈವರೆಗೆ ನನಗಿದ್ದ ಅಜ್ಞಾನವು ಎಲ್ಲಿಯೋ ಓಡಿಹೋಯಿತು. ನನಗಿನ್ನು ಮಾಡಬೇಕಾದುದು ಏನೂ ಉಳಿದಿಲ್ಲ. ನಾನು ಪಡೆದುಕೊಳ್ಳಬೇಕಾದ ಎಲ್ಲವನ್ನೂ ಇಲ್ಲಿ ಪಡೆದುಕೊಂಡೆ. ನನ್ನ ಸಮಾಧಾನಕ್ಕೆ ಲೋಕದಲ್ಲಿ ಯಾವುದು ತಾನೆ ಎಣೆಯಾದೀತು ? ನಾನೇ ಧನ್ಯ, ಧನ್ಯ, ಮತ್ತೆ ಧನ್ಯ!

**ವಿವರಣೆ :-** ಇದು ತೀರ್ವವಾದ ಧನ್ಯತೆ. ಧನ್ಯ (ಧನ + ಯತ್) ಎಂಬ ಮಾತಿಗೆ 'ಧನಾಯ ಹಿತಃ' ಎಂದು ಮೂಲಾರ್ಥ; ಧನಕ್ಕೆ ಒಳ್ಳೆಯದು, ಎಂದರೆ ಧನವನ್ನು ಪಡೆದಿಟ್ಟುಕೊಳ್ಳಲು ಸರಿಯಾದುದು. ಧನ್ಯ, ಮಾನ್ಯ ಎಂದು ಸೇರಿಸಿ ಹೇಳುತ್ತೇವೆ. ದುಡ್ಡಿದ್ದವನು ಧನ್ಯ; ಮಾನ (ಗೌರವ) ಇದ್ದವನು ಮಾನ್ಯ. 'ಧನ್ಯ'ನೆಂದರೆ ಸುಕೃತಿ, ಪುಣ್ಯವಂತ ಎಂದು ಅಮರಕೋಶ ತಿಳಿಸುತ್ತದೆ. ಒಳ್ಳೆಯ ಕೆಲಸವನ್ನು ಮಾಡಿದವನು ಧನ್ಯ; ಪುಣ್ಯವನ್ನು ಪಡೆದುಕೊಂಡವನು ಧನ್ಯ. ಅವಧೂತರು ಸುಕೃತವನ್ನೂ ಪುಣ್ಯವನ್ನೂ ಬಿಟ್ಟವರಲ್ಲವೆ ? ಅವರಿಗೆ ಧನ ಎಲ್ಲಿಯದು ?

ಇಲ್ಲಿ ಅವಧೂತನು ಧನ್ಯನಾಗಿರುವುದು ತನ್ನನ್ನು ತಾನು ನೇರಾಗಿ ಅರಿತುಕೊಂಡದ್ದರಿಂದ; ಆತ್ಮಸಾಕ್ಷಾತ್ಕಾರವೇ ಧನ. ಬ್ರಹ್ಮಾನಂದವನ್ನು ಅನುಭವಿಸಿದ್ದೇ ಸುಕೃತ. ಪಡೆದುಕೊಳ್ಳಬೇಕಾದುದನ್ನೆಲ್ಲ ಪಡೆದು ಕೊಂಡದ್ದೇ ಪುಣ್ಯ. ಸಂಸಾರದ ಕ್ಲೇಶ ಮರೆಯಾಯಿತು; ಸ್ವಸ್ವರೂಪಾನು ಸಂಧಾನಕ್ಕೆ ಅಡ್ಡಿಯಾಗಿದ್ದ ಅಜ್ಞಾನದ ತೆರೆ ಕಳಚಿಬಿದ್ದಿತು. ಎಣೆಯಿರದ ಸಮಾಧಾನ ಒದಗಿಬಂದಿತು. ಇವೆಲ್ಲ ಒಂದೇ ಅನುಭವದ ವಿವರಗಳು. ಬೇರೆ ಬೇರೆ ಅನುಭವಗಳಲ್ಲ. ಅವಧೂತನು ಜೀವನ್ಮುಕ್ತ, ಶರೀರದಲ್ಲಿದ್ದುಕೊಂಡೇ ಮೋಕ್ಷದ ಅನುಭವ ಅವನದ್ದು. ಅವನ

ಅನುಭವವನ್ನು ಹೇಗೆ ತಾನೆ ಮಾತಿನಲ್ಲಿ ಬಣ್ಣಿಸಬಹುದು? ಅನುಭವವನ್ನು ಪರಾಮರ್ಶೆ ಮಾಡಿದಾಗ ಉಂಟಾಗುವ ಸಂತೋಷ, ಸಮಾಧಾನಗಳನ್ನಷ್ಟೆ ಸೂಚಿಸಬಹುದು. ಈ ನಾಲ್ಕು ಶ್ಲೋಕಗಳ ವಿಷಯ ಇದೇ.

ಅವಧೂತನು ಅಧ್ಯಾತ್ಮದ ಪಯಣಿಗ. ಅವನು ಧೈರ್ಯದಿಂದ, ಸ್ಥೈರ್ಯದಿಂದ, ವಿವೇಕದಿಂದ, ವಿರಕ್ತಿಯಿಂದ ಮುಂದೆ ಮುಂದೆ ಸಾಗಿ ಇದ್ದಕ್ಕಿದ್ದಂತೆ ಪರಮಪುರುಷಾರ್ಥದೆದುರು ನಿಂತಿದ್ದಾನೆ. ಅಲ್ಲಿಗೆ ಅವನ ಪಯಣ ಮುಗಿಯಿತು. ಎಲ್ಲವೂ ಅಲ್ಲಿಯೇ ಇದೆ; ಅದರಾಚೆ ಏನೂ ಇರದು, ಹೃದಯದಲ್ಲೇ ಕೇವಲ ಆನಂದ ಎಂದೂ ಬೆಳಗುತ್ತಿರುತ್ತದೆ. ಆತ್ಮ ಎಂದರೆ ಆನಂದವೇ. ಅದು ನಮ್ಮ ಅನುಭವಕ್ಕೆ ಬರುವುದಿಲ್ಲ, ಅಷ್ಟೆ. ಸಾಮಾನ್ಯವಾಗಿ ನಾವು ಪಡೆದುಕೊಳ್ಳುವುದು ವಿಷಯಾನಂದ; ಹೊರಗಣವಸ್ತುಗಳನ್ನು ಗಳಿಸಿಕೊಂಡೋ, ಭೋಗಿಸಿಯೋ ಪಡೆದು ಕೊಳ್ಳುವುದು. ಅವಧೂತನಿಗೆ ಆತ್ಮಾನುಭವವಾದಾಗ ಅನುಭವಿಸುವ ಆನಂದ ಹೀಗೆ ಉಪಾಧಿಲಭ್ಯವಾದುದಲ್ಲ; ಸಹಜಸಿದ್ಧವಾದುದು. ಬ್ರಹ್ಮಾನಂದವೆಂದರೆ ಬ್ರಹ್ಮನ ಆನಂದ ಎಂದಲ್ಲ, ಬ್ರಹ್ಮನೇ ಆನಂದ ಎಂದರ್ಥ. ಆತ್ಮಾನುಭವ, ಆನಂದಾನುಭವ ಎರಡು ಬೇರೆಬೇರೆ ಯಲ್ಲ; ಆತ್ಮವೇ ಆನಂದ. ಆತ್ಮನಿಷ್ಠನಾದವನು ಅನುಭವಿಸುವುದು ಆನಂದವನ್ನೇ.

ಇದನ್ನು ಪಡೆದುಕೊಳ್ಳುವುದೇ ಕರ್ತವ್ಯ, ಪ್ರಾಪ್ತವ್ಯ, ತೃಪ್ತಿ; ಜೀವಭಾವ, ಪ್ರಪಂಚಭಾವ ಎರಡೂ ತೊಲಗಿಹೋಗಿ ಆತ್ಮವೊಂದೇ ಇರುವಾಗ ಒದಗುವ ಆನಂದವೇ ಇಲ್ಲಿ ಧನ್ಯತೆಗೆ ಕಾರಣ. ಆನಂದಾನು ಭವವೆಂದೊಡನೆಯೇ ಸಂಸಾರದ ಕ್ಲೇಶಗಳೆಲ್ಲ ಮರೆಯಾದುವೆಂದರ್ಥ. ಸಂಸಾರದ ಗೀಳು ತಪ್ಪಿದರೇನೆ ತನ್ನೊಳಗೇ ನಿಚ್ಚಳವಾಗಿ ಬೆಳಗುವ

ಆನಂದವನ್ನು ಅನುಭವಿಸಲಾಗುವುದು. ತಾನು ಆತ್ಮರೂಪದಲ್ಲೆ ನೆಲೆಸುವುದು ಅವರ್ಣನೀಯವಾದ ಆನಂದ. ದುಃಖಗಳು ಒದಗು ವುದು 'ನಾನು' 'ನನ್ನದು' ಎಂಬ ವ್ಯವಹಾರವಿರುವಾಗ, ಆತ್ಮದ ಅರಿವಿಲ್ಲದಿರುವಾಗ; ಪೂರ್ಣತೆಯ ಅನುಭವವಿಲ್ಲದಿರುವಾಗ. ಜೀವಭಾವದ ಒಂದು ಗುಣ ಅದು. ಆತ್ಮಾನುಭವದಲ್ಲಿ ದುಃಖ ವೆಂಬುದಿರದು. ಅಲ್ಲಿ 'ನಾನು' ಎಂಬುದಿಲ್ಲವಷ್ಟೆ ?

**ಅಹೋ ಪುಣ್ಯಮಹೋ ಪುಣ್ಯಂ ಫಲಿತಂ ಫಲಿತಂ ದೃಢಂ ।**
**ಅಸ್ಯ ಪುಣ್ಯಸ್ಯ ಸಂಪತ್ತೇರಹೋ ವಯಮಹೋ ವಯಂ ॥ ೨೪ ॥**

**ಅಹೋ ಜ್ಞಾನಮಹೋ ಜ್ಞಾನಮಹೋ ಸುಖಮಹೋ ಸುಖಂ ।**
**ಅಹೋ ಶಾಸ್ತ್ರಮಹೋ ಶಾಸ್ತ್ರಮಹೋ ಗುರುರಹೋ ಗುರುಃ ॥ ೨೫ ॥**

**ಭಾವಾನುವಾದ :-** ಓ ನನ್ನ ಪುಣ್ಯ, ನನ್ನ ಪುಣ್ಯ ಫಲಿಸಿತಿಂದು ಪೂರ್ಣವಾಗಿ! ಈ ಪುಣ್ಯದ ಸಂಪದದಿಂದ ನಾವು ನಾವೇ ಆಗಿದ್ದೇವೆ. ಓ ಜ್ಞಾನ, ಜ್ಞಾನ! ಸುಖವೇ ಸುಖ! ಓ ಶಾಸ್ತ್ರ ಶಾಸ್ತ್ರ! ಓ ಗುರು ಗುರು!

**ವಿವರಣೆ :-** ಇದು ಅವಧೂತನು ತನ್ನ ಧನ್ಯತೆಯ ಆವೇಶದಲ್ಲಿ ಆಡುವ ಮಾತುಗಳು. ಸಾಮಾನ್ಯವಾಗಿ, ಸುಖವೋ ಲಾಭವೋ ಜಯವೋ ಒದಗಿದರೆ, ಅದು ಪುಣ್ಯದ ಫಲವೆಂದು ಬಗೆಯುತ್ತೇವೆ. ದುಃಖ, ನಷ್ಟ, ಸೋಲು ಆದರೆ ಪಾಪದ ಫಲವೆಂದು ಎಣಿಕೆ. ಅವಧೂತನ ಪುಣ್ಯವೆಂದರೆ ಪ್ರಾಪಂಚಿಕಲಾಭದ್ದಲ್ಲ. ಆತ್ಮಾನುಭವ ತನಗೊದಗಿಬಂದದ್ದೇ ಪುಣ್ಯ. ಸುತ್ತಮುತ್ತ ಇರುವ ಮಂದಿಯೆಲ್ಲ ಜೀವ ಭಾವದಿಂದ, ಪ್ರಪಂಚಭಾವದಿಂದ ಬಳಲಿ ಬೆಂಡಾಗಿ ಬಿಸುಸುಯ್ದು ಬೇಗುದಿಗೊಳ್ಳುತ್ತಿರುವುದನ್ನು ಕಂಡಾಗ ತನ್ನ ಪುಣ್ಯ ಎಷ್ಟೆಂದು ಸೋಜಿಗ

ಪಡುತ್ತಾನೆ ಅವಧೂತ. ಈ ಪುಣ್ಯವೇ ಪುಣ್ಯ! ಆತ್ಮಾನುಭವದ ಪುಣ್ಯ, ಆನಂದಾನುಭವದ ಪುಣ್ಯ.

ಈ ಪುಣ್ಯ ದೃಢವಾದುದು. ಬೇರೆ ಪುಣ್ಯಗಳಾದರೆ ಪುಣ್ಯವಿರುವ ವರೆಗೆ ಸುಖ, ಪುಣ್ಯ ತೀರಿತೆಂದರೆ ಮತ್ತೆ ಸಂಸಾರದ ಕ್ಲೇಶ. ಇದು ಹಾಗಲ್ಲ. ಆತ್ಮ ತೋರಿ ಮರೆಯಾಗುವ ವಸ್ತುವಲ್ಲ; ವಿಕಾರವನ್ನು ಹೊಂದುವುದೂ ಅಲ್ಲ. ಇರುವಂತೆಯೇ ಎಂದೆಂದೂ ಇರುವುದು. ಇದನ್ನು ಕಂಡುಕೊಳ್ಳುವ, ಅನುಭವಿಸುವ, ಅದರಲ್ಲೇ ನೆಲೆಯಾಗಿ ನಿಲ್ಲುವ ಫಲ ಈ ಪುಣ್ಯದ್ದು.

ಇದರಿಂದಾಗಿ ಅವಧೂತ ತಾನು ತಾನೇ (ಎಂದರೆ ಆತ್ಮವೇ) ಆಗಿದ್ದಾನೆ. ಈಗ ಅವನೇನು ಜೀವವಲ್ಲ; ಪ್ರಪಂಚಭಾವ ಅವನಿಗಿಲ್ಲ. ಅವನ ಒಂದು ಲಕ್ಷಣ ನಿರಹಂಕಾರತೆ. ಅವನಲ್ಲಿ 'ನಾನು', 'ನನ್ನದು' ಎಂಬ ಕಲ್ಪನೆಗಳಿರವು. 'ನನ್ನ ದೇಹ', 'ನನ್ನ ಆಸ್ತಿ', 'ನನ್ನ ಯಶಸ್ಸು', ಮೊದಲಾದ ಅಭಿಮಾನವಿಲ್ಲದಿರುವುದು ನಿರಭಿಮಾನತೆ. ಇದು ಅವನ ಇನ್ನೊಂದು ಲಕ್ಷಣ. ತಾನು ತಾನೇ ಎನ್ನುವಾಗ, ತನ್ನಲ್ಲಿ ತಾನಿದ್ದೇನೆ ಪ್ರಪಂಚದಲ್ಲಲ್ಲ, ತನಗೆ ಪ್ರಪಂಚಭಾವವೂ ಇಲ್ಲ, ಶರೀರದೃಷ್ಟಿಯೂ ಇಲ್ಲ, ಎನ್ನುವುದು ಧ್ವನಿ. ಸಾಮಾನ್ಯ ಜನರು ತಮ್ಮಲ್ಲಿ ತಾವು ಬಿಡಿಬೀಸಾಗಿ ಇರುವುದಿಲ್ಲ, ಜಗತ್ತಿನಲ್ಲಿರುತ್ತಾರೆ. ಅವರಿರುವುದು ಯಾವುದೋ ಮನೆಯಲ್ಲಿ, ಯಾವುದೋ ಕೇರಿಯಲ್ಲಿ, ಯಾವುದೋ ವೃತ್ತಿಯಲ್ಲಿ, ಯಾವುದೋ ಜಾತಿಯಲ್ಲಿ, ಯಾವುದೋ ರೂಪದಲ್ಲಿ, ಯಾವುದೋ ನೆರೆಹೊರೆಯಲ್ಲಿ ಎಂದ ಮೇಲೆ, ಅವರು ತಾವಾಗಿರು ವುದಿಲ್ಲ. ಅವರನ್ನು ಗುರುತಿಸಲು ಅವರ ಜಾತಿ, ಲಿಂಗ, ಊರು, ಮನೆತನ, ಕೆಲಸ ಮೊದಲಾದುವನ್ನು ಹೇಳಬೇಕು. ಇಲ್ಲದಿದ್ದರೆ

ಆವರಿರುವುದೇ ತಿಳಿಯುವುದಿಲ್ಲ. ಅವಧೂತರ ಸ್ಥಿತಿ ಹಾಗಲ್ಲ. ಆವರಿರುವುದು ಹೊರಗಲ್ಲ, ಒಳಗೆ.

ಇನ್ನು, ಅವರ ಜ್ಞಾನವೆಂದರೆ ನಮ್ಮಲ್ಲಿರುವಂತೆ ವಿಷಯಜ್ಞಾನವಲ್ಲ, ಬಹಿಃಪ್ರಜ್ಞೆಯ ತಿಳಿವಳಿಕೆಯಲ್ಲ. ಆತ್ಮಜ್ಞಾನ ಅವರದ್ದು. ಆ ಮಾತಿಗೆ ಆತ್ಮದ ಜ್ಞಾನವೆಂದೇನು ಅರ್ಥವಲ್ಲ; ಆತ್ಮವೇ ಜ್ಞಾನ ಎಂಬರ್ಥ. ಆತ್ಮದ ಸ್ವರೂಪವೇ ಜ್ಞಾನ; ಚಿತ್. ಹಾಗೆಯೇ ಈ ಜ್ಞಾನದ ಫಲವಾಗಿ ಬಂದ ಆತ್ಮಸುಖ, ಆತ್ಮದ ಸುಖವಲ್ಲ; ಆತ್ಮವೇ ಸುಖ ಎಂಬರ್ಥದಲ್ಲಿ. ಆತ್ಮ ಇರವು (ಸತ್) ಅರಿವು (ಚಿತ್) ಮತ್ತು ಆನಂದ. ಇವು ಮೂರು ಆತ್ಮದ ಗುಣಗಳೆಂಬರ್ಥದಲ್ಲಿ ಸಚ್ಚಿದಾನಂದವಲ್ಲ. ಇರವೇ ಅರಿವು, ಅರಿವೇ ಆನಂದ. ಈ ಆನಂದದಲ್ಲಿ ವಿಷಯಸುಖದ ಸೊಲ್ಲಿಲ್ಲ. ಇಂಥ ಆನಂದ ಸಾಮಾನ್ಯ ಮನುಷ್ಯರ ಪಾಲಿಗೆ ಬರುವುದಿಲ್ಲ. ಅವಧೂತನಿಗಾದರೆ ಅವನ ಸಹಜಸ್ಥಿತಿಯೇ ಆನಂದ. ಜ್ಞಾನವೆಂದರೆ ಆತ್ಮಜ್ಞಾನವೇ ಎನ್ನುವಾಗ ಅರ್ಥ ಇದು. ನಾಮರೂಪಾತ್ಮಕವಾದ ಪ್ರಪಂಚ ನಮ್ಮ ವ್ಯವಹಾರದಲ್ಲಿದೆಯಲ್ಲ ? ಅದಕ್ಕೆ ಆಸರೆಯಾಗಿರುವುದು, ಮೂಲ ರೂಪವಾಗಿರುವುದು ಆತ್ಮ. ದಿಟವಾದ ಆ ಗೋಡೆಯ ಮೇಲೆ ತೋರಿಕೆಯ ಜಗತ್ತಿನ ಚಿತ್ರಗಳು ಮೂಡಿಬಂದಿವೆ ಅಷ್ಟೆ. ಆತ್ಮಕ್ಕಿಂತ ಸ್ವತಂತ್ರವಾದ ಬೇರೆಯಾದ ನೆಲೆ ಪ್ರಪಂಚಕ್ಕಿರದು. ಪ್ರಪಂಚದ ಅಧಿಷ್ಠಾನ ಸಚ್ಚಿದಾನಂದರೂಪವಾದ ಆತ್ಮವೇ. ಎಲ್ಲಕ್ಕೂ ಆಧಾರ ವಾಗಿರುವ ಆತ್ಮ ನಮ್ಮ ಒಡಲಲ್ಲೇ ನಮ್ಮ ಅನುಭವಕ್ಕೆ ಬರುತ್ತದೆ.

ಶಾಸ್ತ್ರವೆಂದರೆ ಮನುಷ್ಯರ ಅಭ್ಯುದಯ - ನಿಃಶ್ರೇಯಸಗಳಿಗೆ ಉಪಾಯ. ಅಭ್ಯುದಯವೆಂಬುದು ಲೋಕಕ್ಕೆ ಸಂಬಂಧಿಸಿದ್ದು. ಪ್ರಾಪಂಚಿಕವಾದ ಪ್ರಗತಿ. ಮನೆ-ಮಠ, ಮಕ್ಕಳು-ಮರಿ, ಧನ-ಕನಕ, ಆಸ್ತಿ-ಪಾಸ್ತಿ, ಜಯ-ಲಾಭ, ಯಶಸ್ಸು-ಪ್ರತಿಷ್ಠೆ, ಸ್ಥಾನ-ಮಾನ,

ಮೊದಲಾದುವುಗಳನ್ನು ಕುರಿತದ್ದು. ಸಾಮಾನ್ಯವಾಗಿ ಇಂದ್ರಿಯ ಗೋಚರವಲ್ಲದ, ಯುಕ್ತಿಗೆ ನಿಲುಕದ ಧರ್ಮ ಮತ್ತು ಮೋಕ್ಷ ಇವೆರಡನ್ನು ಕುರಿತದ್ದು ಶಾಸ್ತ್ರ; ಶಾಸ್ತ್ರವಲ್ಲದೆ ಧರ್ಮವೆಂಬುದಾಗಲಿ ಮೋಕ್ಷವೆಂಬುದಾಗಲಿ ಬೇರೆ ಯಾವ ಉಪಾಯದಿಂದಲೂ ಸಿದ್ಧ ವಾಗುವುದಿಲ್ಲ. ಧರ್ಮದಿಂದ ಅಭ್ಯುದಯ, ಮೋಕ್ಷವೆಂದರೆ ನಿಃಶ್ರೇಯಸ. ಮೀಮಾಂಸಾಶಾಸ್ತ್ರ ಮೊದಲನೆಯದನ್ನು ಹೇಳುತ್ತದೆ, ವೇದಾಂತಶಾಸ್ತ್ರ ಎರಡನೆಯದನ್ನು.

ಧರ್ಮವೆನ್ನುವಾಗ ಜೀವಭಾವ, ಪ್ರಪಂಚಭಾವ ರೂಢಮೂಲ ವಾಗಿರುತ್ತದೆ. ಜೀವಕ್ಕೇ ಇರುವುದು ಧರ್ಮದ ಕಲ್ಪನೆ. ಧರ್ಮದ ನೆರಳಿನಲ್ಲಿ ಅರ್ಥ (ಧನ) ಮತ್ತು ಕಾಮ (ಬಯಕೆಗಳು) ವ್ಯಕ್ತಿಜೀವನ, ಸಮುದಾಯ ಜೀವನಗಳಲ್ಲಿ ಸೇರಿಕೊಂಡು ಬರುತ್ತವೆ. ಹೊರಗಣ ಪ್ರಪಂಚ ದಿಟವಾದುದು, ಗಟ್ಟಿಯಾದುದು, ನಿತ್ಯವಾದುದು, ಸುಖಕ್ಕೆ ಕಾರಣವಾಗುವುದು ಎಂಬ ವಿಶ್ವಾಸ ಇದ್ದರೇನೆ ಧರ್ಮ ಪ್ರಸಕ್ತ ವಾಗುವುದು. ಜೀವಭಾವವನ್ನು ಕುರಿತ ವಿವೇಚನೆ ವೇದಾಂತದಲ್ಲಿ ಬರುತ್ತದೆ. ಜೀವವಾಗಲಿ, ಪ್ರಪಂಚವಾಗಲಿ ಕಲ್ಪನೆಗಳಷ್ಟೇ ; ದಿಟ ವಾದುವಲ್ಲ, ನಿತ್ಯವಾದುವಲ್ಲ; ಕ್ಲೇಶಕ್ಕೆ ಕಾರಣವಾಗುವುವು. ಆತ್ಮ ವೆನ್ನುವುದೇ ಸತ್ಯ, ನಿತ್ಯ, ಸುಖ.

ಅವಧೂತನ ಪಾಲಿಗೆ ಶಾಸ್ತ್ರವೆಂದರೆ ವೇದಾಂತಶಾಸ್ತ್ರವೇ. ವೇದಾಂತಶ್ರವಣದಿಂದಲೇ ಆತ್ಮತತ್ತ್ವದ ಅರಿವಾಗುವುದು. ವೇದಾಂತ ಮನನದಿಂದಲೇ ಆತ್ಮತತ್ತ್ವದ ವಿಚಾರ ಫಲಿಸುವುದು; ನಿದಿಧ್ಯಾಸನ ದಿಂದ ಆತ್ಮತತ್ತ್ವ ಅನುಭವಕ್ಕೆ ಬರುವುದು. ಅವಧೂತನದು ಆತ್ಮನಿಷ್ಠೆ. ವೇದಾಂತಶಾಸ್ತ್ರದಲ್ಲಿ ಶ್ರುತಿಯಷ್ಟೇ ಪ್ರಮಾಣವಲ್ಲ. ಅನುಭವವೂ ಪ್ರಮಾಣವೇ. ಅವಧೂತನ ಬಂಡವಾಳ ಅನುಭವ.

ಇನ್ನು, ಗುರುವೆಂದರೆ ವೇದಾಂತಶಾಸ್ತ್ರದ ಶ್ರವಣವನ್ನು ಮಾಡಿಸುವವನು. 'ಗು' ಎಂದರೆ ಕತ್ತಲೆ, 'ರು' ಎಂದರೆ ಅದನ್ನು ಕಳೆಯುವವನು. ಆತ್ಮಜ್ಞಾನವಿಲ್ಲದಿರುವುದೇ ಕತ್ತಲೆ; ಒಳಗಣ ಕತ್ತಲೆ. ಮನಸ್ಸಿನ ಮೇಲೆ ಮುಸುಕಿರುವ ಅಜ್ಞಾನ, ಸಂಶಯ, ವಿಪರ್ಯಾಸ (ಅನ್ಯಥಾಜ್ಞಾನ)ಗಳು. ಅಜ್ಞಾನವು ತೊಡೆದುಹೋಗುವುದು ಜ್ಞಾನದಿಂದಲೇ. ಕತ್ತಲೆ ಕಳೆಯುವುದು ದೀಪದ ಬೆಳಕಿನಿಂದಲೇ ತಾನೆ? ಇಂಥ ಜ್ಞಾನ ನಮಗೆ ದೊರೆಯುವುದು ಗುರುವಿನಿಂದ, ಗುರುವಿಗೆ ಶಾಸ್ತ್ರಜ್ಞಾನವಷ್ಟೆ ಇದ್ದರೆ ಸಾಲದು. ಅನುಭವವೂ ಇರಬೇಕು. ಆತ್ಮತತ್ತ್ವವನ್ನು ತಾನೇ ಅನುಭವಿಸಿದವನು, ತನ್ನ ಬಳಿಗೆ ಬಂದವರಿಗೆ ಅದೇ ಅನುಭವವನ್ನು ಒದಗಿಸಬಲ್ಲವನು ಗುರು.

ಅವಧೂತ ಸಂಪ್ರದಾಯದಲ್ಲಿ, ಸಿದ್ಧಸಂಪ್ರದಾಯದಲ್ಲಿರುವಂತೆ, ಗುರುವಿಗೆ ವಿಶೇಷ ಮನ್ನಣೆ. ಗುರುವಿನ ಕರುಣೆಯಿಂದಾಗಿಯೇ ಶಿಷ್ಯನಿಗೆ ಆತ್ಮದರ್ಶನವಾಗುವುದು, ಆತ್ಮಸಾಕ್ಷಾತ್ಕಾರವಾಗುವುದು. ಗುರುವೂ ಅವಧೂತನಾಗಿರಬೇಕು. ಅವಧೂತನಲ್ಲದವನು ಗುರುವಾದರೆ ಶಾಸ್ತ್ರಜ್ಞಾನವೇನೋ ಒದಗೀತು. ಆದರೆ ಆತ್ಮಾನುಭವ ಕೈಗೂಡಲಾರದು.

**ಇತಿ ಯ ಇದಮಧೀತೇ ಸೋಽಪಿ ಕೃತಕೃತ್ಯೋ ಭವತಿ ।**
**ಸುರಾಪಾನಾತ್ಪೂತೋ ಭವತಿ । ಸ್ವರ್ಣಸ್ತೇಯಾತ್ಪೂತೋ ಭವತಿ ।**
**ಬ್ರಹ್ಮಹತ್ಯಾತ್ಪೂತೋ ಭವತಿ ।**
**ಏವಂ ವಿದಿತ್ವಾ ಸ್ವೇಚ್ಛಾಚಾರಪರೋ**
**ಭೂಯಾದೋಂ ಸತ್ಯಮಿತ್ಯುಪನಿಷತ್ ॥ ೨೬ ॥**

**ಹರಿಃ ಓಂ । ತತ್ಸತ್ ॥**

**ಭಾವಾನುವಾದ** :- ಹೀಗೆ, ಯಾರು ಇದನ್ನು ಅಧ್ಯಯನ ಮಾಡುವನೋ, ಅವನು ಮಾಡಬೇಕಾದುದನ್ನು ಮಾಡಿದವನು ಆಗುತ್ತಾನೆ. ಹೆಂಡ ಕುಡಿದದ್ದರಿಂದ ಒದಗಿದ ಪಾಪ ಅವನಿಂದ ಜಾರಿಹೋಗುತ್ತದೆ. ಬಂಗಾರವನ್ನು ಕದ್ದದ್ದರಿಂದ ಬಂದ ಪಾಪ ಅವನಿಂದ ಹಾರಿ ಹೋಗುತ್ತದೆ. ವಿದ್ಯಾವಿನಯ ಸಂಪನ್ನನಾದವನನ್ನು ಕೊಂದದ್ದರಿಂದ ಬಂದ ಪಾಪ ಅವನಿಂದ ದೂರವಾಗುತ್ತದೆ. ಹೀಗೆ ತಿಳಿದವನು ತನ್ನ ಮನಸ್ಸಿಗೆ ಬಂದಂತೆ ನಡೆದುಕೊಳ್ಳುವನು. ಓಂ ಸತ್ಯಂ! ಬ್ರಹ್ಮವೇ ಸತ್ಯ ಹೀಗೆ ಉಪನಿಷತ್ತು ಮುಗಿಯುತ್ತದೆ.

**ವಿವರಣೆ** :- ಇದು ಫಲಸ್ತುತಿಯ ಭಾಗ. ಅವಧೂತೋಪ-ನಿಷತ್ತನ್ನು ಅಧ್ಯಯನ ಮಾಡಿದ ಶ್ರದ್ಧಾಳುವಿಗೆ ಯಾವ ಪ್ರಯೋಜನ ಗಳು ಒದಗಿ ಬರುತ್ತವೆಯೆಂದು ಹೇಳುವ ಭಾಗ. ಅವನು ಮಾಡ ಬೇಕಾದ ಕೆಲಸವನ್ನು ಮಾಡಿದವನಾಗುತ್ತಾನೆ. ಆತ್ಮತತ್ತ್ವವನ್ನು ಅರಿತುಕೊಳ್ಳುವುದು, ಅನುಭವಕ್ಕೆ ತಂದುಕೊಳ್ಳುವುದು ಅವನು ಮಾಡಬೇಕಾದ ಕೆಲಸ. ಈ ಉಪನಿಷತ್ತು ಅದನ್ನು ತಿಳಿಯ ಹೇಳುತ್ತದೆ. ಹೆಂಡವನ್ನು ಕುಡಿಯುವುದು, ಚಿನ್ನವನ್ನು ಕದಿಯುವುದು, ಸಜ್ಜನನನ್ನು ಕೊಲ್ಲುವುದು ಮೊದಲಾದ ಪಾಪಗಳಿಗೆ ಜನ ಬೆದರುತ್ತಾರೆ. ಇವೆಲ್ಲ ಮಹಾಪಾತಕಗಳು; ನರಕಕ್ಕೆ ಕಾರಣವಾಗುವುವು. ಆದರೆ ಅವಧೂತನ ನೆಲೆಯನ್ನು ಮುಟ್ಟಿದರೆ ಯಾವ ಪಾಪದ ಅಂಜಿಕೆಯೂ ಇರದು. ಅಂಥ ಪಾಪಗಳನ್ನು ಅವಧೂತನು ಮಾಡುವನೆಂದಾಗಲಿ, ಅಂಥ ಪಾಪಗಳನ್ನು ಮಾಡಿದವನು ಅವಧೂತನಾಗಬಲ್ಲನೆಂದಾಗಲಿ ಅರ್ಥ ವಲ್ಲ. ಪಾಪಗಳಲ್ಲಿ ಮಹಾಪಾತಕಗಳು ಇವು. ಅಂಥವನ್ನು ಮಾಡಿದರೆ ಬರುವ ಪಾಪವಾಗಲಿ ಅವಧೂತನ ನೆಲೆಯಲ್ಲಿ ಪಾಪಗಳಾಗಲಾರವು.

ಪಾಪ ಪುಣ್ಯಗಳಿರುವುದು ಜೀವಭಾವದಲ್ಲಿ, ಪ್ರಪಂಚಪ್ರತೀತಿಯಲ್ಲಿ; ಆತ್ಮದ ನೆಲೆಯಲ್ಲಲ್ಲ. ಇದು ತಾತ್ಪರ್ಯ.

ಅವಧೂತನ ಮುಖ್ಯ ಲಕ್ಷಣ ಸ್ವೇಚ್ಛಾಚಾರ. ಯಾವ ಕಟ್ಟು ಕಟ್ಟಳೆಗಳಿಗೂ ಸಿಕ್ಕು ಬೀಳದೆ, ಆತ್ಮದ ನೆಲೆಯಲ್ಲಿದ್ದುಕೊಂಡು ಮನ ಬಂದಂತೆ ವ್ಯವಹರಿಸುವ ಸ್ವಾತಂತ್ರ್ಯ ಅವಧೂತನದು. ಯಾವ ಕಾರಣಕ್ಕಾಗಲಿ, ಎಷ್ಟು ಮಾತ್ರವಾಗಲಿ ಇದನ್ನು ಅವಧೂತ ಬಿಟ್ಟು ಕೊಡಲಾರ. ಅವನು ಸಂಪೂರ್ಣವಾಗಿ ಸ್ವಾವಲಂಬಿ, ಸ್ವ-ಸ್ಥ, ಸ್ವತಂತ್ರ. ಇದು ಅವಧೂತೋಪನಿಷತ್ತನ್ನು ಅಧ್ಯಯನಮಾಡುವವನಿಗೆ ಆದರ್ಶ.

॥ ಓಂ ಸತ್ಯಂ ॥

# ೩. ಮಹೋಪನಿಷತ್ತಿನಲ್ಲಿ ಅವಧೂತಚರ್ಯೆ

ನೂರೆಂಟು ಉಪನಿಷತ್ತುಗಳಲ್ಲಿ ಮಹೋಪನಿಷತ್ತೆಂಬುದೊಂದು. ಇದರಲ್ಲಿ ಅವಧೂತರನ್ನು ಕುರಿತು ಸುದೀರ್ಘವಾದ ಪ್ರಸ್ತಾಪ ಬರುತ್ತದೆ. ಅವಧೂತೋಪನಿಷತ್ತಿನಷ್ಟು ಸಣ್ಣದಲ್ಲ ಈ ಉಪನಿಷತ್ತು. ಇದರಲ್ಲಿ ಆರು ಅಧ್ಯಾಯಗಳಿದ್ದು ಇದು ಒಟ್ಟು ಐನೂರು ಮೂವತ್ತಾರು ಶ್ಲೋಕಗಳನ್ನೊಳಗೊಂಡಿದೆ. ಮೊದಲನೆಯ ಅಧ್ಯಾಯದಲ್ಲಿ ಸೂತ್ರದಂತಿರುವ ವಾಕ್ಯಗಳೇ ಇವೆ; ಶ್ಲೋಕಗಳಿಲ್ಲ. ಎರಡನೆಯ ಅಧ್ಯಾಯದಿಂದ ಕಡೆಯವರೆಗೆ ಶ್ಲೋಕಗಳು. ನಾಲ್ಕು ಐದನೆಯ ಅಧ್ಯಾಯಗಳು ದೊಡ್ಡದಾಗಿವೆ (ಕ್ರಮವಾಗಿ ೧೩೩ ಮತ್ತು ೧೮೬ ಶ್ಲೋಕಗಳು).

ಇದು ಆರಂಭವಾಗುವುದು ಅವಧೂತನೆಂದು ಪ್ರಸಿದ್ಧನಾದ ಶುಕದೇವನಿಂದಲೇ. ಶುಕನ ವಿಚಾರ ಬೇರೆ ಆಕರಗಳಿಂದ ತಿಳಿದು ಬರುತ್ತದೆ. ಶುಕನು ವ್ಯಾಸನ ಮಗ; ವ್ಯಾಸನು ಶಿವನನ್ನು ಕುರಿತು ತಪಸ್ಸು ಮಾಡಿ ಇವನನ್ನು ಪಡೆದುಕೊಂಡನು. ಹುಟ್ಟುವಾಗಲೆ ಅವನು ಜ್ಞಾನಿ. ಆದರೂ ಬೃಹಸ್ಪತಿಯ ಬಳಿ ಗುರುಕುಲವಾಸ ಮಾಡಿ ವಿದ್ಯೆಯನ್ನು ಕಲಿತನು. ಮನೆಗೆ ಹಿಂದಿರುಗಿದ ನಂತರ ಸಂಸಾರದ ಬಗ್ಗೆ ಜಿಗುಪ್ಸೆಯನ್ನು ತಳೆದು ಮೋಕ್ಷಮಾರ್ಗವನ್ನು ತಿಳಿಯಲು ಕುತೂಹಲಿಯಾದನು. ತಂದೆಯಾದ ವ್ಯಾಸನು ಇವನನ್ನು ಮಿಥಿಲೆಯ ರಾಜ ಜನಕನ ಬಳಿಗೆ ಕಳುಹಿಸಿದನು. ಮಹಾಮೇರು ಪರ್ವತವನ್ನು ದಾಟಲು

ಎರಡು ವರ್ಷಗಳು ಹಿಡಿದುವು; ಆಮೇಲೆ ಹಿಮಾಲಯವನ್ನು ದಾಟಿ ಮಿಥಿಲೆಗೆ ಬರಲು ಇನ್ನೊಂದು ವರ್ಷ ಹಿಡಿಯಿತು. ಶುಕ-ಜನಕರ ಸಂವಾದ ಉಪನಿಷತ್ತಿನಲ್ಲಿಯೇ ಬಂದಿದೆ.

ಜನಕನ ಉಪದೇಶದಿಂದ ಬ್ರಹ್ಮಜ್ಞಾನವನ್ನು ಪಡೆದುಕೊಂಡು ತಂದೆಯ ಮನೆಗೆ ಹಿಂದಿರುಗಿದನು. ಪಿತೃದೇವತೆಗಳ ಮಗಳಾದ ಪೀವರೆಯನ್ನು ಮದುವೆಯಾಗಿ ನಾಲ್ವರು ಗಂಡು ಮಕ್ಕಳನ್ನೂ ಕೀರ್ತಿಯೆಂಬ ಮಗಳನ್ನೂ ಪಡೆದನು. ವ್ಯಾಸರು ರಚಿಸಿದ ಮಹಾಭಾರತದ ಪೂರ್ಣಪಾಠವನ್ನು ಶುಕನು ಸೂತರೇ ಮೊದಲಾದ ಶಿಷ್ಯರಿಗೆ ಬೋಧಿಸಿದನು. ಭಾಗವತವೂ ಶುಕನ ಪಾಠವೇ. ಗೃಹಸ್ಥನಾಗಿದ್ದರೂ ಅವಧೂತನಾಗಿಯೇ ಬಾಳನ್ನು ಕಳೆದು, ಕಡೆಗಾಲದಲ್ಲಿ ನಾರದ ಋಷಿಗಳ ಸೂಚನೆಯಂತೆ ಕೈಲಾಸಪರ್ವತಕ್ಕೆ ತೆರಳಿ, ಧ್ಯಾನಮಗ್ನನಾಗಿ ಅಲ್ಲಿಯೇ ದೇಹವನ್ನಿಟ್ಟನು.

ವಾಲಖಿಲ್ಯರು, ವೈಖಾನಸರು ಮೊದಲಾದ ಅವಧೂತ ಋಷಿಗಳ ಸಂಪರ್ಕವು ಶುಕನಿಗಿದ್ದಿತು. ಶುಕದೇವ, ಶುಕಮಹರ್ಷಿ ಎಂದು ಅವನ ಖ್ಯಾತಿಯಿದ್ದಿತು. ಅವಧೂತಪರಂಪರೆಯಲ್ಲಿ ಅವನಿಗೆ ವಿಶಿಷ್ಟವಾದ ಸ್ಥಾನವಿದೆ. ಇವನು ಹುಟ್ಟುವಾಗ ವ್ಯಾಸರ ಆಶ್ರಮಕ್ಕೆ ಘೃತಾಚಿಯೆಂಬ ಅಪ್ಸರೆ ಗಿಣಿಯ ರೂಪದಿಂದ ಬಂದಳೆಂದೂ, ಈ ಕಾರಣದಿಂದ ಮಗುವಿಗೆ 'ಶುಕ' (ಎಂದರೆ ಗಿಣಿ) ಎಂಬ ಹೆಸರಾಯಿತೆಂದೂ ಕಥೆಯಿದೆ.

ಇಲ್ಲಿ ಕೆಳಗೆ ಕಾಣಿಸಿರುವ ಹಿನ್ನೆಲೆ ಮಹೋಪನಿಷತ್ತಿನಲ್ಲಿಯೇ ಬಂದಿರುವುದು.

## (೮)

ಶುಕನೆಂಬ ಅವಧೂತನು ಪುರಾಣೇತಿಹಾಸ ಪ್ರಸಿದ್ಧ. ವ್ಯಾಸರ (ಕೃಷ್ಣದ್ವೈಪಾಯನರ) ಮಗ. ಹುಟ್ಟಿದಾಗಲೇ ಮುನಿ; ಸತ್ಯವಸ್ತು ಯಾವುದಿದೆಯೋ ಅದನ್ನು ಪಡೆದುಕೊಂಡವನು. ತಾನೇ ವಿಚಾರ ಮಾಡಿ ತನ್ನ ವಿವೇಕದಿಂದಲೇ ಆತ್ಮತತ್ತ್ವವನ್ನು ಅವನು ನಿಶ್ಚಯ ಮಾಡಿಕೊಂಡ. ಸೂಕ್ಷ್ಮವಾದ ತನ್ನ ಬುದ್ಧಿಶಕ್ತಿಯಿಂದ ಏನನ್ನು ತಿಳಿದುಕೊಳ್ಳಬೇಕೋ ಅದೆಲ್ಲವನ್ನೂ ತಿಳಿದುಕೊಂಡ. ಆತ್ಮವೊಂದೇ ದಿಟವಾದುದು ಎಂಬುದನ್ನು ಖಚಿತಗೊಳಿಸಿಕೊಂಡಮೇಲೆ ವಿಷಯ ಚಾಪಲ್ಯ ಅವನಿಂದ ಜಾರಿಹೋಯಿತು. ಸ್ವಾತ್ಮಾನಂದದಲ್ಲಿ ಮುಳುಗಿ ಮೇರು ಪರ್ವತದ ಮೇಲೆ ಏಕಾಂಗಿಯಾಗಿ ವಿಹರಿಸುತ್ತಿದ್ದ.

ಒಮ್ಮೆ ಅವನು ತನ್ನ ತಂದೆಯಾದ ವ್ಯಾಸಮುನಿಯ ಬಳಿಗೆ ಬಂದು 'ಈ ಸಂಸಾರವೆಂಬ ತೋರಿಕೆಯ ನಾಟಕ ಹೇಗೆ ಮೊದಲಾಯಿತು? ಅದು ಯಾರಿಗೆ ಹೇಗೆ ಯಾವಾಗ ಮರೆಯಾಗುತ್ತದೆ ?' ಎಂದು ಪ್ರಶ್ನಿಸಿದ. ವ್ಯಾಸರು ತಮಗೆ ತಿಳಿದಿದ್ದುದನೆಲ್ಲ ಹೇಳಿದರು. ಶುಕನು 'ಇವೆಲ್ಲ ನನಗೆ ಮೊದಲೇ ತಿಳಿದಿದ್ದಿತು,' ಎಂದು ಬಿಟ್ಟ. ಆಗ ವ್ಯಾಸರು, ''ಅಪ್ಪಾ, ನನಗೆ ಇನ್ನು ಹೆಚ್ಚು ತಿಳಿದಿಲ್ಲ! ತತ್ತ್ವವನ್ನು ನಾನರಿಯೆ. ಮಿಥಿಲೆಯಲ್ಲಿ ಜನಕನೆಂಬ ರಾಜನಿದ್ದಾನೆ. ಅಲ್ಲಿಗೆ ಹೋಗಿ ಅವನನ್ನು ಕೇಳು. ಅವನು ಹೇಳಿಯಾನು'' ಎಂದರು. ಶುಕನು ವಿದೇಹದ ಮಿಥಿಲಾಪುರಿಗೆ ಬಂದು, ಜನಕನ ಅರಮನೆಯ ಮುಂದೆ ನಿಂತ. ಕಾವಲುಗಾರನೊಂದಿಗೆ ತಾನು ಬಂದಿರುವ ವಿಚಾರವನ್ನು ರಾಜನಿಗೆ ತಿಳಿಸುವಂತೆ ಹೇಳಿದ. ಜನಕನಾದರೋ ಮಹಾತ್ಮ. ಶುಕಮಹರ್ಷಿಯು ಜಿಜ್ಞಾಸುವಾಗಿ ಬಂದಿರುವುದನ್ನು ತಿಳಿದೂ ಕೂಡ ಸುಮ್ಮನಿದ್ದ; ಏಳು ದಿನಗಳ ಕಾಲ ಅತ್ತಕಡೆ ಗಮನವನ್ನೇ ಹರಿಸಲಿಲ್ಲ!

ಏಳು ದಿನಗಳು ತನ್ನ ಅರಮನೆಯ ತಲೆಬಾಗಲಲ್ಲೇ ನಿಂತಿದ್ದ ಶುಕನನ್ನು ಜನಕರಾಜನು ಅನಂತರ ಒಳಗೆ ಬರಮಾಡಿಕೊಂಡ. ತನ್ನ ಅಂತಃಪುರದಲ್ಲಿ ವಿಶೇಷವಾದ ಮರ್ಯಾದೆಯಿಂದ ಅವನನ್ನು ಕುಳ್ಳಿರಿಸಿ, ಅವನೆದುರು ಭೋಗ ಸಾಮಗ್ರಿಗಳನ್ನೆಲ್ಲ ಸಿದ್ಧಪಡಿಸಿ ಸಮರ್ಪಿಸಿದ. ಶುಕನು ಇದರ ಕಡೆ ತಿರುಗಿಯೂ ನೋಡದೆ, ಕಲ್ಲು ಬಂಡೆಯಂತೆ ಕುಳಿತಿದ್ದ. ಅವನ ಮುಖದ ಮೇಲೆ ಮನಸ್ಸಿನ ಸಂತೋಷ ಎಂದು ಕಾಣುತ್ತಿತ್ತು. ಶುಭ್ರವಾಗಿ, ಮಾತನಾಡದೆ, ಸಮಚಿತ್ತದಿಂದ ಕುಳಿತಿದ್ದ ಅವನು ಪೂರ್ಣಚಂದ್ರನಂತೆ ಬೆಳಗುತ್ತಿದ್ದ. ಜನಕನು ಅವನಿಗೆ ನಮಸ್ಕರಿಸಿ ''ಸ್ವಾಮಿ, ತಮಗೆ ಜಗತ್ತಿನಲ್ಲಿ ಆಗಬೇಕಾದ ಕೆಲಸವೇನು ಉಳಿದಿರದು (ನಿಃಶೇಷಿತಜಗತ್ಕಾರ್ಯಃ); ಎಲ್ಲ ಬಯಕೆಗಳೂ ಆಗಲೆ ತೀರಿವೆ (ಪ್ರಾಪ್ತಾಖಿಲಮನೋರಥಃ). ಹೀಗಿದ್ದರೂ ಏನನ್ನು ಬಯಸಿ ತಾವು ಇಷ್ಟು ದೂರ ಬರೋಣವಾಯಿತು ?'' ಎಂದು ಕೇಳಿದ.

ಶುಕನು ತನ್ನ ತಂದೆಯನ್ನು ಕೇಳಿದ ಪ್ರಶ್ನೆಯನ್ನೆ ಜನಕನ ಮುಂದಿರಿಸಿದ –

**'ಸಂಸಾರಾಡಂಬರಮಿದಂ ಕಥಮಭ್ಯುದಿತಂ ಗುರೋ ।**
**ಕಥಂ ಪ್ರಶಮಮಾಯಾತಿ ಯಥಾವತ್ ಕಥಯಾಶು ಮೇ ॥** (೨.೩೦)

ಜನಕನು ಈ ಪ್ರಶ್ನೆಗೆ ಕೊಟ್ಟ ಉತ್ತರವನ್ನೆಲ್ಲ ಕೇಳಿದ ಮೇಲೆ ಶುಕನು ''ಇದೆಲ್ಲವನ್ನೂ ನನ್ನ ತಂದೆಯೇ ನನಗೆ ತಿಳಿಸಿದ್ದ. ಮತ್ತೆ ಇದೆಲ್ಲವೂ ಶಾಸ್ತ್ರದಲ್ಲಿಯೂ ಇದೆ. ಸಂಸಾರವೆಲ್ಲ ಮನಸ್ಸಿನ ಕಲ್ಪನೆಗಳಿಂದ ಆದುದು. ಆ ಕಲ್ಪನೆಗಳು ತೊಲಗಿಹೋದರೆ ಸಂಸಾರದಲ್ಲಿ ಸಾರವಿರದೆಂಬ ನಿಶ್ಚಯಬುದ್ಧಿ ಬರುತ್ತದೆ. ಆಗ ಸಂಸಾರ ಸುಟ್ಟು ಅಳಿಯುತ್ತದೆ.

**‘ಮನೋವಿಕಲ್ಪಸಂಜಾತಂ ತದ್ವಿಕಲ್ಪಪರಿಕ್ಷಯಾತ್ ।**
**ಕ್ಷೀಯತೇ ದಗ್ಧಸಂಸಾರೋ ನಿಃಸಾರ ಇತಿ ನಿಶ್ಚಿತಃ ॥’** (೨.೩೪)

ಆದರೆ ಇದೇನು ಎಂಬುದು ನನಗೆ ತಿಳಿಯದೆ ಅಡ್ಡಾಡುತ್ತಿರುವೆನು. ದಯಮಾಡಿ ಇದನ್ನು ತಿಳಿಸಿಕೊಟ್ಟು ನನ್ನ ಮನಸ್ಸಿಗೆ ನೆಮ್ಮದಿಯನ್ನು ನೀಡು!'' ಎಂದು ಕೇಳಿಕೊಂಡ. ಆಗ ಜನಕನು ಅವನಿಗೆ ತತ್ತ್ವದರ್ಶನವನ್ನು ಮಾಡಿಸಲು ತೊಡಗುತ್ತಾನೆ. ಕಡೆಯಲ್ಲಿ ಹೇಳುತ್ತಾನೆ –

''ಅಯ್ಯಾ, ಅದನ್ನು ನೀನೇ ತಿಳಿದಿರುವೆ, ನಿನ್ನ ತಂದೆಯಿಂದಲೂ ಮತ್ತೆ ಅದನ್ನೇ ಕೇಳಿರುವೆ. ಆದರೂ ನಿನ್ನ ಸಂಕಲ್ಪದಿಂದಲೇ ತಿಳಿಯದವನಂತೆ ತೋರಿಕೊಳ್ಳುವೆ! ಇದೇ ಬಂಧನವೆನ್ನುವುದು. ಆ ಸಂಕಲ್ಪವನ್ನು ಕೈಬಿಟ್ಟವನು ಮುಕ್ತನೇ!''

**‘ಸ್ವಯಮೇವ ತ್ವಯಾ ಜ್ಞಾತಂ ಗುರುತಶ್ಚ ಪುನಃ ಶ್ರುತಂ ।**
**ಸ್ವಸಂಕಲ್ಪವಶಾದ್ ಬದ್ಧೋ ನಿಃಸಂಕಲ್ಪಾದ್ವಿಮುಚ್ಯತೇ ॥’** (೨.೭೦)

ಹೊರಗೆ ತೋರಿಕೊಳ್ಳುವ ಪ್ರಪಂಚವಿದೆಯಲ್ಲಾ, ಅದು ದೃಶ್ಯ. ಎಂದರೆ ಎದುರಿಗೆ ಕಾಣಿಸುವಂಥದ್ದು. ಇಂದ್ರಿಯಾನುಭವಕ್ಕೆ ಗೋಚರ ವಾಗುವಂಥದು, ಮನಸ್ಸನ್ನು ಮುಟ್ಟುವಂಥದು. ಇದರಲ್ಲಿ ನಿನಗೆ ರುಚಿಯಿರದು. ದೃಶ್ಯ ಪ್ರಪಂಚದ ಭೋಗಗಳನ್ನು ನೀನು ಬಯಸುತ್ತಿಲ್ಲ. ನೀನು ಮಹಾತ್ಮ, ತಿಳಿಯಬೇಕಾದುದನ್ನು ತಿಳಿದುಕೊಂಡಿರುವೆ. ಪಡೆದುಕೊಳ್ಳಬೇಕಾದುದನ್ನು ಪಡೆದುಕೊಂಡಿರುವೆ. ನೀನು ದಿಟವಾಗಿ ಮುಕ್ತನೇ. ಭ್ರಾಂತಿಯನ್ನು ಬಿಡು. ತುಂಬ ಹೊರಗಿನದನ್ನೂ ಒಳಗಿನದನ್ನೂ ಇನ್ನೂ ಒಳಗಿರುವುದನ್ನೂ ನೋಡು. ನೀನು ಸ್ವರೂಪದಲ್ಲಿ ಸಾಕ್ಷಿಯೆ, ಸಂಪೂರ್ಣನಾದವನು, ಕೇವಲನಾದವನು (ಎಂದರೆ ಒಂದೇ ತತ್ತ್ವ, ಎರಡಿಲ್ಲದ್ದು)''.

ಜನಕನ ಈ ಮಾತುಗಳನ್ನು ಕೇಳಿದ ಮೇಲೆ ಶುಕನಿಗೆ ನೆಮ್ಮದಿಯಾಯಿತು. ಮಾತನಾಡದೆ ತನ್ನೊಳಗಿರುವ ಪರತತ್ತ್ವದಲ್ಲಿ ವಿಶ್ರಾಂತಿಯನ್ನು ಪಡೆದುಕೊಂಡನು.

**'ವಿಶಶ್ರಾಮ ಶುಕಸ್ತೂಷ್ಣೀಂ ಸ್ವಸ್ಥೇ ಪರಮವಸ್ತುನಿ ।**
**ವೀತಶೋಕಭಯಾಯಾಸೋ ನಿರೀಹಶ್ಛಿನ್ನಸಂಶಯಃ ॥'** (೨.೭೪)

ಅವನಲ್ಲಿರುತ್ತಿದ್ದ ದುಗುಡ, ಭಯ, ಆಯಾಸಗಳು ದೂರವಾದುವು; ಬಯಕೆಗಳು ಮರೆಯಾದುವು; ಸಂದೇಹವೇನು ಉಳಿಯಲಿಲ್ಲ. ಅಖಂಡವಾದ ಸಮಾಧಿಯ ಸ್ಥಿತಿಯನ್ನು ಪಡೆಯಲೋಸುಗ (ಎಂದರೆ ಆತ್ಮಾಭ್ಯಾಸವನ್ನು ಕೈಗೊಳ್ಳಲು) ಶುಕನು ಮೇರು ಪರ್ವತದ ಶಿಖರವನ್ನೇರಿ ಬಹುಕಾಲ ಅಲ್ಲಿಯೇ ಜೀವಿಸಿದ್ದನು. ನಿರ್ವಿಕಲ್ಪ ಸಮಾಧಿಯ ಸುಖವನ್ನನುಭವಿಸಿದನು. ಎಣ್ಣೆಯಿಲ್ಲದೆ ಉರಿಯುವ ದೀಪದಂತೆ (ಅಸ್ನೇಹ ದೀಪವತ್) ಅವನ ಸ್ಥಿತಿಯಾಯಿತು.

ಶುಕನ ಮನಸ್ಸು ವಿಕಲ್ಪ-ಸಂಕಲ್ಪಗಳನ್ನು ಮಾಡಿಕೊಳ್ಳದೆ, ಶುದ್ಧವಾಗಿದ್ದುಕೊಂಡಿತು. ವೃತ್ತಿಗಳಿಲ್ಲದೆ ತಿಳಿಯಾಗಿದ್ದಿತು. ಅವನ ಸ್ವಭಾವದಲ್ಲಿದ್ದ ಕೊಳೆಗಳೆಲ್ಲ ಕಳಚಿ ಬಿದ್ದುವು. ಇದೊಂದು ಪವಿತ್ರವಾದ ಸ್ಥಿತಿಯಲ್ಲಿ ಅವನಿದ್ದನು. ಸಮುದ್ರದಲ್ಲಿ ನೀರಿನ ಕಣ ಇರುವಂತೆ ಇದ್ದನು. ಮನಸ್ಸಿನ ವಾಸನೆಗಳೆಲ್ಲವನ್ನು ಸಡಿಲಿಸಿಕೊಂಡು, ಕಳೆದುಕೊಂಡು, ಏಕಮೇವ ಸತ್ಯವಾಗಿ ವಿಹರಿಸುತ್ತಿದ್ದನು.

**'ವ್ಯಪಗತಕಲನಾಕಲಂಕಶುದ್ಧಃ**
**ಸ್ವಯಮಮಲಾತ್ಮನಿ ಪಾವನೇ ಪದೇಽಸೌ ।**
**ಸಲಿಲಕಣ ಇವಾಂಬುಧೌ ಮಹಾತ್ಮಾ**
**ವಿಗಲಿತ ವಾಸನಮೇಕತಾಂ ಜಗಾಮ ॥'** (೨, ೭೭)

ಇಲ್ಲಿ ಶುಕನನ್ನು ಮಹಾತ್ಮನೆಂದು ಬಣ್ಣಿಸಿದ್ದಾರೆ. ಆತ್ಮ ಮಹತ್ತಾಗುವುದು ಜೀವಭಾವವನ್ನು ಬಿಟ್ಟು, ಪ್ರಪಂಚಭಾವವನ್ನೂ ಬದಿಗಿರಿಸಿ, ಎಲ್ಲಕ್ಕೂ ಆಧಾರವಾದ ಆತ್ಮತತ್ತ್ವವೊಂದೇ ತಾನಾಗುವ ಅನುಭವವನ್ನು ಪಡೆದುಕೊಂಡಾಗ. ಆತ್ಮಕ್ಕೆ ಯಾವ ಮುಚ್ಚುಮರೆಯಿರದೆ, ಅಡೆತಡೆಗಳಿರದೆ ಸರ್ವವ್ಯಾಪಕವಾಗಿ ಏಕತತ್ತ್ವವೆಂಬುದು ನಿಶ್ಚಯವಾದರೆ ಅದು ದೊಡ್ಡದಾದಂತೆ. ದಿಟವಾಗಿ ಅದೇ ಅದರ ಸ್ವರೂಪ. ಅದನ್ನೇನು ಯಾರೂ ಹೊಸದಾಗಿ ಪಡೆದುಕೊಳ್ಳಬೇಕಾಗಿಲ್ಲ. ಆದರೆ ಇರುವುದನ್ನೆ ಅನುಭವಕ್ಕೆ ತಂದುಕೊಳ್ಳುವುದು ಮಾಹಾತ್ಮ್ಯ.

ಅದು ನಿರಾಕಾರವಾದುದು, ಆದರೆ ಶೂನ್ಯವೆನ್ನಲಾಗದು. ಅದು ದೃಶ್ಯವೇನಲ್ಲ, ಎಂದರೆ ಎದುರಿಗೆ ಇರುವಂತೆ ಕಾಣಲಾಗದುದು. ಅಥವಾ ದರ್ಶನಶಕ್ತಿಯೂ ಅಲ್ಲ. ಅದನ್ನು ಹೀಗೆಂದು ನಿರ್ದೇಶಿಸುವುದಾಗದು. ಅದು ಪರಿಪೂರ್ಣವಾದುದು. ಇದೆ ಎನ್ನುವಂತಿಲ್ಲ, ಇಲ್ಲ ಎನ್ನುವಂತೆಯೂ ಇಲ್ಲ; ಇದೆ-ಇಲ್ಲ ಎಂದೂ ಹೇಳುವಂತಿಲ್ಲ (ನ ಸನ್ನಾಸನ್ನ ಸದಸತ್). ಅದು ಬೆಳಕೂ ಅಲ್ಲ, ಕತ್ತಲೆಯೂ ಅಲ್ಲ (ನ ತೇಜೋನ ತಮಸ್ತತಂ). ಅದನ್ನು ಬಣ್ಣಿಸುವುದಾಗದು (ಅನಾಖ್ಯಂ), ಅದು ತೋರಿಕೊಳ್ಳುವುದೂ ಅಲ್ಲ (ಅನಭಿವ್ಯಕ್ತಂ). ಎಲ್ಲವೂ ಹೋದರೂ ಉಳಿಯುವುದು ಅದೊಂದೇ ಸತ್; ವಿಶೇಷಣಗಳೂ ಇಲ್ಲದ್ದು, ಯಾವ ವೃತ್ತಿಗಳೂ ಇಲ್ಲದ್ದು. ಅನಂತ, ಅಜರ, ಅನಾದಿ, ನಿರಾಮಯ, ಶಿವ.

ಹೀಗೆ ಎರಡನೆಯ ಅಧ್ಯಾಯದಲ್ಲಿ ಶುಕನ ಅವಧೂತ ಸ್ಥಿತಿಯ ವರ್ಣನೆಯೇ ಮುಖ್ಯವಾಗಿ ಬರುತ್ತದೆ. ಇದರಲ್ಲಿ ಆಯ್ದುಕೊಂಡ ಭಾಗವನ್ನು ಮುಂದೆ ಕಾಣಿಸಿದೆ. ಮೂರನೆಯ ಅಧ್ಯಾಯದಿಂದ ನಿದಾಘ ಮತ್ತು ಋಭು ಇವರ ಸಂವಾದ ಆರಂಭವಾಗಿ ಕಡೆಯ ಅಧ್ಯಾಯದವರೆಗೂ ಸಾಗುತ್ತದೆ. ಋಭುವೇ ಗುರು; ಜ್ಞಾನಿಯಾದರೂ

ಕ್ಲೇಶಕ್ಕೀಡಾಗಿದ್ದ ನಿದಾಘ ಅವನ ಶಿಷ್ಯ. ಋಭುವಿನ ಉಪದೇಶದಲ್ಲಿ ಅವಧೂತ ಸ್ಥಿತಿಯನ್ನು ಪಡೆದುಕೊಳ್ಳುವ ದಾರಿಯನ್ನು ಕಾಣಿಸಲಾಗಿದೆ. ಈ ಅಧ್ಯಾಯಗಳಿಂದಲೂ ಪ್ರಸಕ್ತವಾಗುವಂಥ ಶ್ಲೋಕಗಳನ್ನು ಇಲ್ಲಿ ಆಯ್ದುಕೊಳ್ಳಲಾಗಿದೆ. ಶ್ಲೋಕಗಳಿಗೆ ಭಾವಾನುವಾದ, ವಿವರಣೆಗಳನ್ನಳ ವಡಿಸಿದ್ದೇನೆ. ಇವು ಅವಧೂತರ ಆಂತರಿಕ ಸ್ಥಿತಿಯನ್ನು ಅರಿತುಕೊಳ್ಳಲು ನೆರವಾಗುವ ಸಾಧ್ಯತೆಯಿದೆ.

## (ಅ)

ಮೊದಲಲ್ಲಿ, ಎರಡನೆಯ ಅಧ್ಯಾಯದಿಂದ ಆಯ್ದುಕೊಂಡ ಶ್ಲೋಕಗಳು. ರಾಜನಾದ ಜನಕನು ಅವಧೂತನಾದ ಶುಕನಿಗೆ ಹೇಳಿದ ಮಾತುಗಳು (೪೧ ರಿಂದ ೬೨ ರವರೆಗೆ ಶ್ಲೋಕಗಳು). ಇಲ್ಲಿ ಅವಧೂತನನ್ನು ಜೀವನ್ಮುಕ್ತನೆಂದು ವ್ಯವಹರಿಸಲಾಗಿದೆ. ಮುಕ್ತಿಯಲ್ಲಿ ಎರಡು ಬಗೆಗಳು. ಒಂದು ಜ್ಞಾನದ ಫಲವಾಗಿ ಕರ್ಮಗಳೆಲ್ಲ ಅಳಿದು, ಹೃದಯದ ಗ್ರಂಥಿಗಳೆಲ್ಲ ಕಳಚಿಬಿದ್ದು, ಬದುಕಿರುವಾಗಲೇ ಆತ್ಮಾನಂದ ವನ್ನನುಭವಿಸುವ ಜೀವನ್ಮುಕ್ತಿ; ಜೀವನ್ಮುಕ್ತನು ವ್ಯವಹಾರದಲ್ಲೇ ಇದ್ದರೂ ಮುಕ್ತನೇ. ಇದೇ ಮುಖ್ಯವಾಗಿ ಮುಕ್ತಿ. ಇನ್ನೊಂದು, ಪ್ರಾರಬ್ಧ ಕರ್ಮದ ಅಭಿವ್ಯಕ್ತಿಯಾದ ದೇಹವು ಬಿದ್ದುಹೋದನಂತರ ಮತ್ತೆ ಸಂಸಾರದಲ್ಲಿ ಜನ್ಮವಿರದಂತೆ ಒದಗುವ ಮುಕ್ತಿ. ಇದನ್ನು ವಿದೇಹ ಮುಕ್ತಿಯೆನ್ನುತ್ತಾರೆ. ಅವಧೂತನದು ಜೀವನ್ಮುಕ್ತಿಯೆ.

**ಪದಾರ್ಥಭಾವನಾ ದಾರ್ಢ್ಯಂ ಬಂಧ ಇತ್ಯಭಿಧೀಯತೇ ।**
**ವಾಸನಾತಾನವಂ ಬ್ರಹ್ಮನ್ ಮೋಕ್ಷ ಇತ್ಯಭಿಧೀಯತೇ ॥** (೨, ೪೧)

ಬಂಧ-ಮೋಕ್ಷ (ಮುಕ್ತಿ) ಎಂಬ ಮಾತುಗಳು ಪ್ರಸಿದ್ಧವಾಗಿವೆ ಯಷ್ಟೆ? ಸಂಸಾರವೆಂಬುದು ಬಂಧನ, ಕಟ್ಟುಪಾಡು; ಆದರಿಂದ ಕ್ಲೇಶ,

ದುಃಖ. ಈ ಬಂಧನದಿಂದ ಬಿಡುಗಡೆಹೊಂದುವುದು ಮೋಕ್ಷ; ಆನಂದದ ಸ್ಥಿತಿ. ಮೋಕ್ಷಕ್ಕಾಗಿ ಎಲ್ಲರೂ ಹಾತೊರೆಯುತ್ತಾರೆ. ಆದರೆ ದಿಟವಾಗಿ ಬಂಧ ಯಾವುದು ? ಮೋಕ್ಷ ಹೇಗೆ ? ಪ್ರಪಂಚದಲ್ಲಿರುವ ವಸ್ತುಗಳು ದಿಟವಾದುವು, ಗಟ್ಟಿಯಾದುವು; ಅವುಗಳನ್ನು ನಾವು ಪಡೆದುಕೊಳ್ಳಬೇಕು, ನಮ್ಮ ಪ್ರಯೋಜನಕ್ಕಾಗಿಯೇ ಅವು ಇರುವುದು; ಅವುಗಳಿಂದ ನಮ್ಮ ದೇಹ, ಇಂದ್ರಿಯಗಳು, ಮನಸ್ಸು ನೆಮ್ಮದಿ ಯಿಂದಿರುತ್ತವೆ. ಈ ರೀತಿಯ ಭಾವನೆಯು ನಮ್ಮಲ್ಲಿ ಬೇರೂರಿಕೊಂಡರೆ ಅದೇ ಬಂಧವೆನಿಸಿಕೊಳ್ಳುತ್ತದೆ. ಇದನ್ನೇ ಪ್ರಪಂಚಭಾವವೆಂದೂ ಕರೆಯುತ್ತಾರೆ.

ಈ ಭಾವನೆಯು ಮತ್ತೆ ಮತ್ತೆ ತೋರಿಕೊಂಡು, ಅಭ್ಯಾಸ ಬಲದಿಂದ ಮನಸ್ಸಿನ ಮೇಲೆ ದಟ್ಟವಾಗಿ ಮುದ್ರೆಯೊತ್ತುತ್ತದೆ. ಅವಕಾಶ ವಿದ್ದಾಗಲೆಲ್ಲ ತಲೆಯೆತ್ತಿಕೊಂಡು ನಿಲ್ಲುತ್ತದೆ. ಹೀಗೆ ಮನಸ್ಸಿಗೆ ಅದು ಸಂಸ್ಕಾರವೊಂದನ್ನು ಒದಗಿಸಿದಾಗ 'ವಾಸನೆ' ಯಾಗುತ್ತದೆ. ಮನಸ್ಸಿನ ಬಣ್ಣ ಬದಲಾಗುತ್ತದೆ. ಮನಸ್ಸಿನಲ್ಲೆ ಅದು ಮನೆಮಾಡಿಕೊಂಡಿರುತ್ತದೆ. ಮನಸ್ಸು ಬಹಿರ್ಮುಖವಾಗಿ ಪ್ರವೃತ್ತವಾಗುತ್ತದೆ, ವಿಷಯಗಳಲ್ಲಿ ಆಸಕ್ತಿಯನ್ನು ತಳೆಯುತ್ತದೆ. ಇಂಥ ಗಟ್ಟಿಯಾದ ವಾಸನೆಯನ್ನು ಯಾವುದಾದರೊಂದು ಉಪಾಯದಿಂದ, ಸಾಧನೆಯಿಂದ, ಸಡಿಲಿಸು ವುದು, ಕರಗಿಸುವುದು, ತೆಳ್ಳಗೆಮಾಡುವುದು, ಕ್ರಮೇಣ ತೊಲಗಿಸಿ ಬಿಡುವುದು ಮೋಕ್ಷ.

ಬಂಧವೆಂದರೆ ಕಟ್ಟು, ಮೋಕ್ಷವೆಂದರೆ ಅದರಿಂದ ಬಿಡುಗಡೆ. ಎರಡೂ ನಮ್ಮ ಒಳಗಿಂದಲೇ ನಮ್ಮ ಭಾವನೆಗಳಿಂದಲೇ ಒದಗಿ ಬರುವುವು; ಹೊರಗಿನಿಂದ ಎರಗಿಬರುವಂಥವಲ್ಲ. ಪದಾರ್ಥಗಳು ನಮ್ಮನ್ನು ಬಂಧಿಸುವುದಿಲ್ಲ; ನಾವು ಅವನ್ನು ಕಂಡುಕೊಳ್ಳುವ ರೀತಿ

(ಭಾವನೆ) ನಮ್ಮನ್ನು ಬಂಧಿಸುತ್ತದೆ. ಪದಾರ್ಥಗಳಿಗೆ ತಮ್ಮಲ್ಲೇ ಆಕರ್ಷಣೆಯೆಂಬುದಿರದು; ಪದಾರ್ಥಗಳನ್ನು ಕುರಿತು ನಮ್ಮ ಅನಿಸಿಕೆಗಳಿಗೆ ಆಕರ್ಷಣೆಯ ಗುಣವಿರುವುದು. ಹಾಗೆಯೇ, ಹೊರಗಿನ ಯಾವ ಸಾಧನೆಗಳಿಂದಲೂ (ತಪಸ್ಸು, ಸತ್ಸಂಗ, ಸದಾಚಾರ, ಕರ್ಮ, ಧರ್ಮ, ದಾನ, ಪೂಜೆ, ತೀರ್ಥಯಾತ್ರೆ) ಮೋಕ್ಷ ಒದಗಿಬರದು. ಒಳಗಿನ ಭಾವನೆಗಳನ್ನು ಕೈ ಬಿಟ್ಟರೆ, ವಾಸನೆಗಳೆಲ್ಲ ಒಂದೂ ಬಿಡದೆ ಮರೆಯಾಗಿ ಮನಸ್ಸು ಮೊದಲಿನಂತೆ ತಿಳಿಯಾಗಿಬಿಟ್ಟರೆ ಆಯಿತು, ಮೋಕ್ಷವೇ (ಅಶೇಷೇಣ ಪರಿತ್ಯಾಗೋ ವಾಸನಾಯಾಂ ಯ ಉತ್ತಮಃ!)

**ಆಪತತ್ಸು ಯಥಾಕಾಲಂ ಸುಖದುಃಖೇಷ್ವನಾರತಃ ।**
**ನ ಹೃಷ್ಯತಿ ಗ್ಲಾಯತಿ ಯಃ ಸ ಜೀವನ್ಮುಕ್ತ ಉಚ್ಯತೇ ॥** (೨, ೪೩)

ಸಂಸಾರದಲ್ಲಿರುವವರಿಗೆ ಕಾಲಕಾಲಕ್ಕೆ ಸುಖ-ದುಃಖಗಳು ಎಡೆಬಿಡದಂತೆ ಎರಗಿಬೀಳುತ್ತಲೆ ಇರುತ್ತವೆ. ಸುಖ ಅನುಕೂಲ ವಾದುದು; ದೇಹಕ್ಕೋ ಇಂದ್ರಿಯಗಳಿಗೋ ಮನಸ್ಸಿಗೋ ಅನುಕೂಲವಾದುದು ಒದಗಿಬಂದರೆ ಸಂತೋಷದ ಅನುಭವ. ದೇಹೇಂದ್ರಿಯಾದಿಗಳಿಗೆ ಪ್ರತಿಕೂಲವಾಗಿ ಬಂದರೆ ದುಃಖ. ಸುಖ ಬಂದಾಗ ಮನಸ್ಸಿಗೆ ಗೆಲುವು, ಅದು ಇನ್ನೂ ಇರಬೇಕೆಂಬ ಬಯಕೆ. ದುಃಖ ಬಂದಾಗ ಮನಸ್ಸಿಗೆ ದುಗುಡ, ಭಯ, ಆತಂಕ. ದುಃಖಕ್ಕೆ ಕಾರಣವಾದುದು ಸದ್ಯ ಮರೆಯಾದರೆ ಸಾಕೆಂಬ ಕಾತರ.

ಸುಖವಾಗಲಿ ದುಃಖವಾಗಲಿ ನಮ್ಮನ್ನು ಕೇಳಿ ಬರುವುದಿಲ್ಲ. ನಮ್ಮನ್ನು ಕೇಳಿದರೆ ಯಾವಾಗಲೂ ಸುಖವೇ ಇರಲಿ, ದುಃಖ ಒಂದಿಷ್ಟೂ ಎಂದಿಗೂ ಬೇಡ ಎನ್ನುವೆವು! ಆದರೆ ಕಾಲಕಾಲದಲ್ಲಿ ನಮಗೆ ಬೇಡವಾದರೂ ದುಃಖ ನಮ್ಮ ಮೇಲೆ ಎರಗಿ ಬೀಳುತ್ತದೆ. ನಾವು ಬಯಸದಿದ್ದಾಗಲೂ ಸುಖ ಬಂದೊದಗುತ್ತದೆ. ಅವಧೂತನಿಗೂ

ಸುಖ-ದುಃಖಗಳು ಬಂದೇ ಬರುತ್ತವೆ. ಅವನೂ ಮನುಷ್ಯ ತಾನೆ ? ಆದರೆ ಅವಧೂತನಾದವನು ಸುಖ ಬಂದಿತೆಂದು ಹಿಗ್ಗುವುದಿಲ್ಲ, ದುಃಖ ಬಂದಿತೆಂದು ಕುಗ್ಗುವುದಿಲ್ಲ.

ಪ್ರಪಂಚದಲ್ಲಿರುವವರಿಗೆ ಸುಖ-ದುಃಖಗಳ ಅನುಭವ. ಪ್ರಪಂಚಭಾವವನ್ನು ಕೈಬಿಟ್ಟು ಆತ್ಮದಲ್ಲೆ ನೆಲೆನಿಂತ ಅವಧೂತನಿಗೆ ಈ ಅನುಭವವಿರದು. ಸುಖ-ದುಃಖಗಳ ಅನುಭವವಿರುವುದು ದೇಹ, ಇಂದ್ರಿಯ, ಮನಸ್ಸು, ನಾನೆಂಬ ಕಲ್ಪನೆ ಇವನ್ನು ಉಪಾಧಿಯಾಗಿ ತಳೆದ ಜೀವಕ್ಕೆ. ಆತ್ಮನಿಗೇನು ಸುಖವೂ ಇಲ್ಲ, ದುಃಖವೂ ಇಲ್ಲ. ಅವಧೂತನಿಗೆ ಜೀವಭಾವವಿರದು; ಆತ್ಮದಲ್ಲೆ ನೆಲಸಿ ಆತ್ಮವೇ ಆಗಿರುವವನು.

ಆತ್ಮದ ಸ್ವರೂಪ ಆನಂದ. ಈ ಆನಂದವು ನಿರತಿಶಯವಾದುದು, ಅನಾದಿ, ಅನಂತ, ಅಪಾರ. ಇದು ನಮ್ಮ ವ್ಯವಹಾರದಲ್ಲಿರುವ ಸುಖವಲ್ಲ. ಸುಖವೆಂದರೆ ದುಃಖವೂ ಇರುವ ದ್ವಂದ್ವ; ಸುಖವಿರದೆ ದುಃಖವಿಲ್ಲ; ದುಃಖವಿರದೆ ಸುಖವಿಲ್ಲ. ಮೇಲಾಗಿ, ಸುಖವಾಗಲಿ, ದುಃಖವಾಗಲಿ ಸಹಜವಾದುದಲ್ಲ. ಅವು ಆಗಂತುಕವಾದುವು. ಯಾವುದಾದರೊಂದು ಕಾರಣ, ಅಥವಾ ಆಸರೆಯಿದ್ದು ಒದಗಿ ಬರುವಂಥವು. ಕಾರಣ ಅಥವಾ ಆಸರೆ ಮುಗಿದೊಡನೆ ಅವೂ ಮರೆಯಾಗುವಂಥವು. ಸುಖವೂ, ಯಾವಾಗಲೂ ಇರಲಾರದು, ದುಃಖವೂ ಎಡೆಬಿಡದೆ ಇರಲಾರದು. ಸುಖದ ಅನಂತರ ದುಃಖ, ದುಃಖದ ನಂತರ ಸುಖ. ಮತ್ತೆ ದುಃಖದ ಸ್ಪರ್ಶವೇ ಇಲ್ಲದ ಸುಖವೆಂಬುದೂ ಇರುವುದಿಲ್ಲ. ಆನಂದವಾದರೆ ಹೀಗಲ್ಲ. ಆತ್ಮದ ಸಹಜಸ್ವರೂಪವೇ ಇದು. ಬಂದು, ಇದ್ದು ಹೋಗುವುದಿಲ್ಲ; ಇದ್ದೇ ಇರುವುದು. ಇದನ್ನು ಅರಿತವನಿಗೆ, ಅನುಭವಿಸುವವನಿಗೆ ಸುಖವೂ ಇಲ್ಲ, ದುಃಖವೂ ಇಲ್ಲ.

**ಈಪ್ಸಿತಾನೀಪ್ಸಿತೇ ನ ಸ್ತೋ ಯಸ್ಯಾಂತರ್ವರ್ತಿದೃಷ್ಟಿಷು ।**
**ಸುಷುಪ್ತಿವದ್ಯಶ್ಚರತಿ ಸ ಜೀವನ್ಮುಕ್ತ ಉಚ್ಯತೇ ॥** (೨, ೪೬)

ಅವಧೂತನಿಗೆ 'ಇದು ಬೇಕು' ಎಂಬ ಬಯಕೆಯಿರದು; 'ಇದು ಬೇಡ' ಎಂಬ ಅನಿಸಿಕೆಯು ಇರದು. ಬೇಕು-ಬೇಡಗಳ ಎಣಿಕೆ ಹೊರಗಣ ವಿಷಯಗಳಿಂದ ಸಿದ್ಧವಾಗುತ್ತದೆ. ನಮಗೆ ಅನುಕೂಲ ವಾದದ್ದು ಆಕರ್ಷಣೆ; ಪ್ರತಿಕೂಲವಾದರೆ ದ್ವೇಷ. ಬಯಕೆಯೆನ್ನುವುದು ರಾಗ, ಪ್ರತಿಕೂಲಬುದ್ಧಿಯೆಂದರೆ ದ್ವೇಷ. ರಾಗ-ದ್ವೇಷಗಳೆರಡೂ ಹೊರಗಣ ವಸ್ತುಗಳಲ್ಲಿರುವುದಿಲ್ಲ. ಮನಸ್ಸಿನ ಧರ್ಮಗಳು ಅವು. ಮನಸ್ಸು ಎನ್ನುವುದಿದ್ದು, ಇಂದ್ರಿಯಗಳಿಂದ ಗ್ರಹಿಸಿದ ವಸ್ತುವನ್ನು ಅನುಕೂಲ ಎಂದು ಅದು ಅಂದುಕೊಂಡಾಗಲೇ ರಾಗ; ಮನಸ್ಸು ಪ್ರತಿಕೂಲವೆಂದು ಅಂದುಕೊಂಡರೆ ದ್ವೇಷ. ಮನಸ್ಸು ಇಂದ್ರಿಯ ಗಳೊಂದಿಗೆ ಕೂಡಿಕೊಂಡು ಕೆಲಸ ಮಾಡಿದಾಗ ರಾಗ ಅಥವಾ ದ್ವೇಷ. ಮನಸ್ಸೇ ಇಲ್ಲದಿದ್ದಾಗ, ಎಂದರೆ ಹೊರಗಣ ವಸ್ತುಗಳತ್ತ ಹೊರಳದೆ ಇದ್ದಾಗ ರಾಗವೂ ಇಲ್ಲ, ದ್ವೇಷವೂ ಇಲ್ಲ.

ತನಿನಿದ್ರೆಯಲ್ಲಿ (ಸುಷುಪ್ತಿಯಲ್ಲಿ) ಮನಸ್ಸೇ ಇರುವುದಿಲ್ಲ, ಎಂದರೆ ಕೆಲಸ ಮಾಡುತ್ತಿರುವುದಿಲ್ಲ. ಇಂದ್ರಿಯಗಳು ವಿರಮಿಸಿ ಮನಸ್ಸೊಂದು ಕೆಲಸ ಮಾಡುತ್ತಿರುವಾಗ ಕನಸು ಕಾಣುವೆವು. ಇಂದ್ರಿಯಗಳೂ ಮನಸ್ಸೂ ಕೂಡಿಕೊಂಡೇ ಕೆಲಸಮಾಡುತ್ತಿರುವಾಗ ಎಚ್ಚರ. ಮನಸ್ಸಿರದಿದ್ದಾಗ ಜೀವವೇ ಇಲ್ಲ ಎಂದೇನು ಅಲ್ಲವಲ್ಲ ? ನಿದ್ರೆಯಲ್ಲಿ ನಮಗೆ 'ನಾವು ನಿದ್ರೆ ಮಾಡುತ್ತೇವೆ' ಎಂಬ ಅನುಭವವೂ ಇಲ್ಲ; ಹೊರಗಣ ವಿಷಯಗಳ ಅನುಭವವಂತೂ ಇಲ್ಲವೇ ಇಲ್ಲ. ಸುಷುಪ್ತಿಯಲ್ಲಿ ನಾವು ನಮ್ಮೊಳಗೇ ಸರಿಯುತ್ತೇವೆ. ಹೊರಗಣ ಪ್ರಪಂಚದ ನಂಟು ಕಡಿದುಹೋಗುತ್ತದೆ. ತನಿನಿದ್ರೆಯಲ್ಲಿ ಮನಸ್ಸು

ಇದ್ದರೂ ಅದು ಆತ್ಮಾಕಾರವನ್ನೇ ತಳೆದುಬಿಡುತ್ತದೆ; ಆಗ ಬಹಿಃಪ್ರವೃತ್ತಿ, ವಿಷಯಾಸಕ್ತಿ ಎರಡೂ ಅದಕ್ಕಿರುವುದಿಲ್ಲ.

ಉಪನಿಷತ್ತು ಸುಷುಪ್ತಿಯನ್ನು 'ಸ್ವಂ ಅಪೀತೋ ಭವತಿ', ಎಂದರೆ ತನ್ನಲ್ಲಿ ಸೇರಿಕೊಂಡುಬಿಡುವ ಸ್ಥಿತಿ, ಎಂದು ಬಣ್ಣಿಸುತ್ತದೆ. ಅವಧೂತನು ಎಚ್ಚರವಾಗಿದ್ದರೂ ಪ್ರಪಂಚದಲ್ಲಿರುವುದಿಲ್ಲ; ತನ್ನ ಆತ್ಮದಲ್ಲೇ ಇರುತ್ತಾನೆ. ನಾವೆಲ್ಲ ಸುಷುಪ್ತಿಯಲ್ಲಿರುವಂತೆಯೇ ಅವನು ಜಾಗ್ರದವಸ್ಥೆಯಲ್ಲೂ ಇರುತ್ತಾನೆ.

**ಆಧ್ಯಾತ್ಮರತಿರಾಸೀನಃ ಪೂರ್ಣಃ ಪಾವನಮಾನಸಃ ।**
**ಪ್ರಾಪ್ತಾನುತ್ತಮವಿಶ್ರಾಂತಿರ್ನ ಕಿಂಚಿದಿಹ ವಾಂಛತಿ ।**
**ಯೋ ಜೀವತಿ ಗತಸ್ನೇಹಃ ಸ ಜೀವನ್ಮುಕ್ತ ಉಚ್ಯತೇ ॥** (೨, ೪೭)

ಅವಧೂತನಿಗೆ ಆತ್ಮದ ಕಡೆಯೇ ಆಸಕ್ತಿ; ಆತ್ಮದಲ್ಲೆ ಅವನು ನಿಂತವನು. ತನ್ನೆಲ್ಲ ಬದುಕು ಆತ್ಮದಿಂದಲೇ ತುಂಬಿರುವುದರಿಂದ ಅವನು ಪೂರ್ಣ. ಅವನಿಗೆ ಯಾವ ಕೊರೆಯೂ ಇರದು. ನಮಗೆ ಏನಾದರೂ ಬಯಕೆಯಿದ್ದರೆ ನಾವು ಅಪೂರ್ಣರೆಂದೇ ಅರ್ಥ. ಪೂರ್ಣರಾಗಲು ಬಯಕೆಯನ್ನು ತೀರಿಸಿಕೊಳ್ಳಬೇಕು. ಅದು ತೀರಿದರೆ ಇನ್ನೊಂದು ಬಯಕೆ ಮೇಲೆದ್ದುಕೊಳ್ಳುತ್ತದೆ, ಮತ್ತೆ ಅಪೂರ್ಣತೆಯೇ. ಅವಧೂತನಿಗಾದರೋ ಯಾವ ಬಯಕೆಯೂ ಇರದು; ಎಂದ ಮೇಲೆ ಅವನು ಪೂರ್ಣನೇ. ಅವನ ಮನಸ್ಸು ಶುದ್ಧವಾಗಿರುತ್ತದೆ. ಬಯಕೆ-ಬಿಂಕಗಳಿದ್ದರೆ, ಭಯ-ಉದ್ವೇಗಗಳಿದ್ದರೆ, ರಾಗ-ದ್ವೇಷಗಳಿದ್ದರೆ ಮನಸ್ಸು ರಾಡಿಯಾಗುತ್ತದೆ, ಕೊಚ್ಚೆಯಾಗುತ್ತದೆ, ಕೊಳೆಯಾಗುತ್ತದೆ. ಅವಧೂತನ ಮನಸ್ಸು ಹೀಗಲ್ಲ. ಎಂದಿಗೂ ಅದು ತನ್ನಷ್ಟಕ್ಕೆ ತಾನಿದ್ದುಕೊಂಡು ತಿಳಿಯಾಗಿರುತ್ತದೆ. ಹೊರಗಣ ವಿಷಯಗಳು ತನ್ನನ್ನು ಕಲಕಲು, ಕಲುಷಿತಗೊಳಿಸಲು ಬಿಡುವುದಿಲ್ಲ.

ಲೋಕವ್ಯವಹಾರದಲ್ಲಿ ಜೀವಕ್ಕೆ ವಿಶ್ರಾಂತಿಯೆಂಬುದಿಲ್ಲ. ಬಯಕೆಗಳು, ಅವುಗಳನ್ನು ಪೂರೈಸಿಕೊಳ್ಳುವ ಕಾತರ, ಭಯ, ಅದನ್ನು ತೊಲಗಿಸಿಕೊಳ್ಳುವ ಹವಣಿಕೆ, ಇವು ಇದ್ದೇ ಇರುತ್ತವೆ; ನಮ್ಮನ್ನು ಯಾವುದಾದರೊಂದು ಕೆಲಸದಲ್ಲಿ ತೊಡಗಿಸಿಯೆ ಇರುತ್ತವೆ. ಅವಧೂತನಿಗಾದರೆ ಇಂಥ ಬಯಕೆಯೂ ಇರದು. ಉದ್ಯಮವೂ ಇರದು, ಆಯಾಸವೂ ಇರದು. ತನ್ನ ಪಾಡಿಗೆ ತಾನಿರುತ್ತಾನೆ, ತನ್ನಲ್ಲಿ ತಾನು ತೆಪ್ಪಗೆ ಇರುತ್ತಾನೆ. ಇದು ವಿಶ್ರಾಂತಿ; ಅದಕ್ಕಿಂತ ಮಿಗಿಲಾದ ವಿಶ್ರಾಂತಿ ನಮ್ಮ ಊಹೆಗೆ ಸಿಗುವುದಲ್ಲ.

ವಿಷಯಗಳೊಂದಿಗೆ ನಮಗೆ ಎಂದೂ ನಂಟೇ. ವಿಷಯಗಳನ್ನು ಅನುಭವಿಸುವಾಗ ಮನಸ್ಸಿಗೆ ಅವು ಅಂಟಿಕೊಳ್ಳುತ್ತವೆ. ಈ ಅಂಟನ್ನು, ಜಿಡ್ಡನ್ನು ಸ್ನೇಹವೆನ್ನುವರು. ನಮ್ಮ ಮನಸ್ಸಿನಲ್ಲಿ ಈ ಬಗೆಯ ಅಂಟು ಊರಿಕೊಂಡಿರುತ್ತದೆ, ಹರಡಿಕೊಂಡಿರುತ್ತದೆ. ಅವಧೂತನಾದರೋ ವಿಷಯಗಳು ತನ್ನ ಮನಸ್ಸಿಗೆ ಅಂಟಿಕೊಳ್ಳಲು ಬಿಡುವುದಿಲ್ಲ. ವಿಷಯಗಳಿಂದ ತಾನು ದೂರವಾಗಿಯೆ ಇರುತ್ತಾನೆ. ಮನಸ್ಸನ್ನು ಆತ್ಮದಲ್ಲೇ ನೆಲೆಗೊಳಿಸಿರುತ್ತಾನೆ.

**ಅಹಂಕಾರಮಯೀಂ ತ್ಯಕ್ತ್ವಾ ವಾಸನಾಂ ಲೀಲಯೈವ ಯಃ ।**
**ತಿಷ್ಠತಿ ಧ್ಯೇಯಸಂತ್ಯಾಗೀ ಸ ಜೀವನ್ಮುಕ್ತ ಉಚ್ಯತೇ ॥** (೨, ೪೫)

ಮನಸ್ಸಿನಲ್ಲಿರುವ ಅಂಟುಗಳನ್ನು ವಾಸನೆಗಳೆಂದು ಕರೆಯುತ್ತಾರೆ. ವಾಸನೆಯೆಂದರೆ ಬಟ್ಟೆಗೆ ಹಾಕುವ ಬಣ್ಣದಂತೆ ಗಟ್ಟಿಯಾಗಿ ಕೂತುಬಿಡುವುದು. ಮನಸ್ಸಿನ ವೃತ್ತಿಗಳಾದ ರಾಗ-ದ್ವೇಷ, ಭಯ-ಕ್ರೋಧ, ಉದ್ವೇಗ-ನಿರ್ವೇದಗಳು - ಇವು ಎದ್ದೊಡನೆಯೆ ಮನಸ್ಸಿನಲ್ಲಿ ವಿಕಾರವನ್ನೊದಗಿಸುತ್ತವೆ. ನೀರಿನಲ್ಲಿ ಕೊಳೆ ಬಿದ್ದು ಕಲಕಿದಂತೆ. ಕೊಳೆ ಕಣ್ಣಿಗೆ ಕಾಣಿಸದಿದ್ದರೂ ನೀರಲ್ಲೆಲ್ಲ ಹರಡಿ ನೀರನ್ನು ತುಂಬಿ

ಕೊಂಡಿರುತ್ತದೆ. ನೀರಿನ ಬಣ್ಣ, ಗುಣಗಳನ್ನು ಮಾರ್ಪಡಿಸಿಬಿಡುತ್ತದೆ. ಹೀಗೆಯೇ ನಮ್ಮೆಲ್ಲ ಅನುಭವಗಳೂ ಮನಸ್ಸಿನ ವಾಸನೆಗಳಾಗಿ ಉಳಿದುಕೊಳ್ಳುತ್ತವೆ.

ಮನಸ್ಸಿನ ಬೇಕು-ಬೇಡ, ಬಯಕೆ-ಬಿನ್ನಾಣ, ಬಿಂಕ-ಬೇಗುದಿ ಎಲ್ಲವೂ ನಿಂತಿರುವುದು ನಮ್ಮ ಅಹಂಕಾರದ ಮೇಲೇ. ಇಲ್ಲಿ ಅಹಂಕಾರವೆಂದರೆ ಜಂಬವಲ್ಲ, 'ನಾನು' ಎನ್ನುವ ಕಲ್ಪನೆ. 'ನಾನು', 'ನನ್ನದು', 'ನನಗೆ', 'ನನ್ನಿಂದ' ಮುಂತಾದ ಭಾವನೆಗಳಿಲ್ಲದೆ ನಮ್ಮ ವ್ಯವಹಾರವೇ ಇಲ್ಲವಲ್ಲ ? ನಾವು ಏನು ಮಾಡಿದರೂ, ಏನೂ ಬಿಟ್ಟರೂ ಅದರಡಿಯಲ್ಲಿ 'ನಾನು', ಎಂಬ ಅನಿಸಿಕೆ ಇದ್ದೇ ಇರುತ್ತದೆ. ಇದಿಲ್ಲದೆ ಬಯಕೆಯಾಗಲಿ, ಉದ್ಯಮವಾಗಲಿ ಇರುವುದಿಲ್ಲ. ಅದರಿಂದ ಬರುವ ಸುಖ-ದುಃಖಗಳೂ ಇರುವುದಿಲ್ಲ. ಮನಸ್ಸಿನ ಪ್ರವೃತ್ತಿಯೇ ಇರುವುದಿಲ್ಲ ಎಂದು ತಾತ್ಪರ್ಯ. ಮನಸ್ಸಿನಲ್ಲಿ ವಾಸನೆಗಳಿವೆ ಎಂದರೆ 'ನಾನು' ಎಂಬ ಕಲ್ಪನೆಗೆ ಹೊಂದಿಕೊಂಡೇ ಅವು ಇರುವುವು.

ಅವಧೂತನಿಗೆ 'ನಾನು' ಎಂಬ ಜೀವಭಾವ ಇಲ್ಲದಿರುವುದರಿಂದ ಅವನಲ್ಲಿ ವಾಸನೆಗಳೂ ಇರುವುದಿಲ್ಲ. ಆತ್ಮದಲ್ಲಿ ನೆಲೆನಿಂತವನಿಗೆ ಜೀವಭಾವದ ಹಂಗೇಕೆ ? ಪಾಲುಂಡವಗೆ ನೀರೇಕೆ ? ಜೀವಭಾವವನ್ನೆ ಕೈಬಿಟ್ಟವನಿಗೆ ವಾಸನೆಗಳನ್ನು ಝಾಡಿಸಿಕೊಳ್ಳುವುದು ಏನು ಕಷ್ಟ ? ಆಟದಂತೆಯೇ ಅದು ನಡೆದುಹೋಗುತ್ತದೆ. ಅವನಿಗೆ ಯಾವ ಶ್ರಮವೂ ಇರದು.

ಮನಸ್ಸು ಆಲೋಚನೆ ಮಾಡಿಕೊಳ್ಳುವುದೆಲ್ಲ ಧ್ಯಾನವೆನಿಸಿ ಕೊಳ್ಳುತ್ತದೆ ('ಧ್ಯೈ' ಎಂದರೆ ಚಿಂತಿಸುವುದು ಎಂಬ ಮೂಲಾರ್ಥ ದಿಂದ). ಯಾವುದನ್ನು ಕುರಿತು ಮನಸ್ಸು ಧ್ಯಾನಮಾಡುವುದೋ ಅದು ಧ್ಯೇಯ. ಹೊರಗಣ ವಿಷಯಗಳು, ಪ್ರಸಂಗಗಳು, ವಿವರಗಳು,

ಬಯಸುವ ವಸ್ತುಗಳು, ಬೇಡವೆನಿಸಿದ ಪದಾರ್ಥಗಳು ಇವೆಲ್ಲ ಧ್ಯೇಯಗಳೇ. ಮನಸ್ಸು ಇವುಗಳನ್ನು ಆಲೋಚನೆ ಮಾಡುತ್ತಿರುವಾಗ ಅವು ಮನಸ್ಸಿಗೆ ಅಂಟಿಕೊಳ್ಳುತ್ತವೆ. ಮನಸ್ಸಿನಲ್ಲೇ ಧ್ಯೇಯಗಳು ; ಹೊರಗಡೆ ಇಲ್ಲ. ನಾವು ಈ ಬಗೆಯ ಧ್ಯೇಯಗಳಿಗೇ (ಎಂದರೆ ಆಲೋಚನೆಯ ವಿಷಯಗಳಿಗೇ) ಅಂಟಿಕೊಂಡಿರುತ್ತೇವೆ. ಅವಧೂತನು ಇವನ್ನೆಲ್ಲ ಕೈಬಿಟ್ಟಿರುತ್ತಾನೆ. ಅವನ ಮನಸ್ಸಿಗೆ ಯಾವೊಂದು ವಿಷಯವೂ ಅಂಟಿಕೊಂಡಿರುವುದಿಲ್ಲ ; ಎಂದ ಮೇಲೆ ಅವನ ಮನಸ್ಸಿನಲ್ಲಿ ಧ್ಯಾನವೂ ಇರುವುದಿಲ್ಲ.

**ಸಂವೇದ್ಯೇನ ಹೃದಾಕಾಶೇ ಮನಾಗಪಿ ನ ಲಿಪ್ಯತೇ ।**
**ಯಸ್ಯಾಸಾವಜಡಾ ಸಂವಿತ್ ಸ ಜೀವನ್ಮುಕ್ತ ಉಚ್ಯತೇ ॥** (೨, ೪೮)

ಧ್ಯೇಯವೆಂದರೆ ವೇದ್ಯ. ಆಲೋಚನೆ ಮಾಡುವುದೆಂದರೆ ವಿಷಯವನ್ನು ತಿಳಿದುಕೊಳ್ಳುವುದು. ಚೆನ್ನಾಗಿ ತಿಳಿದುಕೊಂಡರೆ ಅದು ಸಂವೇದನೆ. ಸಂವೇದನೆಗೆ ಯಾವುದು ವಿಷಯವೋ, ಎಂದರೆ ಯಾವುದನ್ನು ನಾವು ತಿಳಿದುಕೊಳ್ಳುವೆವೋ, ಅದು ಸಂವೇದ್ಯ. ಹೊರಗಣ ವಿಷಯಗಳೆಲ್ಲ ಸಂವೇದ್ಯವೇ; ಇಂದ್ರಿಯಗಳಿಂದ, ಮನಸ್ಸಿನಿಂದ ತಿಳಿಯಲ್ಪಡತಕ್ಕವೇ. ಹೊರಗಣ ಜಗತ್ತು (ಪ್ರಪಂಚ) ನಮ್ಮ ಒಳಹೊಕ್ಕು, ನಮ್ಮ ಮನಸ್ಸಿನಲ್ಲಿ ಗಟ್ಟಿಯಾಗಿ ಕೂತು, ತಾನೇ ದಿಟವಾದುದು, ತನ್ನಿಂದಲೇ ಸುಖ ಎಂಬ ವಿಕಲ್ಪಗಳನ್ನುಂಟು ಮಾಡುವುದು.

ನಮ್ಮೊಳಗೆ ಇರುವ ಹೃದಯ ನಮ್ಮ ಬದುಕಿನ ಕೇಂದ್ರ. 'ಹೃತ್' ಎಂದರೆ ಎಲ್ಲವನ್ನೂ ಒಳಗೊಳ್ಳುವುದು, ಎಲ್ಲವನ್ನೂ ತನ್ನಲ್ಲಿ ಸೇರಿಸಿ ಕೊಳ್ಳುವುದು, ಎಲ್ಲದರ ಕೇಂದ್ರ, ಬಿಂದು, ನಟ್ಟನಡುವೆ ಇರುವುದು, ಎಲ್ಲವನ್ನೂ ಎತ್ತಿ ಹಿಡಿದಿರುವುದು. ಅದನ್ನು ಆಕಾಶವೆಂದಿದ್ದಾರೆ.

ಆಕಾಶವೆಂದರೆ ಬೆಳಗುವುದು ('ಕಾಶ್' ಎಂಬ ಧಾತುವಿನಿಂದ); ಅದಕ್ಕೆ ರೂಪವಿರದು, ಆಕಾರವಿರದು, ಗುಣವಿರದು; ಎಲ್ಲೆಲ್ಲೂ ಹರಡಿ ಕೊಂಡಿರುವುದು (ವ್ಯಾಪಕ); ಎಲ್ಲವೂ ಇರಲು ಅವಕಾಶ ಮಾಡಿ ಕೊಡುವುದು; ಯಾವುದರಿಂದಲೂ ಲೇಪಗೊಳ್ಳದಿರುವುದು. ಯಾವುದೂ ಅದಕ್ಕೆ ಅಂಟಿಕೊಳ್ಳಲಾರದು. ಅದು ಯಾವುದಕ್ಕೂ ಅಂಟಿಕೊಳ್ಳುವುದಿಲ್ಲ. ನಮ್ಮ ಬದುಕಿಗೆ ಆಸರೆ ಇದೇ. ಆತ್ಮ ಇರುವುದು ಇಲ್ಲಿಯೇ. ಆತ್ಮಾನುಭವದಲ್ಲಿ ಮನಸ್ಸು ಈ ಆಕಾಶದಲ್ಲೆಲ್ಲ ಹರಡಿಕೊಳ್ಳುತ್ತದೆ.

ಈ ಹಾರ್ದಾಕಾಶದಲ್ಲಿ (ಹೃದಯವೆಂಬ ಆಕಾಶದಲ್ಲಿ) ಹೊರಗಣ ವಿಷಯ ಒಂದಿಷ್ಟೂ ಕೂಡ ಬಂದು ಅಂಟಿಕೊಳ್ಳಲಾರದು. ಆಕಾಶಸ್ಥವಾದ ಆತ್ಮವು ಕೇವಲ ಅರಿವು. ಪ್ರಪಂಚದಲ್ಲಿರುವ ಜಡತೆ ಅದರ ಗುಣವಲ್ಲ. ಅದು ಚಿತ್, ಚೈತನ್ಯ.

**ಮೌನವಾನ್ನಿರಹಂಭಾವೋ ನಿರ್ಮಾನೋ ಮುಕ್ತಮತ್ಸರಃ ।**
**ಯಃ ಕರೋತಿ ಗತೋದ್ವೇಗಃ ಸ ಜೀವನ್ಮುಕ್ತ ಉಚ್ಯತೇ ॥** (೨, ೫೦)

ಹೀಗೆ ಹಾರ್ದಾಕಾಶದಲ್ಲಿ ನೆಲೆನಿಂತು, ಆತ್ಮವೇ ತಾನಾದ ಅವಧೂತನ ಲಕ್ಷಣಗಳನ್ನು ಹೇಳುತ್ತಾರೆ. ಅವನು ಮೌನಿ. ಎಂದರೆ ಮಾತನಾಡದವನು. ಮಾತೇ ಆಡುವುದಿಲ್ಲವೆಂದಲ್ಲ, ಅನಗತ್ಯವಾಗಿ ಮಾತನಾಡುವುದಿಲ್ಲ, ಹರಟೆ ಕೊಚ್ಚುವುದಿಲ್ಲ, ವ್ಯರ್ಥವಾದ ಮಾತು ಅವನಿಂದ ಬರದು. ಮತ್ತೆ, ಏನನ್ನು ಮಾಡಿದರೂ 'ನಾನು', 'ನನ್ನದು' ಎಂಬ ಕಲ್ಪನೆಯನ್ನು ಪೂರ್ತಿಯಾಗಿ ಕೈಬಿಟ್ಟಿರುವನು. ಅವನಿಗೆ ಜಂಬ, ಬಿಗುಮಾನ, ಗತ್ತು, ಬಿಂಕ ಮೊದಲಾದುವಿರವು. ಬೇರೆಯವರನ್ನು ಕಂಡು ಕರುಬುವವನಲ್ಲ. ಅವನು ಕೆಲಸದಲ್ಲಿ ತೊಡಗಿಯೆ ಇರುತ್ತಾನೆ, ಆದರೆ ಕೆಲಸದಲ್ಲಿ ಭಾವೋದ್ವೇಗ, ಆತಂಕ, ಭಯ, ಹರ್ಷ

ಮೊದಲಾದುವೊಂದೂ ಇರುವುದಿಲ್ಲ. ಕರ್ತವ್ಯದೃಷ್ಟಿಯಿಂದ, ಸಮಚಿತ್ತನಾಗಿ ಕೆಲಸಮಾಡುತ್ತಾನೆ.

**ಸರ್ವತ್ರ ವಿಗತಸ್ನೇಹೋ ಯಃ ಸಾಕ್ಷಿವದವಸ್ಥಿತಃ ।**
**ನಿರಿಚ್ಛೋ ವರ್ತತೇ ಕಾರ್ಯೇ ಸ ಜೀವನ್ಮುಕ್ತ ಉಚ್ಯತೇ ॥** (೨, ೫೧)

ಪ್ರಪಂಚದಲ್ಲಿ ಯಾರೊಂದಿಗೂ, ಯಾವುದರೊಂದಿಗೂ ಅಂಟಿಕೊಳ್ಳುವ ಸ್ವಭಾವ ಅವಧೂತನದಲ್ಲ. ಎಲ್ಲ ಕೆಲಸದಲ್ಲೂ ಸಾಕ್ಷಿಯಂತೆ ಇದ್ದುಬಿಡುತ್ತಾನೆ. ಸಾಕ್ಷಿಯೆಂದರೆ ಬೇರೆಯಾಗಿ ನಿಂತು ಬರಿದೆ ನೋಡುವವನು. ಅವನಿಗೆ 'ನಾನು ಇದನ್ನು ಮಾಡುತ್ತಿದ್ದೇನೆ. ಇದರ ಫಲವನ್ನು ಅನುಭವಿಸುತ್ತೇನೆ. ನನಗೆ ಬೇಕಾದುದು ಇದು' ಎಂಬ ಯಾವ ಕಸಿವಿಸಿ, ಕಳವಳ ಇರದು. ತನಗೂ ತಾನು ಮಾಡುವುದಕ್ಕೂ, ಅಥವಾ ತನಗೆ ಒದಗಿ ಬರುವುದಕ್ಕೂ ಯಾವ ಸಂಬಂಧವೂ ಇರದಂತೆ ನಿರುದ್ವೇಗದಿಂದ ಇರುವನು. ಕೆಲಸ ಮಾಡುವಾಗ ಯಾವ ಬಗೆಯ ಬಯಕೆಯೂ ಇರದು. ತಾನು ಕರ್ತೃವೂ ಅಲ್ಲ, ಭೋಕ್ತೃವೂ ಅಲ್ಲ ಎಂಬಂತೆ ಕೆಲಸ ಮಾಡುವನು.

**ಯೇನ ಧರ್ಮಮಧರ್ಮಂ ಚ ಮನೋಮನನಮೀಹಿತಂ ।**
**ಸರ್ವಮಂತಃ ಪರಿತ್ಯಕ್ತಂ ಸ ಜೀವನ್ಮುಕ್ತ ಉಚ್ಯತೇ ॥** (೨, ೫೨)

ಅವಧೂತನಿಗೆ ಧರ್ಮ ಅಧರ್ಮಗಳ ಎಣಿಕೆ ಇರದು. ಸಾಮಾನ್ಯ ಜನರಿಗೆ ಅಭ್ಯುದಯ ನಿಃಶ್ರೇಯಸಗಳಿಗೆ ಕಾರಣವಾಗುವುದು ಧರ್ಮ. ದಿನನಿತ್ಯದ ಬದುಕಿನಲ್ಲಿ ಅವರು ಕಾಲುಜಾರದಂತೆ, ಎಡವಿ ಬೀಳದಂತೆ ಅವರಿಗೆ ಊರುಗೋಲಾಗುವುದು ಧರ್ಮ. ವ್ಯವಹಾರದಲ್ಲಿ ಇದರ ಪ್ರಯೋಜನವಿದೆ. ಬದುಕಿನಲ್ಲಿ ಇದು ಒಳಿತು, ಇದು ಕೆಡುಕು ಎಂದು ತಿಳಿಯಪಡಿಸುವುದು ಧರ್ಮ. ವ್ಯಕ್ತಿಯ ಮತ್ತು ಸಮುದಾಯದ

ಸುಸ್ಥಿತಿ ಇದರಿಂದ ಸಾಧ್ಯವಾದೀತು. ಇದಕ್ಕೆ ವಿಪರೀತವಾದದ್ದು ಅಧರ್ಮ. ಅದರಿಂದ ವ್ಯಕ್ತಿಯೂ ಹಾಳಾಗುತ್ತಾನೆ, ಸಮುದಾಯವೂ ತೊಂದರೆಗೀಡಾದೀತು. ಇದು ಸಾಮಾನ್ಯ ಜನರಿಗೆ ಸರಿ. ಆದರೆ ಅವಧೂತನಿಗೆ ಈ ವಿವೇಕ ಹೊಂದಲಾರದು. ಪ್ರಪಂಚಭಾವವೇ ಅವನಿಗಿಲ್ಲ ಎಂದ ಮೇಲೆ ಅಭ್ಯುದಯದ ಆಲೋಚನೆಯೇನು ?

ಆತ್ಮದಲ್ಲಿ ನೆಲೆಸಿರುವವನಿಗೆ ಒಳಿತು, ಕೆಡುಕೂ ಎರಡರ ಸಂಬಂಧವೂ ಇರದು. ವ್ಯವಹಾರದ ಚಿಂತೆಯೇ ಅಲ್ಲಿಲ್ಲ. ಹಾಗೆಯೇ, ಮನಸ್ಸಿನಿಂದ ಮಾಡುವ ವಿಚಾರವೂ, ಬಯಕೆಯೂ ಅವಧೂತನಿಗೆ ಇರುವುದಿಲ್ಲ. ಇವೆಲ್ಲವನ್ನೂ ಅವನು ತನ್ನೊಳಗೇ ಕೈಬಿಟ್ಟಿರುತ್ತಾನೆ. ಹೊರಗೆ ಧರ್ಮದ ಚೌಕಟ್ಟಿನಲ್ಲೇ ನಡೆದುಕೊಳ್ಳಬಹುದು. ಆದರೆ ಅವನ ಮನದಾಳದಲ್ಲಿ ಧರ್ಮವೆಂಬ ಅನಿಸಿಕೆಯಾಗಲಿ ಒತ್ತಡವಾಗಲಿ ಏನಿರದು. ಅಧರ್ಮವೆಂದು ಅವನು ಯಾವುದನ್ನಾಗಲಿ ಮೂಗು ಮುರಿಯುವುದೂ ಇಲ್ಲ.

ಅವನ ಮನಸ್ಸು ಆತ್ಮದಲ್ಲೇ ಇರುವುದರಿಂದ ಹೊರಗಣ ಯಾವ ಬಯಕೆಯಾಗಲಿ, ಉದ್ದೇಶವಾಗಲಿ, ಪ್ರಯೋಜನವಾಗಲಿ, ಸಂಕಲ್ಪ-ವಿಕಲ್ಪಗಳಾಗಲಿ ಅವನ ಹತ್ತಿರ ಸುಳಿಯುವುದಿಲ್ಲ.

**ಧರ್ಮಾಧರ್ಮೌ ಸುಖಂ ದುಃಖಂ ತಥಾ ಮರಣಜನ್ಮನೀ ।**
**ಧಿಯಾ ಯೇನ ಸುಸಂತ್ಯಕ್ತಂ ಸ ಜೀವನ್ಮುಕ್ತ ಉಚ್ಯತೇ ॥** (೨, ೫೬)

ಧರ್ಮ-ಅಧರ್ಮ, ಸುಖ-ದುಃಖ, ಹುಟ್ಟು-ಸಾವು ಮೊದಲಾದ ದ್ವಂದ್ವಗಳನ್ನು ಅವಧೂತನು ಮನಸ್ಸಿಗೆ ಹಚ್ಚಿಕೊಳ್ಳುವುದಿಲ್ಲ. ಒಂದು ಇದ್ದರೆ ಇನ್ನೊಂದು ಇರುವುದು ದ್ವಂದ್ವದ ಲಕ್ಷಣ. ಧರ್ಮವಿದ್ದಲ್ಲಿ ಅಧರ್ಮ. ಸುಖವಿದ್ದಲ್ಲಿ ದುಃಖ. ಜನನವಿದ್ದಲ್ಲಿ ಮರಣ. ಒಂದನ್ನು ಬಿಟ್ಟು ಇನ್ನೊಂದು ಇರಲಾರದು. ಇದು ಪ್ರಕೃತಿಗೇ ಸಹಜವಾದುದು.

ಆದರೆ ಇವು ಮನಸ್ಸಿನಲ್ಲಿ ಗಟ್ಟಿಯಾಗಿ ಅಂಟಿಕೊಂಡುಬಿಡುತ್ತವೆ. ಒಂದು ಬೇಕು, ಇನ್ನೊಂದು ಬೇಡವೆನಿಸುತ್ತದೆ. ಅದನ್ನು ಮನಸ್ಸಿನಿಂದ ತೊಲಗಿಸಿಬಿಟ್ಟಾಗಲೇ ನೆಮ್ಮದಿ.

**ಉದ್ವೇಗಾನಂದರಹಿತಃ ಸಮಯಾ ಸ್ವಚ್ಛಯಾ ಧಿಯಾ ।**
**ನ ಶೋಚತಿ ನ ಚೋದೇತಿ ಸ ಜೀವನ್ಮುಕ್ತ ಉಚ್ಯತೇ ॥** (೨, ೫೭)

ದುಃಖ ಎರಗಿ ಬಂದರೆ ಉದ್ವೇಗ, ವಸ್ತುಗಳೋ ಪ್ರಸಂಗಗಳೋ ಅನುಕೂಲವೆನಿಸಿದಾಗ ಆನಂದ. ಇವೆರಡೂ ದ್ವಂದ್ವಗಳೇ. ಅವಧೂತನು ಇವುಗಳಿಗೆ ವಶನಾಗುವುದಿಲ್ಲ. ಅವನ ಚಿತ್ತವು ಸಮನಾಗಿರುತ್ತದೆ; ಏರುಪೇರು ಇರುವುದಿಲ್ಲ. ವಾಸನೆಗಳು ತುಂಬಿಕೊಂಡು ಕಲುಷಿತ ವಾಗಿಯೂ ಇರುವುದಿಲ್ಲ; ತಿಳಿಯಾಗಿರುತ್ತದೆ. ಹಾಗಾಗಿ ಅವನು ದುಗುಡದಿಂದ ಕೂಡಿರುವುದೂ ಇಲ್ಲ, ಉತ್ಸಾಹದಿಂದೆದ್ದು ಅಡ್ಡಾಡುವುದೂ ಇಲ್ಲ.

**ಸರ್ವೇಚ್ಛಾಃ ಸಕಲಾಃ ಶಂಕಾಃ ಸರ್ವೇಹಾಃ ಸರ್ವನಿಶ್ಚಯಾಃ ।**
**ಧಿಯಾ ಯೇನ ಪರಿತ್ಯಕ್ತಾಃ ಸ ಜೀವನ್ಮುಕ್ತ ಉಚ್ಯತೇ ॥** (೨, ೫೮)

ಸಂಸಾರದ ಕಟಪಟೆಯಿರುವುದು ಮನಸ್ಸಿನಲ್ಲಿ. ನಾವು ತುಂಬಿ ಕೊಂಡಿರುವ ಬಯಕೆಗಳು, ಸಂಶಯಗಳು, ಸಂಕಲ್ಪಗಳು, ನಿರ್ಣಯ ಗಳು ಇವುಗಳಿಂದ. ಇವೆಲ್ಲ ಮನಸ್ಸಿನಲ್ಲಿ ಹುಚ್ಚೆದ್ದು ಕುಣಿಯುತ್ತಿರುವಾಗ ಜೀವ ತಲ್ಲಣಿಸುವುದು ಸಹಜವೇ. ಮನಸ್ಸು ತಿಳಿಯಾಗಿರದಿದ್ದರೆ ಬದುಕು ಭಯಾನಕವಾಗಿಬಿಡುತ್ತದೆ. ಅವಧೂತ ನಾದರೋ ಮನಸ್ಸಿನಿಂದ ಇಂಥ ವಿಕಲ್ಪಗಳನ್ನೆಲ್ಲ ಹೊರದೂಡಿ ಓಡಿಸಿರುತ್ತಾನೆ. ಪ್ರಪಂಚಭಾವ ಅವನಲ್ಲಿ ಸಡಿಲವಾಗಿರುತ್ತದೆ. ಶೋಕ, ಭಯ, ಚಿಂತೆ, ಆತಂಕ, ಉದ್ವೇಗ ಇವು ಯಾವವೂ ಅವನನ್ನು ಮುಟ್ಟಲಾರವು.

ಸುತ್ತಮುತ್ತ ಇರುವ ವ್ಯಕ್ತಿಗಳಿಗೋ ವಸ್ತುಗಳಿಗೋ ಅಂಟಿ ಕೊಂಡಿದ್ದರೆ ನಾನಾ ವಿಧವಾದ ಬಯಕೆಗಳು ಮೂಡಿಕೊಳ್ಳುತ್ತವೆ. ಅನುಕೂಲವಾಗಿ ಪ್ರಸಂಗಗಳು ಜರುಗುವುವೋ ಇಲ್ಲವೋ ಎಂಬ ಸಂದೇಹ ಅಡಿಗಡಿಗೆ ಕಾಡುತ್ತದೆ. ಹಾಗೆ, ಹೀಗೆ, ಅದನ್ನು ಇದನ್ನು ಮಾಡಬೇಕೆಂಬ ತವಕ ಎದ್ದುಕೊಳ್ಳುತ್ತದೆ. ಹೊರಗಣ ಪದಾರ್ಥಗಳನ್ನೂ ಸಂಗತಿಗಳನ್ನೂ ಕುರಿತಂತೆ 'ಇದು ಸರಿ', 'ಅದು ತಪ್ಪು', 'ಇದು ಬೇಕು', 'ಅದು ಬೇಡ' ಎಂಬ ಅನಿಸಿಕೆಗಳು ಬೇರು ಬಿಡುತ್ತವೆ.

ಇವುಗಳಿಂದ ನಾವು ಬಳಲಿ, ಬೇಸತ್ತು ಕಂಗಾಲಾಗುವೆವು. ಬದುಕು ಹೊರೆಯೆನಿಸುತ್ತದೆ. ಅವಧೂತನಿಗಾದರೆ ಯಾವ ಬವಣೆಯೂ ಇರದು. ಅವನು ಜಗತ್ತಿಗೆ ಅಂಟಿಕೊಂಡರೆ ತಾನೆ ?

**ಜನ್ಮಸ್ಥಿತಿವಿನಾಶೇಷು ಸೋದಯಾಸ್ತಮಯೇಷು ಚ ।**
**ಸಮಮೇವ ಮನೋ ಯಸ್ಯ ಸ ಜೀವನ್ಮುಕ್ತ ಉಚ್ಯತೇ ॥** (೨, ೫೯)

ಪ್ರಪಂಚವೆಂದಮೇಲೆ ಹುಟ್ಟುವುದು, ಬಾಳುವುದು, ಅಳಿಯು ವುದು ಇದ್ದದ್ದೇ. ಯಾವುದೇ ವಸ್ತುವಾಗಲಿ ತೋರಿಕೊಳ್ಳುತ್ತದೆ, ಉಳಿಯುತ್ತದೆ, ಮರೆಯಾಗುತ್ತದೆ. ಏನಾಗಲಿ, ಯಾರಾಗಲಿ ಎಂದೆಂದೂ ವಿಕಾರವಿಲ್ಲದೆ ಇರುವುದು ಸಾಧ್ಯವಿಲ್ಲ. ಪ್ರಕೃತಿನಿಯಮ ದಲ್ಲೇ ಹುಟ್ಟು, ಸಾವು, ಏರಿಳಿತ, ಬರುವುದು, ಹೋಗುವುದು ಇವು ಒಂದಾದಮೇಲೊಂದು ನಡೆಯುತ್ತಲೆ ಇರುತ್ತವೆ. ಸೂರ್ಯನಾಗಲಿ ಮುಂಜಾನೆ ತೋರಿಕೊಳ್ಳುತ್ತಾನೆ, ಸಂಜೆ ಮರೆಯಾಗುತ್ತಾನೆ. ಹಗಲು-ಇರುಳು ಆಗದೆ ಕಾಲವೇನು ಇದ್ದಂತೆಯೆ ನಿಂತಿರುವುದೆ ? ಹಾಗೆಯೇ ಸಂಪತ್ತು-ವಿಪತ್ತುಗಳೂ ಬರುತ್ತವೆ ಹೋಗುತ್ತವೆ.

ಗಿಡವಾಗಲಿ ಹಕ್ಕಿಯಾಗಲಿ ಪ್ರಾಣಿಯಾಗಲಿ ಮನುಷ್ಯನಾಗಲಿ ಹುಟ್ಟುವುದಿದೆ, ಬೆಳೆಯುವುದಿದೆ, ಬೆಳೆಯುವುದು ನಿಲ್ಲುವುದಿದೆ, ಮುಪ್ಪಡರುವುದಿದೆ, ಸಾಯುವುದಿದೆ.

ಇದನ್ನೆ 'ಅನಿತ್ಯ'ವೆನ್ನುವುದು. ಪ್ರಪಂಚದಲ್ಲಿ ಯಾವುದೂ ಇದ್ದಂತೆಯೇ ಇರುವುದಿಲ್ಲ; ಎಲ್ಲವೂ ಬದಲಾಗುತ್ತಲೆ ಇರುತ್ತವೆ. ಈ ಬದಲಾವಣೆಯ ಫಲವಾಗಿ ಮನುಷ್ಯನಿಗೆ ಸುಖ ದುಃಖಗಳ ಅನುಭವ. ಸುಖವಾಗಲಿ ದುಃಖವಾಗಲಿ ಎಂದೆಂದೂ ಇರುವುದಿಲ್ಲವಷ್ಟೆ ? ಒಂದು ಗಳಿಗೆ ಸುಖ, ಮತ್ತೊಂದು ಗಳಿಗೆ ದುಃಖ, ಮರುಗಳಿಗೆಯಲ್ಲಿ ಮತ್ತೆ ಸುಖ. ಇದೊಂದು ಗಾಲಿ ತಿರುಗುತ್ತಲೆ ಇರುತ್ತದೆ. ಹೀಗಾಗಿ ಗಾಳಿಗೊಡ್ಡಿದ ಸೊಡರಿನಂತೆ ನಮ್ಮ ಬದುಕು. ನೆಮ್ಮದಿಯೆಂಬುದನ್ನು ಕಾಣಲಾರೆವು.

ಇದಕ್ಕೂ ಮನಸ್ಸೇ ಕಾರಣ. ಪ್ರಕೃತಿಯಲ್ಲೇ ವಿಕಾರಗಳಿವೆ, ಅನಿತ್ಯತೆಯಿದೆ, ಎಂಬುದನ್ನು ಮನಸ್ಸು ಒಪ್ಪಿಕೊಳ್ಳಲಾರದು. ಅನುಕೂಲ ವಾದದ್ದು ಎಂದೆಂದೂ ಇರಬೇಕೆಂದೂ, ಪ್ರತಿಕೂಲವಾದದ್ದು ಬರಲೇ ಬಾರದೆಂದೂ ಮನಸ್ಸು ಚಡಪಡಿಸುತ್ತದೆ. ಮನಸ್ಸಿಗೂ ಚಪಲತೆ ಯೆನ್ನುವುದು ಸಹಜವೇ ತಾನೆ ? ಏನಾದರೂ ಚಿಂತೆ ತಪ್ಪುವುದಿಲ್ಲ! ಮನಸ್ಸು ಸಮಸ್ಥಿತಿಯಲ್ಲಿರುವುದು ನೆಮ್ಮದಿಗೆ ಮುಖ್ಯ. ಹುಟ್ಟು-ಸಾವುಗಳು ಇದ್ದದ್ದೇ, ಅದಕ್ಕೇಕೆ ಅಟ್ಟಹಾಸ ಅಥವಾ ಕುಟ್ಟಿಕೊಂಡು ಅಳುವುದು ? ಉದಯವಾದದ್ದು ಅಸ್ತವಾಗದೆ ಇರುವುದು ಸಾಧ್ಯವೆ ? ಒಂದು ಬೇಕು, ಇನ್ನೊಂದು ಬೇಡ ಎಂದರೆ ಆದೀತೆ ? ಮನಸ್ಸು ಯಾವುದರಿಂದಲೂ ಕದಲದೆ, ಕಲಕಿ ಹೋಗದೆ, ವಿವೇಕದಿಂದ ಇದ್ದರೆ ನೆಮ್ಮದಿ. ಅವಧೂತರು ಹೀಗಿರುತ್ತಾರೆ.

**ನ ಕಿಂಚನ ದ್ವೇಷ್ಟಿ ತಥಾ ನ ಕಿಂಚಿದಪಿ ಕಾಂಕ್ಷತಿ ।**
**ಭುಂಕ್ತೇ ಯಃ ಪ್ರಕೃತಾನ್ ಭೋಗಾನ್ ಸ ಜೀವನ್ಮುಕ್ತ ಉಚ್ಯತೇ ॥**
(೨, ೬೦)

ಅವಧೂತನು ಯಾವುದನ್ನೂ ಕೆಟ್ಟಕಣ್ಣಿನಿಂದ ನೋಡುವುದಿಲ್ಲ, ಬೇಡವೆಂದು ಹೊರದೂಡುವುದಿಲ್ಲ, ತನಗೆ ಆಗದೆಂದು ಹಗೆತನ ತೋರಿಸುವುದಿಲ್ಲ. ಹಾಗೆಂದಮಾತ್ರಕ್ಕೆ ಅವನು ಎಲ್ಲವನ್ನೂ ಒಲವಿನಿಂದ ಅಪ್ಪಿಕೊಳ್ಳುತ್ತಾನೆ ಎಂದೂ ಅಲ್ಲ. ಯಾವುದನ್ನೂ ಅವನು ಬಯಸಿ, ಆದರದಿಂದ ಬರಮಾಡಿಕೊಳ್ಳುವುದೂ ಇಲ್ಲ. ಅವನ ಮನಸ್ಸಿನಲ್ಲಿ 'ಇದು ಬೇಕು', 'ಅದು ಬೇಡ', ಎಂಬ ವಿಕಲ್ಪಗಳು ಏಳುವುದಿಲ್ಲ.

ಬಂದದ್ದೆಲ್ಲ ಬರಲಿ, ಹೋಗುವುದು ಹೋಗಲಿ ಎಂದು ನಿಶ್ಚಿಂತೆಯಿಂದ ಇರುತ್ತಾನೆ. ಬಂದಿತೆಂದು ಸಂತೋಷವಿಲ್ಲ, ಹೋಯಿತೆಂದು ದುಮ್ಮಾನವಿಲ್ಲ. ಬಂದುದನ್ನು ಅನುಭವಿಸುತ್ತಾನೆ. ಸುಖಕ್ಕೆ ಕಾರಣವಾಗುವುದು ಬಂದರೆ ಅದನ್ನೂ ಅನುಭವಿಸುತ್ತಾನೆ, ಸಾಮಾನ್ಯರಂತೆ ಸುಖವೆಂದು ಹಿಗ್ಗುವುದಿಲ್ಲ. ಸಾಮಾನ್ಯರಂತೆ ದುಃಖ ಎಂಬುದು ಅವನಿಗೆ ಒದಗಿದರೆ, ಅದನ್ನೂ ಅನುಭವಿಸುತ್ತಾನೆ, ದುಃಖವೆಂದು ಕುಗ್ಗುವುದಿಲ್ಲ, ಕಂಗಾಲಾಗುವುದಿಲ್ಲ. ಎಲ್ಲವನ್ನೂ ತಾನಾಗಿ ಬಂದರೂ ಅದನ್ನು ಗೆಲುವಿನಿಂದ ಭೋಗಿಸುವನು. ಭೋಗವಾಗಲಿ ಬೇಡವೆಂದು ಬಿಸಾಡುವುದಿಲ್ಲ. ಅವನು ಯಾವ ಕಾಲಕ್ಕೆ ಏನು ಬರುವುದೋ ಅದನ್ನು ಸಮಾಧಾನದಿಂದಲೇ ಅನುಭವಿಸುವನು.

**ಶಾಂತಸಂಸಾರಕಲನಃ ಕಲಾವಾನಪಿ ನಿಷ್ಕಲಃ ।**
**ಯಃ ಸಚಿತ್ತೋಽಪಿ ನಿಶ್ಚಿತ್ತಃ ಸ ಜೀವನ್ಮುಕ್ತ ಉಚ್ಯತೇ ॥** (೨, ೬೧)

ಸಂಸಾರವೆಂಬ ಎಣಿಕೆ ಅವಧೂತನಲ್ಲಿ ತಣ್ಣಗಾಗಿರುತ್ತದೆ. ನಮಗೆ ಆಗುವಂತೆ ಅದರ ಬಿಸಿ, ಬಿರುಸು ಅವನನ್ನು ತಾಗುವುದಿಲ್ಲ. ಎಷ್ಟೇ ವೇಗವಿದ್ದರೂ ಅವನನ್ನು ಮುಟ್ಟಿದೊಡನೆ ನಿಂತು ಹೋಗುತ್ತದೆ. ಪ್ರಪಂಚಭಾವವಾಗಲಿ ಜೀವಭಾವವಾಗಲಿ ಇರದಿದ್ದ ಮೇಲೆ ಸಂಸಾರ ವೆಲ್ಲಿಯದು ? ಹೊರಗಣ ವಿಷಯಗಳು ದಿಟವೆಂದು, ಗಟ್ಟಿಯೆಂದು, ಸುಖಕರವೆಂದು ಅವನೇನು ಭಾವಿಸಿ ಬಾಯಿ ಬಿಡುವುದಿಲ್ಲ. ಬಂದರೆ ಬರಲಿ, ಹೋದರೆ ಹೋಗಲಿ ; ತಾನೇನು ಬಾ ಎನ್ನುವುದಿಲ್ಲ, ಹೋಗು ಎನ್ನುವುದಿಲ್ಲ. ಬಂದದ್ದನ್ನು ಬಂದಾಗ ಅನುಭವಿಸಿದರಾಯಿತು, ಅಷ್ಟೆ! ಅದಕ್ಕೆ ತಲೆ ಕೆಡಿಸಿಕೊಳ್ಳುವ ಕಾರಣವೇನು ?

ಎಲ್ಲ ಮನುಷ್ಯರಿಗಿರುವಂತೆಯೇ ಅವನಿಗೆ ಹದಿನಾರು ಕಲೆಗಳಿವೆ – ಶರೀರ, ಐದು ಜ್ಞಾನೇಂದ್ರಿಯಗಳು (ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ), ಐದು ಕರ್ಮೇಂದ್ರಿಯಗಳು (ಮಾತು, ಕೈ, ಕಾಲು, ವಿಸರ್ಜನೇಂದ್ರಿಯ, ಜನನೇಂದ್ರಿಯ), ಎಲ್ಲ ಇಂದ್ರಿಯಗಳಿಗೂ ಸಾಧಾರಣವಾದ ಮನಸ್ಸು, ನಾನೆಂಬ ಅಹಂಕಾರ, ನಿಶ್ಚಯಾತ್ಮಕವಾದ ಬುದ್ಧಿ, ಚಿತ್ತ ಮತ್ತು ಆತ್ಮ. ಆದರೆ ಅವಧೂತನಿಗೆ ಇವು ಯಾವ ಕಲೆಗಳೂ ಇರದ ಆತ್ಮವೇ ಪ್ರಧಾನ ತತ್ತ್ವ. ಆದ್ದರಿಂದ ಅವನು ನಿಷ್ಕಲ. ಮೇಲೆ ಕಾಣಿಸಿದ ಯಾವ ಕಲೆಯ ನೆಲೆಯಲ್ಲೂ ಅವನ ವ್ಯವಹಾರ ಇರದು ; ಎಲ್ಲ ಕಲೆಗಳ ಸಮಷ್ಟಿಯೂ ಶೂನ್ಯವೂ ಆದ ಆತ್ಮದ ನೆಲೆಯಲ್ಲೇ ಅವನ ವ್ಯವಹಾರ.

ಚಿತ್ತವೆಂದರೆ ವ್ಯವಹಾರದ ಸಲುವಾಗಿ ಮನಸ್ಸು, ಬುದ್ಧಿ, ಅಹಂಕಾರಗಳನ್ನು ಕೂಡಿಸಿಕೊಂಡು ಆಗಿರುವ ಒಂದು ತತ್ತ್ವ. 'ಚಿತ್' ಎನ್ನುವ ಮಾತಿಗೆ ಕೂಡಿಸುವುದು, ಸೇರಿಸುವುದು, ಗುಡ್ಡೆ ಮಾಡುವುದು ಎಂದರ್ಥ. ಇದರಿಂದಲೇ 'ಚಿತಿ' ಎಂದಾಗಿರುವುದು. ಕೂಡಿಸುವುದರ ಭಾವ ಚಿತ್ತ; ಕಲೆಗಳನ್ನು ಕೂಡಿಸಿ ವ್ಯವಹಾರಕ್ಕೆ ಸಂಯೋಜಿಸುವುದು.

ವ್ಯವಹಾರವಿಲ್ಲದೆ ಮನುಷ್ಯ, ಅವಧೂತನೇ ಆಗಲಿ, ಇರುವುದು ಹೇಗೆ ? ಆದ್ದರಿಂದ ಚಿತ್ತ ಇರಲೇಬೇಕು. ಆದರೆ ನಮ್ಮ ಚಿತ್ತವು ಇಂದ್ರಿಯಗಳಿಗೆ ಅಧೀನವಾಗಿ, ಮನಸ್ಸಿನ ಪ್ರಭಾವವನ್ನು ತಳೆದು, ಅಹಂಕಾರಕ್ಕೆ ಅನುಗುಣವಾಗಿ ಕೆಲಸಮಾಡುತ್ತದೆ. ಇದು ಹೀಗೆ ಕಲುಷಿತವಾದ ಚಿತ್ತ. ಇದರಿಂದ ಒದಗಿದ ವ್ಯವಹಾರ ಸುಖದುಃಖಗಳಿಗೆ ಕಾರಣವಾಗದೆ ಇರದು. ಅವಧೂತನ ಚಿತ್ತ ಇದ್ದರೂ ಇಲ್ಲದಿದ್ದಂತೆಯೇ. ಅದರಲ್ಲಿ ಯಾವ ಕಲುಷವೂ ಇರದು. ಹಾಗೆ ಅವನು ಸಚಿತ್ತನಾದರೂ ನಿಶ್ಚಿತ್ತ.

**ಯಃ ಸಮಸ್ತಾರ್ಥಜಾಲೇಷು ವ್ಯವಹಾರ್ಯಪಿ ನಿಃಸ್ಪೃಹಃ ।**
**ಪರಾರ್ಥೇಷ್ವಿವ ಪೂರ್ಣಾತ್ಮಾ ಸ ಜೀವನ್ಮುಕ್ತ ಉಚ್ಯತೇ ॥** (೨, ೬೨)

ಅವಧೂತನು ಪರಮಾರ್ಥದಲ್ಲೇ ನೆಲೆಸಿದ್ದರೂ ವ್ಯವಹಾರದಲ್ಲಿ ತೊಡಗಿರುತ್ತಾನೆ. ಅವನಿಗೆ ವ್ಯವಹಾರವೆಂದೇನು ಬೇಸರಿಕೆಯಿರದು, ಭಯವಿರದು, ಜಿಗುಪ್ಸೆಯಿರದು. ಗೆಲುವಾಗಿಯೇ ಎಲ್ಲ ಪ್ರಸಂಗಗಳನ್ನೂ ಕಾಣುತ್ತಾನೆ, ಎಲ್ಲ ವಿಚಾರಗಳಲ್ಲೂ ಮುಳುಗಿರುತ್ತಾನೆ. ಅವನು ವ್ಯವಹಾರಿಯಂತೆಯೇ ತೋರಿಕೊಳ್ಳುತ್ತಾನೆ. ಆದರೆ ಎಲ್ಲರಂತೆ ಅವನಿಗೆ ಬಯಕೆಗಳು ವ್ಯವಹಾರದಲ್ಲಿ ಮುಂದಾಗಿರುವುದಿಲ್ಲ. 'ಅದು ಬೇಕು', 'ಇದು ಬೇಕು' ಎಂಬ ಸ್ಪೃಹೆಯನ್ನು ಬಿಟ್ಟವನು.

ವ್ಯವಹಾರದಲ್ಲಿದ್ದರೂ ವ್ಯವಹಾರದ ನೆಲೆಯಲ್ಲಿ ಅವನು ವ್ಯವಹರಿಸುವುದಿಲ್ಲ. ಅವನು ಸಹಜವಾಗಿರುವುದು ಪರಮಾರ್ಥದಲ್ಲೇ, ಎಂದರೆ ಆತ್ಮತತ್ತ್ವದಲ್ಲೇ. ಅದೇ ನೆಲೆಯಿಂದ ವ್ಯವಹಾರದಲ್ಲೂ ಇರುವನು. ಅವನಲ್ಲಿ ಪರಮಾರ್ಥ, ವ್ಯವಹಾರ ಎಂಬ ಇಬ್ಭಾಗವಿರದು. ವ್ಯವಹಾರದಲ್ಲಿ ಅವನ ಒಂದು ಭಾಗ ಮಾತ್ರ ಕೆಲಸ ಮಾಡುತ್ತದೆ ಎನ್ನುವಂತಿಲ್ಲ. ಸಾಮಾನ್ಯವಾಗಿ ನಮ್ಮ ಬದುಕಿನಲ್ಲಿ ವ್ಯವಹಾರವೇ

ಬೇರೆ, ಪರಮಾರ್ಥವೇ ಬೇರೆ; ಅಲ್ಲಿ ಒಂದು ಕಾಲು, ಇಲ್ಲೊಂದು ಕಾಲು. ಅರ್ಧ ಅಲ್ಲಿ, ಅರ್ಧ ಇಲ್ಲಿ. ಎಂದರೆ ನಮಗೆ ಎರಡೂ ಕೈಗೂಡುವುದಿಲ್ಲ. ಅವಧೂತನಿಗೆ ಈ ಸಂಕಟ ಇರದು. ಪರಮಾರ್ಥ ದಲ್ಲಿರಲಿ ವ್ಯವಹಾರದಲ್ಲಿರಲಿ ಅವನು ಪೂರ್ಣನೇ; ಪೂರ್ಣವಾದುದು ಪರಮಾರ್ಥವೇ. ಆ ನೆಲೆಯಲ್ಲಿಯೇ ಅವನು ಕದಲದೆ ಇರುವುದು.

## (ಇ)

ಮಹೋಪನಿಷತ್ತಿನ ಎರಡನೆಯ ಅಧ್ಯಾಯದಲ್ಲಿ ನಿದಾಘನೆಂಬ ಜ್ಞಾನಿಯು ತೀರ್ಥಯಾತ್ರೆಯನ್ನು ವಿಸ್ತಾರವಾಗಿ ಮಾಡಿಯೂ ಮನಃಶಾಂತಿಯನ್ನು ಪಡೆದುಕೊಳ್ಳಲಾಗದೆ, ತನ್ನ ಗುರುವಾದ ಋಭು ವೆಂಬುವನ ಬಳಿಗೆ ಬರುತ್ತಾನೆ. ವಿಷ್ಣುಪುರಾಣದಲ್ಲಿ ನಿದಾಘನೆಂಬ ಋಷಿಯು ಪುಲಸ್ತ್ಯನ ಮಗನೆಂದೂ, ಋಭುವೆಂಬ ಮಹರ್ಷಿಯ ಬಳಿ ಎಲ್ಲ ಶಾಸ್ತ್ರಗಳನ್ನು ಕಲಿತರೂ ಅದ್ವೈತದಲ್ಲಿ ಆಸಕ್ತಿಯನ್ನು ತಳೆಯಲಿಲ್ಲ ವಾಗಿ, ಗುರುವು ಅವನನ್ನು ಬಿಟ್ಟು ಹೊರಟು ಹೋದನೆಂದೂ ಉಲ್ಲೇಖವಿದೆ (ಅಂಶ ೨, ಅಧ್ಯಾಯಗಳು ೧೫-೧೬). ಕಾಲಕ್ರಮದಲ್ಲಿ ನಿದಾಘನಿಗೆ ಅದ್ವೈತದಲ್ಲಿ ರುಚಿ ಹತ್ತಿ, ತನ್ನ ಗುರುವಿನ ಬಳಿಗೇ ಹಿಂದಿರುಗುತ್ತಾನೆ. ಋಭುವು ನಿದಾಘನಿಗಿತ್ತ ಉಪದೇಶ ಉಪನಿಷತ್ತಿನ ಉಳಿದ ಭಾಗದಲ್ಲಿದೆ. ಈ ಉಪದೇಶದಿಂದ ಕೆಲವು ಭಾಗಗಳನ್ನಾಯ್ದು ಇಲ್ಲಿ ಕೊಡಲಾಗಿದೆ.

**ಭಾರೋ ವಿವೇಕಿನಃ ಶಾಸ್ತ್ರಂ ಭಾರೋ ಜ್ಞಾನಂ ಚ ರಾಗಿಣಃ ।**
**ಅಶಾಂತಸ್ಯ ಮನೋ ಭಾರೋ ಭಾರೋಽನಾತ್ಮವಿದೋ ವಪುಃ ॥**

(೩, ೧೫)

ನಿತ್ಯ-ಅನಿತ್ಯ, ಒಳಿತು-ಕೆಡುಕು, ಸಾರ-ಅಸಾರ ಎಂಬ ವಿವೇಕವಿರುವವನಿಗೆ ಶಾಸ್ತ್ರವೆಂಬುದು ಬರಿಯ ಹೊರೆ, ಅದನ್ನು ಕಟ್ಟಿಕೊಂಡು ಅವನು ಒದ್ದಾಡಲೇಕೆ ? ಕಾಮುಕನಾಗಿ ಭೋಗಕ್ಕಾಗಿ ಅಲೆದಾಡುತ್ತಿರುವವನಿಗೆ ಅಧ್ಯಾತ್ಮಜ್ಞಾನವೆಂಬುದು ಹೊರಲಾರದ ಹೊರೆಯಾಗಿ ತೋರಿಕೊಳ್ಳುತ್ತದೆ. ಹಾಗೆಯೆ ನೆಮ್ಮದಿಯಿರದವನಿಗೆ ಅವನ ಮನಸ್ಸೇ ಭಾರ. ಅದು ತಿಳಿಯಾಗಿದ್ದರೆ ಹಗುರವಾಗಿರುತ್ತದೆ. ಮನಸ್ಸು ಆತ್ಮಾಕಾರವನ್ನೆ ಪಡೆದುಕೊಂಡರೆ ಭಾರವೆಲ್ಲಿಯದು ? ಆದರೆ ಸಾಮಾನ್ಯವಾಗಿ ನೆಮ್ಮದಿಯಿರದವನ ಮನಸ್ಸಿನಲ್ಲಿ ಏನೇನೋ ಆಲೋಚನೆಗಳು, ಆತಂಕಗಳು, ಬಯಕೆಗಳು, ಭೀತಿಗಳು, ಅನಿಸಿಕೆಗಳು ಎಲ್ಲವೂ ತುಂಬಿಕೊಂಡು ಹೆಣಭಾರವಾಗಿಬಿಡುತ್ತದೆ.

ಆತ್ಮದ ಅರಿವಿಲ್ಲದಿದ್ದರೆ ಶರೀರವೇ ಒಂದು ಹೊರೆ. ಅದರಿಂದಾಗುವ ಶ್ರಮವನ್ನು ಸಹಿಸಿಕೊಳ್ಳುವುದೇ ಕಷ್ಟವಾಗುತ್ತದೆ. ಆತ್ಮದ ಅರಿವಿರದಿದ್ದಾಗ ಪ್ರಪಂಚಭಾವ ಗಟ್ಟಿಯಾಗಿರುತ್ತದೆ. ಹೊರಗಣ ವಿಷಯಗಳ ಆಕರ್ಷಣೆಯಿದ್ದು ಶರೀರದಿಂದ ಅವನ್ನು ಪಡೆದುಕೊಳ್ಳುವ, ಭೋಗಿಸುವ ಚಪಲ ಎಡೆಬಿಡದೆ ಕಾಡುತ್ತದೆ. ಭೋಗದಿಂದ ಶರೀರಕ್ಕೆ ರೋಗವೂ ತಪ್ಪಿದ್ದಲ್ಲ. ರೋಗದಿಂದ ಶರೀರ ಬಳಲಿದಾಗ ಶರೀರ ತುಂಬ ಭಾರವಾಗುತ್ತದೆ. ಆರೋಗ್ಯವಾಗಿರುವಾಗ ಶರೀರದ ಅರಿವೇ ಇರುವುದಿಲ್ಲ; ಭಾರವಾಗುವುದು ಹೇಗೆ ? ಆತ್ಮವೇ ಎಲ್ಲವೂ ಎಂಬ ಅರಿವು ಮೂಡಿದಾಗ ಶರೀರವು ಬೇರೆಯಾಗಿ ತೋರಿಕೊಳ್ಳುವುದೇ ಇಲ್ಲ. ಅದು ಹೊರೆಯೆಂಬ ಭಾವನೆಯೂ ಬರುವುದಿಲ್ಲ.

**ಮೋಕ್ಷದ್ವಾರೇ ದ್ವಾರಪಾಲಾಶ್ಚತ್ವಾರಃ ಪರಿಕೀರ್ತಿತಾಃ ।**
**ಶಮೋ ವಿಚಾರಃ ಸಂತೋಷಶ್ಚತುರ್ಥಃ ಸಾಧುಸಂಗಮಃ ॥** (೪, ೨)

ಸಂಸಾರಬಂಧನದಿಂದ ಬಿಡುಗಡೆಯಾಗುವುದು ಮೋಕ್ಷ. ಇದೊಂದು ಅರಮನೆಯೆಂದು ಕಲ್ಪಿಸಿಕೊಂಡರೆ, ಅದಕ್ಕೆ ನಾಲ್ವರು ಬಾಗಿಲುಕಾಯುವವರು. ಇಂದ್ರಿಯಗಳನ್ನೂ ಮನಸ್ಸನ್ನೂ ವಶದಲ್ಲಿರಿಸಿ ಕೊಳ್ಳುವುದು ಶಮೆ. ಅದು ಮೊದಲ ಕಾವಲುಗಾರ. ಶಾಸ್ತ್ರವನ್ನು ಅಧ್ಯಯನ ಮಾಡಿದ ಮೇಲೆ ಶಾಸ್ತ್ರದ ತಾತ್ಪರ್ಯವನ್ನು ಕುರಿತು ಯುಕ್ತಿಯಿಂದಲೂ ಅನುಭವದ ಆಧಾರದ ಮೇಲೂ ವಿಚಾರ ಮಾಡುವುದು ಎರಡನೆಯದು. ವಿಚಾರ ಮಾಡದಿದ್ದರೆ ಅನರ್ಥವೇ. ಇದು ಎರಡನೆಯ ಕಾವಲುಗಾರ. ಸಂತೋಷವೆಂದರೆ ಇದ್ದುದರಲ್ಲಿ, ತಾನಾಗಿ ಬಂದುದರಲ್ಲಿ, ತೃಪ್ತಿಪಡುವುದು. ಅತಿಯಾಗಿ ಆಶೆ ಮಾಡದಿರುವುದು. ಸಮಾಧಾನ ಎಂದು ಅದಕ್ಕೆ ಇನ್ನೊಂದು ಹೆಸರು. ಮೂರನೆಯ ಕಾವಲುಗಾರ ಇದಾದರೆ, ನಾಲ್ಕನೆಯದು ಸತ್ಸಂಗ. ಒಳ್ಳೆಯ ಮಂದಿಯೊಂದಿಗೆ ಒಡನಾಡುವುದು ಶ್ರೇಯಸ್ಸಿಗೆ ದಾರಿ. ಬದುಕಿನ ಮೌಲ್ಯಗಳನ್ನು ಅಳವಡಿಸಿಕೊಂಡವರು, ಧರ್ಮದ ನೇರವಾದ ದಾರಿಯಲ್ಲಿ ನಡೆಯುವವರು ಸಾಧುಗಳು. ಅಂಥವರನ್ನು ಹುಡುಕಿ ಅವರ ಸಹವಾಸ ಮಾಡುವುದು ಮುಕ್ತಿಗೆ ನೆರವಾಗುತ್ತದೆ.

**ಅಪ್ರಾಪ್ತಂ ಹಿ ಪರಿತ್ಯಜ್ಯ ಸಂಪ್ರಾಪ್ತೇ ಸಮತಾಂ ಗತಃ ।**
**ಅದೃಷ್ಟಖೇದಾಖೇದೋ ಯಃ ಸಂತುಷ್ಟ ಇತಿ ಕಥ್ಯತೇ ॥** (೪, ೩೬)

ಬಾರದಿರುವುದನ್ನು ಬಿಟ್ಟರಾಯಿತು. ಬರಲಿಲ್ಲವೆಂದು ಗೋಳು ಕರೆಯಲೇಕೆ ? ಬಂದದ್ದಕ್ಕೆ ಕೂಡ ತಲೆಕೆಡಿಸಿಕೊಳ್ಳಬಾರದು. ಬಂದಿತೆಂದು ಹಾರಾಡಬಾರದು. ನೆಮ್ಮದಿಯಿಂದಿರಬೇಕು. ಬಂದದ್ದಕ್ಕೆ ಬಾರದಿರುವುದಕ್ಕೆ ದುಗುಡವನ್ನಾಗಲಿ ಉತ್ಸಾಹವನ್ನಾಗಲಿ ಕಾಣ ದಿರುವವನೀಗ ಸಂತುಷ್ಟ (ತೃಪ್ತ) ನೆನಿಸಿಕೊಳ್ಳುವನು. ಅವಧೂತನ ಆಚರಣೆ ಇದೇ.

**ನಾಭಿನಂದತ್ಯಸಂಪ್ರಾಪ್ತಂ ಪ್ರಾಪ್ತಂ ಭುಂಕ್ತೆ ಯಥೇಪ್ಸಿತಂ ।**
**ಯಃ ಸ ಸೌಮ್ಯಸಮಾಚಾರಃ ಸಂತುಷ್ಟ ಇತಿ ಕಥ್ಯತೇ ॥** (೪.೩೭)

ನಮ್ಮ ಕೈಗೆಟುಕದೆ ಇರುವುದಕ್ಕೆ ಕೈ ಚಾಚಬಾರದು, ಬಾರದೆ ಇರುವುದಕ್ಕೆ ಹಾತೊರೆಯಬಾರದು. ನಮಗೆ ದೊರತದ್ದನ್ನು ಮನಸ್ಸಿಗೆ ಬಂದಂತೆ ಅನುಭವಿಸಿ ಸಂತೋಷಪಡಬೇಕು. ನಾವು ಮಾಡುವ ಕೆಲಸದಲ್ಲಿ ಉದ್ವೇಗ ಇರಬಾರದು, ಯಾವುದನ್ನಾದರೂ ನೆಮ್ಮದಿಯಿಂದ ಮಾಡಬೇಕು. ಹೀಗೆ ಇರುವವನು ತೃಪ್ತ, ಸಂತುಷ್ಟ.

**ತುರ್ಯವಿಶ್ರಾಂತಿಯುಕ್ತಸ್ಯ ನಿವೃತ್ತಸ್ಯ ಭವಾರ್ಣವಾತ್ ।**
**ಜೀವತೋಽ ಜೀವತಶ್ಚೈವ ಗೃಹಸ್ಥಸ್ಯಾಥವಾ ಯತೇಃ ॥** (೪.೪೦)

ಎಚ್ಚರ, ಕನಸು, ತನಿನಿದ್ರೆಗಳೆಂಬ ಮೂರು ಅವಸ್ಥೆಗಳಷ್ಟೆ ? ನಾಲ್ಕನೆಯ ಅವಸ್ಥೆಯೆಂಬುದಿರದು. ಆದರೆ ಮೂರು ಅವಸ್ಥೆಗಳಿಗೆ ಆಸರೆಯಾಗಿ, ಏಕರೂಪವಾಗಿ, ಅಡಗಿರುವ ಆತ್ಮವೇ ನಾಲ್ಕನೆಯದು (ತುರ್ಯ, ಚತುರೀಯ). ಅದನ್ನೇ ಮೂರು ಅವಸ್ಥೆಗಳಲ್ಲಿಯೂ ಅರಿತುಕೊಂಡು, ಅದರಲ್ಲೇ ನೆಲೆಗೊಂಡವನು ಅವಧೂತ. ಹಾಗೆ ಆತ್ಮಸ್ಥನಾದವನು ಸಂಸಾರವೆಂಬ ಸಾಗರದಿಂದ ದೂರ ಸರಿದಂತೆಯೇ. ಸಂಸಾರದಲ್ಲಿ ಆತ್ಮವೇ ಆಧಾರವಾಗಿದ್ದರೂ ಮರೆಯಾಗಿರುತ್ತದೆ; ಆತ್ಮದ ಕಡೆಗೆ ಗಮನ ಹೋಗದಂತೆ ಪ್ರಪಂಚಭಾವ ನಮ್ಮನ್ನು ಗಟ್ಟಿಯಾಗಿ ಕವಿಯುತ್ತದೆ. ಮೂರು ಅವಸ್ಥೆಗಳೇ ನಮಗೆ ತೋರಿಕೊಳ್ಳುವುವು. ಮೂರರ ಅಡಿಯಲ್ಲೂ ಇರುವ ಆತ್ಮ ತೋರಿಕೊಳ್ಳುವುದಿಲ್ಲ.

ಆದರೆ ಅವಧೂತನು ಇದನ್ನೆ ಅರಿತುಕೊಳ್ಳುವುದು ; ಆತ್ಮದಲ್ಲೇ ನೆಲೆಗಾಣುವನು. ಅವನಿಗೆ ಮೂರೂ ಅವಸ್ಥೆಗಳಲ್ಲೊದಗುವ ಸಂಸಾರದ ಸಂಕಟವಿರದು. ಅವನು ಎಲ್ಲರಂತೆ ಉಸಿರಾಡುತ್ತಿದ್ದರೂ, ಎಲ್ಲರಂತೆ

ಎಲ್ಲ ಕೆಲಸಗಳನ್ನು ಮಾಡುತ್ತಿದ್ದರೂ, ಎಲ್ಲರಂತೆ ಬದುಕು ಅವನದಲ್ಲ. ಅವನು ಗೃಹಸ್ಥನೇ ಆಗಿದ್ದು ಮನೆಯಲ್ಲಿ ಹೆಂಡಿರು ಮಕ್ಕಳೊಂದಿಗೆ ವಾಸ ಮಾಡುತ್ತ ಇರಬಹುದು. ಇಲ್ಲವೇ ಸಂನ್ಯಾಸಿಯಾಗಿ, ಮನೆಯಿಲ್ಲದವನಾಗಿ ಓಡಿಯಾಡುತ್ತಿರಬಹುದು. ಏನಾದರಾಗಲಿ ಅವನು ಬದುಕಿರುತ್ತಾನೆ ತಾನೆ ? ಆದರೆ ಅವಧೂತನ ಬದುಕು ನಮ್ಮ ಬದುಕಿನಂತಲ್ಲ. ನಮ್ಮನ್ನು ನೋಡಿದಾಗ ಅವನು ಬದುಕಿರದಂತೆಯೇ ತೋರುತ್ತದೆ.

**ನ ಬಾಹ್ಯೇ ನಾಪಿ ಹೃದಯೇ ಸದ್ರೂಪಂ ವಿದ್ಯತೇ ಮನಃ ।**
**ಯದರ್ಥಂ ಪ್ರತಿಭಾನಂ ತನ್ಮನ ಇತ್ಯಭಿಧೀಯತೇ ॥**

**ಸಂಕಲ್ಪನಂ ಮನೋ ವಿದ್ಧಿ ಸಂಕಲ್ಪಸ್ತತ್ರ ವಿದ್ಯತೇ ।**
**ಯತ್ರ ಸಂಕಲ್ಪನಂ ತತ್ರ ಮನೋಽಸ್ತೀತ್ಯವಗಮ್ಯತಾಂ ॥**

**ಸಂಕಲ್ಪಮನಸೀ ಭಿನ್ನೇ ನ ಕದಾಚನ ಕೇನಚಿತ್ ।**
**ಸಂಕಲ್ಪಜಾತೇ ಗಲಿತೇ ಸ್ವರೂಪಮವಶಿಷ್ಯತೇ ॥** (೪.೫೦-೫೩)

ಅವಧೂತನಿಗೂ ನಮಗೂ ಅಂತರ ಇರುವುದು ಮನಸ್ಸಿನಲ್ಲಿ. ನಮ್ಮ ಮನಸ್ಸು ಇರುವುದೇ ಒಂದು ರೀತಿಯಲ್ಲಿ; ಅವಧೂತನ ಮನಸ್ಸು ಇರುವುದು ತೀರ ಬೇರೆ ರೀತಿಯಲ್ಲಿ.

ಆದರೆ ಮನಸ್ಸು ಎಂಬುದಾದರೂ ಎಲ್ಲಿದೆ ? ನಮ್ಮ ಶರೀರದಿಂದ ಹೊರಗೆ ಎಲ್ಲಿಯಾದರೋ ಇದ್ದೀತೋ ಎಂದರೆ ಅದು ಸಾಧ್ಯವಿರದು. ಶರೀರದೊಳಗೇ ಹೃದಯದಲ್ಲಿ ಅಡಗಿದೆಯೋ ಎಂದರೆ ಅಲ್ಲೇನು ಗಟ್ಟಿಯಾಗಿ ದಿಟವಾಗಿ ಇರಲಾರದು. ಯಾವ ಪದಾರ್ಥವಾಗಲಿ ನಮಗೆ ಎಲ್ಲಿ, ಯಾಕೆ, ಯಾವುದರಿಂದ ತೋರಿಕೊಳ್ಳುವುದೋ ಅದೇ ಮನಸ್ಸು. ಕಾಣ್ಕೆಗೆ ಕಣ್ಣು, ಕೇಳ್ಮೆಗೆ ಕಿವಿ ಇರುವಂತೆ ಆಲೋಚನೆಗೆ

ಮನಸ್ಸು ಒಂದು ಭೌತಿಕ ಅಂಗವೇನಲ್ಲ. ನಮಗಿರುವ ಅಂಗ-ಉಪಾಂಗಗಳೇ ಅವಧೂತನಿಗೂ ಇರುವುದು; ಅವನಿಗೇನು ಹೆಚ್ಚಿನ ಅವಯವವಿರುವುದಿಲ್ಲ. ಅವನು ಜಗತ್ತನ್ನು ನೋಡುವ ರೀತಿ ಬೇರೆ, ನಾವು ನೋಡುವ ರೀತಿ ಬೇರೆ. ಈ ನೋಡುವಿಕೆಗೆ ಕಾರಣವಾಗುವುದು ಮನಸ್ಸು.

ನಮ್ಮ ಮನಸ್ಸಿನೊಳಗೆ ಬಯಕೆಗಳು ತುಂಬಿರುತ್ತವೆ, ಅನಿಸಿಕೆಗಳ ಆಟ ನಡೆದಿರುತ್ತದೆ, ಆಲೋಚನೆಗಳೂ ಭಾವಗಳೂ ಮೇಲೆದ್ದು ನುಗ್ಗುತ್ತವೆ. ಅವಧೂತನ ಮನಸ್ಸಿನಲ್ಲಿ ಇವೊಂದೂ ಇರದೆ ಅದು ತಿಳಿಯಾಗಿರುತ್ತದೆ. 'ಇದನ್ನು ಮಾಡಬೇಕು', 'ಅದನ್ನು ಮಾಡಬೇಕು' ಎನ್ನುವ ಸಂಕಲ್ಪಗಳಿವೆಯಲ್ಲಾ, ಅದೇ ಮನಸ್ಸು. ಎಲ್ಲಿ ಸಂಕಲ್ಪಗಳಿವೆಯೋ ಅಲ್ಲಿ ಮನಸ್ಸು ಇದೆ ಎಂದು ತಿಳಿಯಬೇಕು. ಸಂಕಲ್ಪವೆಂದರೆ ಚೆನ್ನಾಗಿ ಮಾಡುವುದು ಎಂದರ್ಥ ('ಕ್ಲೃಪ್' ಧಾತುವಿಗೆ ಕಲ್ಪಿಸುವುದು, ಹುಟ್ಟಿಹಾಕುವುದು, ಇಲ್ಲದುದನ್ನು ಒದಗಿಸುವುದು, ಸೃಷ್ಟಿಸುವುದು ಎಂಬರ್ಥಗಳಿವೆ). ಮನಸ್ಸಿನಿಂದ ಮಾಡುವ ಕೆಲಸ ಸಂಕಲ್ಪ ಎಂದು ಅಮರಕೋಶಕಾರನು ಹೇಳುತ್ತಾನೆ. ಮನಸ್ಸು ಮಾಡಿಕೊಳ್ಳುವ ಕಲ್ಪನೆಗಳು, ಸೃಷ್ಟಿಗಳು, ಸಂಕಲ್ಪ, ಮನಸ್ಸು ಬೇರೆ ಬೇರೆ ಎಂದು ಭಾವಿಸಬಾರದು. ಯಾರಿಗಾಗಲಿ, ಯಾವಾಗಲಾಗಲಿ ಸಂಕಲ್ಪವನ್ನು ಬಿಟ್ಟು ಮನಸ್ಸಿಲ್ಲ, ಮನಸ್ಸು ಬಿಟ್ಟು ಸಂಕಲ್ಪವಿಲ್ಲ. ಮನಸ್ಸಿದಲ್ಲಿ ಸಂಕಲ್ಪ, ಸಂಕಲ್ಪವಿದ್ದಲ್ಲಿ ಮನಸ್ಸು. ಮನಸ್ಸೆಂಬುದೇ ಸಂಕಲ್ಪ ಸ್ವರೂಪವಾದುದು. ಸಂಕಲ್ಪಗಳು ಅಡಿಗಡಿಗೆ ಹೊಸ ಹೊಸದಾಗಿ, ಬೇರೆ ಬೇರೆಯಾಗಿ, ಬಗೆಬಗೆಯಾಗಿ ಹೊರಹೊಮ್ಮುತ್ತಿರುವುದರಿಂದಲೆ ಮನಸ್ಸನ್ನು ಚಂಚಲ ಎನ್ನುವುದು. ಮನಸ್ಸು ಸಂಕಲ್ಪಗಳಿಂದ ತುಂಬಿರುವಾಗ ಅದು ಏಕರೀತಿಯಾಗಿ, ಏಕಾಗ್ರವಾಗಿ ಇರುವುದು ಸಾಧ್ಯವೇ ಇಲ್ಲ.

ಸಂಕಲ್ಪಗಳೆಲ್ಲವನ್ನೂ ಹೋಗಲಾಡಿಸಿದೆವೆನ್ನಿ, ಮನಸ್ಸು ತನ್ನಷ್ಟಕ್ಕೆ ತಾನೆ ಅಡಗಿಹೋಗುತ್ತದೆ. ಆಗ ಆತ್ಮ ಬೆಳಗುವುದು ನಮ್ಮ ಅರಿವಿಗೆ ಬರುತ್ತದೆ. ಆತ್ಮದ ಸ್ವರೂಪವೇ ಉಳಿದುಕೊಳ್ಳುವುದು. ಮನಸ್ಸು ಆತ್ಮದಲ್ಲಿಯೇ ಅಡಗುವುದು. ಅದಕ್ಕೆ ಬೇರೆ ನೆಲೆಯಿರದು. ವ್ಯವಹಾರ ದಲ್ಲಿ ಮನಸ್ಸು ಸಂಕಲ್ಪಗಳಲ್ಲಿಯೇ ಇರುವುದು; ಆದರೆ ಸಂಕಲ್ಪಗಳೆಲ್ಲ ಮರೆಯಾದ ಮೇಲೆ ಮನಸ್ಸು ಆತ್ಮಾಕಾರವಾಗಿ ಬಿಡುತ್ತದೆ.

**ಚಿತ್ತಮೇವ ಹಿ ಸಂಸಾರೋ ರಾಗಾದಿಕ್ಲೇಶದೂಷಿತಂ ।**
**ತದೇವ ತೈರ್ವಿನಿರ್ಮುಕ್ತಂ ಭವಾಂತ ಇತಿ ಕಥ್ಯತೇ ॥**

**ಮನಸಾ ಭಾವ್ಯಮಾನೋ ಹಿ ದೇಹತಾಂ ಯಾತಿ ದೇಹತಃ ।**
**ದೇಹವಾಸನಯಾ ಮುಕ್ತೋ ದೇಹಧರ್ಮೈರ್ನ ಲಿಪ್ಯತೇ ॥** (೪.೬೬-೬೭)

ಸಂಕಲ್ಪಗಳಿಂದ ನಿಬಿಡವಾದ ಮನಸ್ಸು ಚಿತ್ತವೆನಿಸಿಕೊಳ್ಳುತ್ತದೆ. ಸಂಕಲ್ಪಗಳ ರಾಶಿ ಅದು. ಅದರಲ್ಲಿ ರಾಗ-ದ್ವೇಷ-ಮೋಹ ಇವು ಕೊಳೆಗಳಾಗಿ ಸೇರಿಕೊಂಡರೆ ಆ ಚಿತ್ತವೇ ಸಂಸಾರ. ಜಗತ್ತು ಸಂಸಾರ ವಲ್ಲ; ಜಗತ್ತಿನ ಪದಾರ್ಥಗಳಲ್ಲಿ, ಪ್ರಸಂಗಗಳಲ್ಲಿ ರಾಗ, ದ್ವೇಷ, ಅನುಕೂಲ, ಪ್ರತಿಕೂಲ, ಉತ್ತಮ, ಅಧಮ ಮೊದಲಾದ ಮೌಲ್ಯ ಗಳಿರವು. ಜಗತ್ತನ್ನು ನಾವು ಗಟ್ಟಿಯಾದುದು, ದಿಟವಾದುದು, ಸುಖಕರ ವಾದುದು ಎಂದೆಲ್ಲ ಬಗೆದು ಅದರೊಂದಿಗೆ ಮನಸ್ಸನ್ನು ಅಂಟಿಸಿ ಕೊಂಡಾಗ ಅದು ಸಂಸಾರವಾಗುತ್ತದೆ. ಜಗತ್ತನ್ನು ಪ್ರಪಂಚವೆಂದು ಬಗೆದಾಗ (ಇದಕ್ಕೆ ಪ್ರಪಂಚಭಾವ ಎಂದು ಹೆಸರು), ನಾವು ಜೀವವೆಂದುಕೊಂಡಾಗ (ಜೀವಭಾವ, ದೇಹೇಂದ್ರಿಯ ಮನಸ್ಸು ಗಳಿಂದ ಕೂಡಿದ ಆತ್ಮ) ಸಂಸಾರದ ನಿರ್ಮಾಣವಾಗುತ್ತದೆ. ಇದರ ಕೇಂದ್ರಬಿಂದು ಚಿತ್ತವೇ.

ಇದೇ ಚಿತ್ತದಿಂದ ರಾಗ-ದ್ವೇಷ-ಮೋಹಾದಿಗಳನ್ನು ಹೊರದೂಡಿಬಿಟ್ಟರೆ, ಎಂದರೆ ಕಲುಷಿತವಾದುದನ್ನು ಸ್ವಚ್ಛಮಾಡಿಬಿಟ್ಟರೆ, ಸಂಸಾರವೂ ಹೋಯಿತು. ಇದನ್ನು 'ಭವಾಂತ' (ಭವವೆಂದರೆ ಸಂಸಾರ; ಅದರ ಕೊನೆ ಅಥವಾ ಅವಸಾನ) ಎನ್ನುತ್ತಾರೆ. ಕಲುಷಿತ ಚಿತ್ತವು ಸಂಸಾರ, ಬಂಧನ; ಶುದ್ಧ ಚಿತ್ತವು ಮೋಕ್ಷ. ಚಿತ್ತವೇ ವ್ಯವಹಾರ, ಚಿತ್ತವೇ ಪರಮಾರ್ಥ.

ಮನಸ್ಸಿನಿಂದ ಕಲ್ಪಿಸಿಕೊಂಡಾಗಲೇ ಜೀವಕ್ಕೆ ದೇಹದ ಎಣಿಕೆ. ದೇಹವೆನ್ನುವುದು ಮನಸ್ಸಿನ ಒಂದು ಕಲ್ಪನೆಯಷ್ಟೆ. ನಮಗೆ ದೇಹವಿದೆಯೆಂದು ದೇಹಿಗಳೆನಿಸಿಕೊಂಡ ನಮ್ಮೆಲ್ಲರ ಅಭಿಮಾನ. ದೇಹಾಭಿಮಾನವಿದ್ದರೆ ಜೀವಭಾವ ; ದೇಹಾಭಿಮಾನ ಮರೆಯಾದರೆ ಅವನು ಮುಕ್ತನೇ; ದೇಹದ ಗುಣದೋಷಗಳು ಅವನನ್ನು ಮುಟ್ಟಲಾರವು. ದೇಹವು ನನ್ನದು, ಅದನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಅದು ತೊಂದರೆಗೀಡಾದಂತೆ ಕಾಪಿಟ್ಟುಕೊಳ್ಳಬೇಕು, ಅದರ ಅಂದ-ಚೆಂದ, ಬಲ-ರೂಪ, ಆರೋಗ್ಯ-ದಾರ್ಢ್ಯಗಳನ್ನು ಹೆಚ್ಚಿಸಿಕೊಳ್ಳಬೇಕು, ಅದರಿಂದ ವ್ಯವಹಾರ ಉತ್ತಮವಾಗಬೇಕು ಮೊದಲಾದ ಎಣಿಕೆಗಳೆಲ್ಲ ದೇಹವಾಸನೆ ಎನಿಸಿಕೊಳ್ಳುತ್ತವೆ. ಈ ಬಗೆಯ ದೇಹವಾಸನೆ ಹೋದರೆ, ಮೋಕ್ಷವೇ.

(ಮೇಲಿನ ಎರಡು ಶ್ಲೋಕಗಳಲ್ಲಿ ಮೊದಲನೆಯದು 'ತತ್ತ್ವಸಂಗ್ರಹಪಂಜಿಕಾ' ಎನ್ನುವ ಬೌದ್ಧಗ್ರಂಥದಲ್ಲೂ ಸೇರಿಬಂದಿದೆ)

**ದುರ್ಲಭೋ ವಿಷಯತ್ಯಾಗೋ ದುರ್ಲಭಂ ತತ್ತ್ವದರ್ಶನಂ ।**
**ದುರ್ಲಭಾ ಸಹಜಾವಸ್ಥಾ ಸದ್ಗುರೋಃ ಕರುಣಾಂ ವಿನಾ ॥**
**ಉತ್ಪನ್ನಶಕ್ತಿಬೋಧಸ್ಯ ತ್ಯಕ್ತನಿಃಶೇಷಕರ್ಮಣಃ ।**
**ಯೋಗಿನಃ ಸಹಜಾವಸ್ಥಾ ಸ್ವಯಮೇವೋಪಜಾಯತೇ ॥** (೪.೭೭-೭೮)

ಪ್ರಪಂಚದಲ್ಲಿದ್ದುಕೊಂಡು ಹೊರಗಣ ವಿಷಯಗಳ ನಂಟು ಬೇಡವೆನ್ನುವುದು ಹೇಗೆ ? ವಿಷಯಗಳನ್ನೆಲ್ಲ ಕೈ ಬಿಡುವುದು ತುಂಬ ಕಷ್ಟ. ಅಸಾಧ್ಯವೆಂದರೂ ಸರಿಯೆ. ತತ್ತ್ವವನ್ನು ಕಂಡುಕೊಂಡರೆ ಅದು ಆದೀತೋ ಏನೋ! ಆದರೆ ತತ್ತ್ವವನ್ನು ಕಂಡುಕೊಳ್ಳುವುದೇನು ಸುಲಭವೇ ? ಅದೂ ಅಸಾಧ್ಯವೇ. ಒಳ್ಳೆಯ ಗುರು ದೊರೆತರೆ ಅದು ಆದೀತೋ ಏನೋ! ಶಬ್ದಜ್ಞಾನವನ್ನು ತಿಳಿಸಿಕೊಡಬಲ್ಲ ಪಂಡಿತ ಗುರುಗಳು ಅನೇಕರಿರುತ್ತಾರೆ. ಆದರೆ ಅವರಿಂದ ತತ್ತ್ವದರ್ಶನವಾಗದು. ಅದು ಆಗುವುದು ಸದ್ಗುರುವಿನಿಂದ. ಸದ್ಗುರು ಎನ್ನುವ ಮಾತಿಗೆ ಸತ್ ಪದಾರ್ಥದ (ಎಂದರೆ ಆತ್ಮದ) ಅನುಭವವುಳ್ಳವನು, ತನ್ನ ಬಳಿ ಬಂದ ಶಿಷ್ಯರಿಗೆ ಈ ಅನುಭವವನ್ನು ಉಂಟುಮಾಡಬಲ್ಲವನು ಎಂದರ್ಥ. ಇಂಥ ಗುರುಗಳು ತೀರ ವಿರಳ. ಅವರ ಅನುಗ್ರಹವಿದ್ದರೆ ವಿಷಯಗಳನ್ನು ಸುಲಭವಾಗಿ ಕೈಬಿಡುವುದೂ ಆಗುತ್ತದೆ, ತತ್ತ್ವ ದರ್ಶನವೂ ಆಗುತ್ತದೆ.

ಸಹಜವಾದ ಅವಸ್ಥೆ (ನೆಲೆ)ಯೆಂದರೆ ಆತ್ಮದಲ್ಲೇ ಇರುವುದು, ಆತ್ಮವಾಗಿ ಇರುವುದು. ನಾವು ಸಾಮಾನ್ಯವಾಗಿ ಇರುವುದು ಪ್ರಪಂಚದ ನೆಲೆಯಲ್ಲೇ. ಹೊರಗಣ ವಿಷಯಗಳನ್ನೆ ನಂಬಿಕೊಂಡು, ಅವುಗಳನ್ನೆ ಆಶ್ರಯಿಸಿ, ಅವುಗಳಿಂದಲೆ ಆಕರ್ಷಿತರಾಗಿ, ಅವುಗಳ ವಶವಾಗಿ ಬದುಕುವುದು ಪ್ರಪಂಚಭಾವ. ಇದು ಮನಸ್ಸಿನ ಸಂಕಲ್ಪ-ವಿಕಲ್ಪ ಗಳಿಂದಲೇ ಆದುದು; ತಾನಾಗಿ ಇರುವುದಲ್ಲ. ಆದ್ದರಿಂದ ಇದು ಕೃತಕ, ಕಲ್ಪಿತ. ಈ ನೆಲೆ ನಿತ್ಯವಾದುದಲ್ಲ, ಅಡಿಗಡಿಗೆ ಬದಲಾಗುತ್ತಿರು ವುದು. ಹೀಗಾಗಿ ಇದರಿಂದ ಸುಖದುಃಖಗಳು ತಪ್ಪಿದ್ದಲ್ಲ. ಇದನ್ನೆ ಸಂಸಾರವೆನ್ನುವುದು.

ಕೃತಕವಲ್ಲದ್ದು, ಕಲ್ಪಿತವಲ್ಲದ್ದು, ತಾನು ತಾನಾಗಿ ಇರುವಂಥದು, ಮತ್ತೊಂದರ ಆಸರೆಯನ್ನು ಬಯಸದಿರುವುದು, ತನ್ನಲ್ಲಿ ತಾನು

ಪರಿಪೂರ್ಣವಾಗಿರುವುದು ಆತ್ಮವೊಂದೇ. ಇದು ಮಾತ್ರ ಸಹಜವಾದುದು. ಆತ್ಮವನ್ನರಿತುಕೊಂಡು ಆತ್ಮವೇ ತಾನೆಂದು ನಿಶ್ಚಯ ಮಾಡಿಕೊಂಡು ಆತ್ಮವಾಗಿ ಇರುವುದು ಸಹಜಾವಸ್ಥೆ. ಇದರಲ್ಲಿರುವುದು ಆನಂದ; ಸುಖದುಃಖಗಳಲ್ಲ. ಸಂಸಾರದ ಭಾವ ಮರೆಯಾದರೆ ಮಾತ್ರ ಈ ನೆಲೆ ಒದಗುವುದು. ವಿಷಯತ್ಯಾಗ, ತತ್ತ್ವದರ್ಶನಗಳು ಆದಮೇಲೇ ಈ ನೆಲೆ ಕೈಗೂಡುವುದು. ಹೀಗೆ ಸದ್ಗುರುವಿನ ಕರುಣೆ ಎಲ್ಲಕ್ಕೂ ಅಗತ್ಯವಾಗುತ್ತದೆ.

**ಅನಾತ್ಮತಾಂ ಪರಿತ್ಯಜ್ಯ ನಿರ್ವಿಕಾರೋ ಜಗತ್ಸ್ಥಿತೌ ।**
**ಏಕನಿಷ್ಠತಯಾಂತಸ್ಥಃ ಸಂವಿನ್ಮಾತ್ರಪರೋ ಭವ ॥**
**ಮರುಭೂಮೌ ಜಲಂ ಸರ್ವಂ ಮರುಭೂಮಾತ್ರಮೇವ ತತ್ ।**
**ಜಗತ್ತ್ರಯಮಿದಂ ಸರ್ವಂ ಚಿನ್ಮಾತ್ರಂ ಸ್ವವಿಚಾರತಃ ॥** (೪.೮೩-೮೪)

ಆತ್ಮವಲ್ಲದ್ದು ಯಾವುದೂ ಇರದು. ಆತ್ಮವೊಂದೇ ದಿಟವಾದ ತತ್ತ್ವ. ಆದರೆ ಮನಸ್ಸಿನ ಕಲ್ಪನೆಗಳಿಂದಾಗಿ ಪ್ರಪಂಚಭಾವ ಮೇಲೆದ್ದು ಕೊಳ್ಳುತ್ತದೆ. ಆತ್ಮದಿಂದ ಬೇರೆಯಾಗಿ ಪ್ರಪಂಚವಿದೆಯೆಂಬ ವಿಶ್ವಾಸ ಬೇರೂರುತ್ತದೆ. ಇದನ್ನು ಆತ್ಮವಲ್ಲದ್ದು, ಅನಾತ್ಮ ಎಂದು ಕರೆಯಬಹುದು. ವಾಸ್ತವವಾಗಿ ಅನಾತ್ಮ ಎಂಬುದು ವ್ಯವಹಾರದ ಮಾತಷ್ಟೆ. ಆತ್ಮಕ್ಕೆ ಎದುರಾಗಿ ಬೇರೆಯಾಗಿ ಅನಾತ್ಮವೊಂದಿದೆ ಎಂದು ಬಗೆಯಬಾರದು. ಎಲ್ಲವೂ ಆತ್ಮವೇ ಎಂಬ ನಿಶ್ಚಯವಿರದಿದ್ದಾಗ, ದೇಹ, ಇಂದ್ರಿಯಗಳು, ಮನಸ್ಸು, ವಿಷಯಗಳು ಇವೆಲ್ಲ ಅನಾತ್ಮ. ಅನಾತ್ಮವನ್ನೇ ಆತ್ಮವೆಂದು ಬಗೆಯುವುದು, ಆತ್ಮದ ಅರಿವೇ ಇಲ್ಲದಿರುವುದು ಅಜ್ಞಾನ, ಅನ್ಯಥಾಜ್ಞಾನ, ವಿಪರೀತಜ್ಞಾನ. ಅವಿದ್ಯೆಯೆಂದರೂ ಇದೇ.

ಇದರಿಂದಲೇ ಪ್ರಪಂಚಭಾವ, ಜೀವಭಾವ ಒದಗಿಬರುವುದು; ಸಂಸಾರದ ಬಲೆ ಬೀಸಿ ನಮ್ಮನ್ನು ಸೆರೆಹಿಡಿಯುವುದು. ಎಡೆಬಿಡದೆ

ಸುಖ-ದುಃಖ, ಲಾಭ-ನಷ್ಟ, ಜಯಾಪಜಯ, ದುಗುಡ-ದುಮ್ಮಾನ, ಶಂಕಾತಂಕಗಳು ನಮ್ಮನ್ನು ಕಾಡುವುವು. ಆತ್ಮಕ್ಕೂ ಅನಾತ್ಮಕ್ಕೂ ಸೆಣಸಾಟವೇ ಏರ್ಪಟ್ಟು, ಬದುಕು ಒಂದು ರಣರಂಗವಾಗುವುದು. ಇದು ಸಟೆಯೆಂದು ಕಂಡುಕೊಂಡಾಗ, ಇರುವುದೆಲ್ಲ ಆತ್ಮವೇ, ಅನಾತ್ಮವೆಲ್ಲಿ ಬಂತು ಎಂಬ ತಿಳಿವಳಿಕೆ ಮೂಡುತ್ತದೆ. ಹೀಗೆ ಆದಾಗ ಅನಾತ್ಮವನ್ನು ಕೈಬಿಟ್ಟಂತೆ ಇದು ಅನಾತ್ಮತಾಪರಿತ್ಯಾಗ.

ಹೀಗೆ ಅವಧೂತನು ಆತ್ಮವನ್ನೇ ಹಿಡಿದು ಅನಾತ್ಮವೆಂಬ ತೋರಿಕೆಯನ್ನು ಪರಿತ್ಯಜಿಸಿದ ಮೇಲೆ (ಎಂದರೆ ಅದು ದಿಟವಾದುದಲ್ಲ, ಗಟ್ಟಿಯಾದುದಲ್ಲ ಎಂದು ನಿಶ್ಚಯಿಸಿಕೊಂಡಮೇಲೆ) ಜಗತ್ತು ಏನಾದರಿರಲಿ, ಎಂತಾದರಿರಲಿ, ಸುಖವಾಗಲಿ ದುಃಖವಾಗಲಿ, ತಾನು ಮಾತ್ರ ಯಾವ ವಿಕಾರವೂ ಇರದಂತೆ (ಎಂದರೆ ಉಬ್ಬುವುದು, ಕರುಬುವುದು, ಕಂಗಾಲಾಗುವುದು, ಕುಗ್ಗುವುದು ಮೊದಲಾಗಿ) ಏಕಸ್ಥಿತಿಯಲ್ಲೇ ಇರುವನು. ಇದು ಅವನ ಏಕನಿಷ್ಠೆ, ಆತ್ಮದಲ್ಲೇ ನಿಷ್ಠೆ, ಆತ್ಮದಲ್ಲೇ ನೆಲೆಗೊಳ್ಳುವಿಕೆ. ಇದರಿಂದಾಗಿ ಅವನ ಗಮನವು ಒಳಮುಖವಾಗುತ್ತದೆ. ಹೊರಗಣ ವಿಷಯಗಳಿಂದ ಮನಸ್ಸನ್ನು ಸೆಳೆದುಕೊಂಡು, ಆತ್ಮದೆಡೆಗೆ ಹೊರಳಿಸುವುದು ಅಂತರ್ಮುಖತೆ. ಆಗ ಅವನು ಪ್ರಪಂಚದಲ್ಲಿರುವವನಲ್ಲ. ತನ್ನೊಳಗೇ ಇದ್ದುಕೊಂಡವನು (ಅಂತಃಸ್ಥ). ಅರಿವು ಒಂದೇ ಅವನ ವಿಷಯ, ಅವನ ಮನಸ್ಸಿನೆದುರು ಇರುವುದು, ಅವನ ಗಮನವನ್ನೆಲ್ಲ ಸೆಳೆಯುವುದು.

ಮರಳುಗಾಡಿನಲ್ಲಿ ಬಿಸಿಲಿನ ಝಳಕ್ಕೆ ದೂರದಲ್ಲಿ ನೀರಿರುವಂತೆ ತೋರುತ್ತದೆ. ಬಾಯಾರಿದವನು ಅದು ನೀರೆಂದು ಭ್ರಮಿಸಿ ಅದರ ಹತ್ತಿರ ಹೋದಾಗ ಅದು ಬರಿಯ ಮರಳು, ನೀರಲ್ಲ ಎಂಬ ಅರಿವಾಗುತ್ತದೆ. ಕಾಣಿಸಿಕೊಂಡ ನೀರು ದಿಟವಾಗಿ ಮರಳೇ.

ವಿಚಾರಮಾಡಿ ನೋಡಿದಾಗ ನಮ್ಮೆದುರು ಅನಾತ್ಮದಂತೆ ಹರಡಿಕೊಂಡು ತೋರಿಕೊಳ್ಳುವ ಜಗತ್ತು ದಿಟವಾಗಿ ಬರಿಯ ಅರಿವು ಅಷ್ಟೆ ಎಂಬುದು ಸ್ಪಷ್ಟವಾಗುತ್ತದೆ.

**ಅಸಂಕಲ್ಪನಶಸ್ತ್ರೇಣ ಛಿನ್ನಂ ಚಿತ್ತಮಿದಂ ಯದಾ ।**
**ಸರ್ವಂ ಸರ್ವಗತಂ ಶಾಂತಂ ಬ್ರಹ್ಮ ಸಂಪದ್ಯತೇ ತದಾ ॥**
**ಪರಂ ಪೌರುಷಮಾಶ್ರಿತ್ಯ ನೀತ್ವಾ ಚಿತ್ತಮಚಿತ್ತತಾಂ ।**
**ಧ್ಯಾನತೋ ಹೃದಯಾಕಾಶೇ ಚಿತಿ ಚಿಚ್ಚಕ್ರಧಾರಯಾ ॥**

(೪.೯೧ ಮತ್ತು ೪.೯೩)

ಚಿತ್ತವೆಂಬುದು ಮರಳುಗಾಡಿನಲ್ಲಿ ನೀರನ್ನು ತೋರಿಸುವ ಸಾಧನ. ಮನಸ್ಸಿನ ಕಲ್ಪನೆಗಳ ಒಕ್ಕೂಟ ಅದು. ಆಕಾಶದಲ್ಲಿ ತುಂಡುತುಂಡಾದ ಮೋಡಗಳು ಗಾಳಿಯಿಂದ ತೂರಿಕೊಂಡು ತೇಲಿಹೋಗುವ ಹಾಗೆ ಕಲ್ಪನೆಯಿಂದ ಮನಸ್ಸೂ ತೂರಿಕೊಂಡು ತುಯ್ದಾಡುತ್ತದೆ (೪, ೯೬). ಹೀಗಿರುವ ಚಿತ್ತವನ್ನು ಕತ್ತರಿಸಲೂ ಉಪಾಯವೊಂದಿದೆ. ಕಲ್ಪನೆಗಳನ್ನು ಮಾಡಿಕೊಳ್ಳದೆ ಇರುವುದೇ ಚಿತ್ತವನ್ನು ತುಂಡರಿಸುವ ಆಯುಧ. ಇದು ಚಕ್ರಾಯುಧದಂತೆ ಎಲ್ಲವನ್ನೂ ಕತ್ತರಿಸುವುದು. ಹೀಗೆ ಚಿತ್ತವು ಕಡಿದುರುಳಿ ಬಿದ್ದ ಮೇಲೆ ಎಲ್ಲವೂ ಆಗಿದ್ದು ಎಲ್ಲೆಡೆಯೂ ಹರಡಿಕೊಂಡು, ಕದಲಲಾರದ ನೆಮ್ಮದಿಯಿಂದಿರುವ ಆತ್ಮ(ಬ್ರಹ್ಮ)ವನ್ನು ಪಡೆದುಕೊಂಡಂತಾಗುತ್ತದೆ. ಚಿತ್ತನಾಶವೇ ಆತ್ಮಪ್ರಾಪ್ತಿ; ಆತ್ಮಪ್ರಾಪ್ತಿಯೇ ಆತ್ಮಾನುಭವ. ಆತ್ಮಾನುಭವಕ್ಕೆ ಅಡ್ಡಿಯಾಗಿರುವುದು ಚಿತ್ತ (ಎಂದರೆ ಪ್ರಪಂಚಭಾವ). ಅನುಭವಕ್ಕೆ ಅಡ್ಡಿಯಾಗಿರುವುದನ್ನು ತೊಲಗಿಸಿಬಿಟ್ಟರೆ ಅನುಭವವೇ ತಾನೆ ?

ಚಿತ್ತವು ಅಚಿತ್ತವಾಗಬೇಕು. ಎಂದರೆ ಮನಸ್ಸು ತಾನು ಬಹಿರ್ಮುಖವಾಗಿರುವುದನ್ನು ಬಿಟ್ಟು ಅಂತರ್ಮುಖವಾಗಬೇಕು.

ಹೊರಗಣ ವಿಷಯಗಳಿಂದ ತನ್ನನ್ನು ತಾನು ಹಿಂದಿರುಗಿಸಿಕೊಂಡು ಆತ್ಮದತ್ತ ಹೊರಳಬೇಕು. ಆಗ ಚಿತ್ತವು ಅಚಿತ್ತವಾಯಿತು, ಚಿತ್ತ ಸ್ವಭಾವವನ್ನು ಕಳೆದುಕೊಂಡಿತು. ಇನ್ನು ಅದು ಚಿತ್ತವಲ್ಲ. ಪ್ರಪಂಚ ಭಾವವನ್ನು ಕಲ್ಪಿಸಿಕೊಳ್ಳುವುದು ಇನ್ನು ಅದರಿಂದಾಗದು. ಇದು ಸುಲಭವಾದದ್ದಲ್ಲ; ತುಂಬ ಕಷ್ಟಸಾಧ್ಯವಾದದ್ದು, ಇದನ್ನು ಕೈಗೂಡಿಸಿಕೊಳ್ಳಲು ಹೆಚ್ಚಿನ ಸಾಹಸ ಬೇಕು, ದೃಢವಾದ ನಿಷ್ಠೆ ಬೇಕು. ಸಾಧಕನು ತನ್ನ ಒಡಲ ಬಯಲಲ್ಲೇ, ಅರಿವಿನಲ್ಲೇ, ನಿಲ್ಲಲು ಚಿತ್ತವನ್ನು ಚಕ್ರಾಯುಧದ ಹರಿತವಾದ ಅಲುಗಿನಿಂದ ಕತ್ತರಿಸಬೇಕು. ಚಿತ್ತವನ್ನು ಅಚಿತ್ತವನ್ನಾಗಿ ಮಾಡುವುದೇ ಈ ಚಕ್ರಾಯುಧ. ಇದು ಧ್ಯಾನ (ನಿದಿಧ್ಯಾಸನ).

**ನ ಹಿ ಚಂಚಲತಾಹೀನಂ ಮನಃ ಕ್ವಚ ನ ದೃಶ್ಯತೇ ।**
**ಚಂಚಲತ್ವಂ ಮನೋಧರ್ಮೋ ವಹ್ನೇರ್ಧರ್ಮೋ ಯಥೋಷ್ಣತಾ ॥**

**ಏಷಾ ಹಿ ಚಂಚಲಾ ಸ್ಪಂದಶಕ್ತಿಶ್ಚಿತ್ತತ್ವಸಂಸ್ಥಿತಾ ।**
**ತಾಂ ವಿದ್ಧಿ ಮಾನಸೀಂ ಶಕ್ತಿಂ ಜಗದಾಡಂಬರಾತ್ಮಿಕಾಂ ॥**

**ಯತ್ತು ಚಂಚಲತಾಹೀನಂ ತನ್ಮನೋಽಮೃತಮುಚ್ಯತೇ ।**
**ತದೇವ ಚ ತಪಃ ಶಾಸ್ತ್ರಸಿದ್ಧಾಂತೇ ಮೋಕ್ಷ ಉಚ್ಯತೇ ॥**

**ತಸ್ಯ ಚಂಚಲತಾ ಯೈಷಾ ತ್ವವಿದ್ಯಾ ವಾಸನಾತ್ಮಿಕಾ ।**
**ವಾಸನಾಽಪರನಾಮ್ನೀಂ ತಾಂ ವಿಚಾರೇಣ ವಿನಾಶಯ ॥** (೪.೯೯ - ೧೦೨)

ಮನಸ್ಸೆಂದರೇ ಚಂಚಲತೆಗೆ ಇನ್ನೊಂದು ಹೆಸರು. ಮನಸ್ಸು ಒಂದೆಡೆ ಸ್ಥಿರವಾಗಿರುವ ಸ್ವಭಾವದ್ದಲ್ಲ, ಅಡಿಗಡಿಗೆ ಬದಲಾಗುತ್ತಿರುತ್ತಿದೆ. ಆಲೋಚನೆಗಳು ತೋರಿಕೊಂಡು ಒಡನೆಯೆ ಮರೆಯಾಗುತ್ತವೆ. ಸಂಕಲ್ಪ ಇದ್ದಂತೆ ಇರುವುದಿಲ್ಲ. ಒಂದೊಂದು ಗಳಿಗೆಯೂ ಬೇರೆ ಬೇರೆ

ಭಾವನೆಗಳು. ಸಮುದ್ರದಲ್ಲಿ ಅಲೆಗಳು ಎದ್ದಂತೆ, ದಡಕ್ಕೆ ಬಡಿದು ಹಿಂದಿರುಗುವಂತೆ, ಮನಸ್ಸಿನಿಂದ ಆಲೋಚನೆಗಳು ಎದ್ದು ಹೊರಗಣ ವಿಷಯಕ್ಕೆ ಬಡಿದು ಮತ್ತೆ ಮನಸ್ಸಿಗೇ ಹಿಂದಿರುಗುತ್ತವೆ. ಈ ಆಟಕ್ಕೆ ನಿಲುಗಡೆಯೇ ಇಲ್ಲ. ಇದನ್ನೇ ಚಂಚಲ, ಚಪಲ ಎನ್ನುವುದು.

ಈ ಬಗೆಯ ಚಂಚಲತೆಯಿಲ್ಲದಿರುವ ಮನಸ್ಸು ಎಲ್ಲಿಯೂ ಯಾರಿಗೂ ಇರದು. ಇಂಥ ಮನಸ್ಸನ್ನು ಯಾರೂ ಕಂಡರಿಯರು. ತಣ್ಣಗಿರುವ ಬೆಂಕಿಯನ್ನು ಯಾರು ನೋಡಿದ್ದಾರೆ ? ಚಂಚಲವಲ್ಲದ ಮನಸ್ಸು ಬಿಸಿಯಿಲ್ಲದ ಬೆಂಕಿಯಂತೆ. ಮನಸ್ಸು ಚಂಚಲವಾಗಿರುವುದು ಚಿತ್ತದಲ್ಲಿರುವ ಸ್ಪಂದಶಕ್ತಿಯ ದ್ಯೋತಕ. ಈ ಶಕ್ತಿಯಿಂದಲೇ ಜಗತ್ತು ಚಿತ್ರವಿಚಿತ್ರವಾಗಿ, ನಾಮರೂಪಾತ್ಮಕವಾಗಿ, ಭೋಗ್ಯಭಾವದಿಂದ ನಮ್ಮೆದುರು ತೋರಿಕೊಳ್ಳುವುದು. ಇದೊಂದು ಆಡಂಬರ. ಇದೇ ಒಂದು ನಾಟಕ.

ಮನಸ್ಸಿಗೆ ಈ ಚಂಚಲತೆಯ ಸ್ವಭಾವ ಹೋಗಿಬಿಟ್ಟಿತೆಂದರೆ ಅದು ಮುಕ್ತವಾದ ಮನಸ್ಸೇ. ಅದನ್ನೆ ಅಮೃತವೆನ್ನುವುದು. ಚಂಚಲತೆ ಹುಟ್ಟಿ-ಸಾಯುವ ಸ್ವಭಾವ; ಮರಣಶೀಲತೆ. ಅದಲ್ಲದ್ದು ಅಮೃತವೇ. ಸಾಯದೆ ಇರುವುದು, ಎಂದರೆ ಸ್ಥಿರವಾಗಿರುವುದು. ಇದನ್ನೇ ತಪಸ್ಸು ಎಂದೂ ಕರೆಯುತ್ತಾರೆ. ತಪಸ್ಸಿನಲ್ಲಿ ತೊಡಗಿದ ಮನಸ್ಸು ಏಕಾಗ್ರ ವಾದುದು, ಸ್ಥಿರವಾದುದು. ಶಾಸ್ತ್ರಗ್ರಂಥಗಳಲ್ಲಿ ಮೋಕ್ಷ ಎಂದು ಕಾಣಿಸುವುದು ಮನಸ್ಸಿನ ಮುಕ್ತಿಯನ್ನೇ, ಮನಸ್ಸು ತನ್ನ ಸ್ವಭಾವವಾದ ಚಾಂಚಲ್ಯದಿಂದ ಬಿಡುಗಡೆ ಹೊಂದಿರುವುದನ್ನೇ.

ಈ ಚಂಚಲತೆಯು ಅವಿದ್ಯೆಯ ವಾಸನೆಯ ರೂಪದ್ದು. ಅವಿದ್ಯೆಯೆಂದರೆ ತತ್ತ್ವವನ್ನು ಅರಿಯದಿರುವುದು; ಆತ್ಮವನ್ನು ಗಮನಿಸದೆ ಅನಾತ್ಮವನ್ನೇ ಹಿಡಿಯುವುದು, ಶರೀರಾದಿಗಳನ್ನೇ

ಆತ್ಮವೆಂದು ಬಗೆದು ವ್ಯವಹರಿಸುವುದು. ಇದು ದೇಹವಾಸನೆ - ಲೋಕವಾಸನೆಗಳಿಂದ ದೃಢವಾಗುತ್ತದೆ. ಚಂಚಲತೆಯ ಸ್ವಭಾವ ಸಿದ್ಧವಾಗುವುದು ಅವಿದ್ಯೆಯ ವಾಸನೆಯಿಂದಲೇ. ಅವಿದ್ಯೆ ಇರುವ ವರೆಗೂ ಚಂಚಲತೆ ತಪ್ಪಿದ್ದಲ್ಲ. ಈ ಅವಿದ್ಯಾವಾಸನೆಯನ್ನು ಹೋಗಲಾಡಿಸಿಕೊಳ್ಳುವ ಒಂದೇ ಉಪಾಯವೆಂದರೆ ವಿಚಾರ ಮಾಡು ವುದು. ಶಾಸ್ತ್ರದಿಂದ ಅರಿತುಕೊಂಡ ಆತ್ಮತತ್ತ್ವವನ್ನು ಯುಕ್ತಿಯಿಂದ ಕೈಗೂಡಿಸಿಗೊಳ್ಳುವುದನ್ನು ವಿಚಾರವೆನ್ನುತ್ತಾರೆ. ಇದೇ ಶ್ರವಣದ ನಂತರದ ಮನನ. ನಿದಿಧ್ಯಾಸಕ್ಕೆ ಹಿನ್ನೆಲೆ. ನಿದಿಧ್ಯಾಸವೆಂದರೆ ಆತ್ಮಾನು ಭವವೇ ಆಯಿತು.

**ಮನ ಏವ ಸಮರ್ಥಂ ಹಿ ಮನಸೋ ದೃಢನಿಗ್ರಹೇ ।**
**ಅರಾಜಕಃ ಸಮರ್ಥಃ ಸ್ಯಾದ್ರಾಜ್ಞೋ ನಿಗ್ರಹಕರ್ಮಣಿ ॥** (೪.೧೦೫)

**ಮನಸ್ಯೈವ ಮನಶ್ಛಿತ್ತ್ವಾ ಪಾಶಂ ಪರಮಬಂಧನಂ ।**
**ಭವಾದುತ್ತಾರಯಾತ್ಮಾನಂ ನಾಸಾವನ್ಯೇನ ತಾರ್ಯತೇ ॥** (೪.೧೦೭)

**ಭೋಗ್ಯೈಕವಾಸನಾಂ ತ್ಯಕ್ತ್ವಾ ತ್ಯಜ ತ್ವಂ ಭೇದವಾಸನಾಂ ।**
**ಭಾವಾಭಾವೌ ತತಸ್ತ್ಯಕ್ತ್ವಾ ನಿರ್ವಿಕಲ್ಪಃ ಸುಖೀಭವ ॥** (೪.೧೦೯)

**ಏಷ ಏವ ಮನೋನಾಶಸ್ತ್ವವಿದ್ಯಾನಾಶ ಏವ ಚ ।**
**ಯತ್ತತ್ಸಂವೇದ್ಯತೇ ಕಿಂಚಿತ್ ತತ್ರಾಸ್ಥಾಪರಿವರ್ಜನಂ ॥** (೪.೧೧೦)

ಮನಸ್ಸಿನ ಹುಟ್ಟಡಗಿಸುವುದಕ್ಕೆ ಮನಸ್ಸೇ ಸಮರ್ಥವಾದುದು. ಮನಸ್ಸಿನಿಂದಲೇ ಬಂಧನರೂಪವಾದ ಮನಸ್ಸನ್ನು ಕತ್ತರಿಸಿ ಹಾಕಬೇಕು. ಅದಕ್ಕಿಂತ ಹೆಚ್ಚಿನ ಬಂಧನವೆಂಬುದಿಲ್ಲ. ಈ ಬಂಧನವನ್ನು ಕಡಿಯಲು ಮನಸ್ಸನ್ನೆ ಬಳಸಿಕೊಳ್ಳಬೇಕು. ಬೇರೆ ದಾರಿಯಿರದು. ಮನಸ್ಸು

ಶುದ್ಧವಾಗಿರುವುದು ಅದರ ಸ್ವಭಾವ; ತಿಳಿಯಾಗಿ, ವ್ಯಾಪಕವಾಗಿದ್ದು ಕೊಂಡು ಆತ್ಮತತ್ತ್ವವನ್ನು ಬೆಳಗುವುದಕ್ಕೆಂದೇ ಮನಸ್ಸಿರುವುದು. ಆದರೆ ಅಜ್ಞಾನದಿಂದಾಗಿ ಸಂಕಲ್ಪಗಳಲ್ಲಿ ತೊಡಗಿ, ಹೊರಮುಖವಾಗಿ ಹರಿದು, ವಿಷಯಾಸಕ್ತಿಗಳಲ್ಲಿ ತನ್ನನ್ನು ತಾನು ಮರೆಯುತ್ತದೆ. ಇದು ಅಶುದ್ಧ ವಾದ ಮನಸ್ಸು, ರಾಗದ್ವೇಷಾದಿಗಳಿಂದ ಕಲುಷಿತವಾದ ಮನಸ್ಸು. ಇದೇ ಚಂಚಲವಾಗಿರುವುದು. ಅವಿದ್ಯೆಯ ವಾಸನೆ ಇಲ್ಲಿ ಕೆಲಸಮಾಡುತ್ತದೆ. ನಿಗ್ರಹಮಾಡಬೇಕಾಗಿರುವುದು ಈ ಮನಸ್ಸನ್ನು.

ಮನಸ್ಸಿಗೊಂದು ಶಕ್ತಿಯಿದೆ ಎನ್ನುವುದನ್ನು ಮರೆಯಬಾರದು. ಶುದ್ಧ ಮನಸ್ಸಿನ ಶಕ್ತಿಯನ್ನೇ ಬಳಸಿಕೊಂಡು ಅಶುದ್ಧ ಮನಸ್ಸನ್ನು ನಿಗ್ರಹಮಾಡಬೇಕು. ಬೇರೆ ಯಾವ ಸಾಧನದಿಂದಾಗಲಿ, ಇಂದ್ರಿಯ ನಿಗ್ರಹ, ವಿಷಯ ನಿವೃತ್ತಿ ಮೊದಲಾದ ಉಪಾಯಗಳಿಂದಾಗಲಿ, ಅಶುದ್ಧ ಮನಸ್ಸು ಶುದ್ಧವಾಗಲಾರದು. ಮನಸ್ಸಿನಿಂದ ಅದರ ಮೂಲ ಸ್ವರೂಪಕ್ಕೆ ವಿರುದ್ಧವಾದುದನ್ನು, ಹೊರಗಿನಿಂದ ಬಂದೆರಗಿದ ಕೊಳೆ ಗಳನ್ನು ತೊಲಗಿಸಿಕೊಂಡರೆ ಅದು ಶುದ್ಧವಾಗಿಯೆ ಉಳಿಯುತ್ತದೆ. ಇದನ್ನೇ ಮನೋನಾಶವೆನ್ನುತ್ತಾರೆ. ಅವಿದ್ಯಾನಾಶವೆಂದರೂ ಇದೇ.

ಸಂಸಾರವೆಂಬುದು ಸಾಗರವೆಂಬ ರೂಪಕ ಇದೆಯಷ್ಟೆ ? ಇದರಲ್ಲಿ ಬಿದ್ದು ಒದ್ದಾಡುತ್ತಿರುವ ಜೀವ ಈ ಸಾಗರವನ್ನು ದಾಟಿ ದಡ ಸೇರುವುದು ಹೇಗೆ ? ನಮಗಿರುವ ಒಂದೇ ಸಾಧನವೆಂದರೆ ಮನಸ್ಸು (ಚಿತ್ತ) ಎಂಬ ದೋಣಿ, ಅದನ್ನೇರಿಯೇ ಆಚೆ ದಡವನ್ನು ಮುಟ್ಟಬೇಕು. ದೋಣಿ ತೂತಾಗಬಾರದು, ಭಾರವಾಗಬಾರದು, ಮುರಿದು ಬಿರುಕಾಗಬಾರದು; ಗಾಳಿ ಬಂದಂತೆ ಅದು ಹರಿದು ಹೋಗಬಾರದು. ದೋಣಿ ನೀರಲ್ಲಿರಬೇಕೇ ವಿನಾ ದೋಣಿಯಲ್ಲಿ ನೀರು ತುಂಬಿಕೊಳ್ಳ ಬಾರದು. ಮನಸ್ಸು ಹೀಗೆ ಸಮರ್ಥವಾದ ದೋಣಿಯಾಗಬೇಕೆಂದರೆ

ತನ್ನ ಮೂಲರೂಪವನ್ನು ಉಳಿಸಿಕೊಳ್ಳಬೇಕು; ಇದೇ ಶುದ್ಧವಾದ ಮನಸ್ಸು. ನೀರೆಂದರೆ ಸಂಸಾರ, ಪ್ರಪಂಚಭಾವ. ಹೊರಗಣ ವಸ್ತುಗಳು ದಿಟವೆಂದು ನಂಬಿ ಅವುಗಳನ್ನಾಶ್ರಯಿಸಿಕೊಂಡಿರುವುದು. ಇದರ ಮೇಲೆ ಮನಸ್ಸು ತೇಲುವಂತಿರಬೇಕು. ಆದರೆ ಜೀವಭಾವದ ಒತ್ತಡದಲ್ಲಿ ಮನಸ್ಸು ಪ್ರಾಪಂಚಿಕಭಾವದಿಂದ ಭಾರವಾಗಿಬಿಡುತ್ತದೆ. ನೀರು ಅದರೊಳಗೆ ಧಾರಾಳವಾಗಿ ನುಗ್ಗಿಬಿಡುತ್ತದೆ. ತೇಲುವುದು ಸಾಧ್ಯವಿಲ್ಲದೆ ಮುಳುಗಿ ಹೋಗುತ್ತದೆ. ಜೀವ ಸಾಗರವನ್ನು ದಾಟುವುದಾದರೂ ಹೇಗೆ ?

ಅಶುದ್ಧವಾದ ಮನಸ್ಸು ಹೀಗೆ ಅನರ್ಥಕಾರಿಯಾದುದು. ಇದನ್ನು ಶುದ್ಧ ಮಾಡಿದರೇನೆ ಅದು ನಮ್ಮನ್ನು ಸಂಸಾರಸಾಗರದಿಂದ ದಾಟಿಸುತ್ತದೆ, ಎಂದರೆ ಪ್ರಪಂಚಭಾವದಿಂದ ಆತ್ಮತತ್ತ್ವಕ್ಕೆ ದಾಟಿಸುತ್ತದೆ. ಇದರ ಸಂವಿಧಾನ ಯಾವುದು ? ಮನಸ್ಸನ್ನು ವಿಕಲ್ಪ ಶೂನ್ಯ(ನಿರ್ವಿಕಲ್ಪ)ವಾಗಿ ಮಾಡುವುದು. ವಿಕಲ್ಪಗಳೇ ಮನಸ್ಸಿನ ಹೊರೆ; ಅದರ ಭಾರದಲ್ಲೇ ಅದು ಒಡೆಯುವುದು, ಬಿರುಕಾಗುವುದು, ಮುಳುಗುವುದು, ಮನಸ್ಸಿನ ಸ್ವಭಾವ ಸಂಕಲ್ಪನವೆಂಬುದನ್ನು ಕಂಡೆವು. ಸಂಕಲ್ಪಗಳಿಂದ ವ್ಯವಹಾರ. ವಿಕಲ್ಪವೆಂದರೆ ವಿಪರೀತವಾದ ಕಲ್ಪನೆ ; ರಾಗ, ದ್ವೇಷ ಮೊದಲಾದುವು. ಇವು ಮನಸ್ಸಿನಿಂದಲೆ ಹುಟ್ಟಿಕೊಂಡರೂ ಮನಸ್ಸನ್ನೆ ಇರಿದು ಕೊಲ್ಲುವಂಥವು; ಹುಟ್ಟಿದ ಮನೆಗೇ ಹಗೆಗಳು.

ವಿಕಲ್ಪಗಳಲ್ಲಿ ಮುಖ್ಯವಾದುದು ದೇಹವಾಸನೆ ಮತ್ತು ಲೋಕವಾಸನೆ. ಮೊದಲನೆಯದು, ದೇಹವಿರುವುದು ಹೊರಗಣ ವಿಷಯಗಳನ್ನು ಭೋಗಿಸುವುದಕ್ಕೇ ಎಂಬ ನಿಶ್ಚಯ. ಕಣ್ಣಿರುವುದು ರೂಪವನ್ನು ನೋಡುವುದಕ್ಕೆ, ಕಿವಿಯಿರುವುದು ಶಬ್ದಗಳನ್ನು ಕೇಳುವುದಕ್ಕೆ, ಹೀಗೆಯೇ ಇತರ ಇಂದ್ರಿಯಗಳೂ. ದೇಹದ ಪ್ರಯೋಜನವಿರುವುದು

ಭೋಗದಲ್ಲಷ್ಟೆ ಎಂಬ ಎಣಿಕೆ. ಎರಡನೆಯದು, ಒಳಗಿರುವ ಆತ್ಮವೇ ಬೇರೆ, ಹೊರಗಣ ಪ್ರಪಂಚವೇ ಬೇರೆ; ವ್ಯವಹಾರವೆಂದರೆ ಇವರೆಡರ ಪಾತ್ರವೂ ಇವೆ ಎಂಬ ಕಲ್ಪನೆ. ಹೊರಗಿನ ಪ್ರಪಂಚ ದೃಶ್ಯವಾದರೆ ಒಳಗಿನ ಆತ್ಮ ದ್ರಷ್ಟೃ. ದ್ರಷ್ಟೃವಿನಲ್ಲಿ ಆತ್ಮ, ಜೀವ, ದೇಹ, ಇಂದ್ರಿಯಗಳು, ಮನಸ್ಸು, ನಾನೆಂಬ ಭಾವನೆ ಇವೆಲ್ಲ ಬೇರೆ ಬೇರೆ ವಿವರಗಳು. ದೃಶ್ಯದಲ್ಲಂತೂ ಅನಂತಭೇದ ಇದ್ದದ್ದೇ. ಹೀಗೆ, ಎಲ್ಲವೂ ಆತ್ಮವೇ, ಆತ್ಮವೊಂದೇ ಇರುವುದು ಎಂಬ ನಿಲುವು ಇಲ್ಲಿ ಬರಲೊಲ್ಲದು. ಇದು ಭೇದವಾಸನೆ.

ಇವೆರಡನ್ನೂ ಬಿಟ್ಟರೆ ಮನಸ್ಸು ಶುದ್ಧವಾದೀತು. ಇವೆರಡು ವಾಸನೆಗಳು ಇರುವವರೆಗೆ ವಿಕಲ್ಪಗಳು ಮನಸ್ಸಿನಿಂದ ತೊಲಗಲಾರವು. ಇವು ಮರೆಯಾದರೆ ಭಾವ (ಇರುವುದು), ಅಭಾವ (ಇರದಿರುವುದು) ಎಂಬ ಭೇದವೂ ಅಳಿಯುತ್ತದೆ. ದೇಹವೇ ಇರುವುದು, ಆತ್ಮ ಇರದು ಎಂಬ ದೃಢ ಸಂಕಲ್ಪವಿದ್ದಾಗ ಪ್ರಪಂಚನಿಶ್ಚಯ. ಆತ್ಮವೊಂದೇ ಇರುವುದು, ಅದನ್ನು ಬಿಟ್ಟು ಬೇರೆ ಯಾವುದೂ ಇರದು ಎಂಬುದು ತತ್ತ್ವನಿಶ್ಚಯ. ಇವೆರಡು ನಿಶ್ಚಯಗಳಲ್ಲಿ ಸಾಮಾನ್ಯವಾಗಿ ಮನುಷ್ಯ ಹಿಡಿಯುವುದು ಪ್ರಪಂಚನಿಶ್ಚಯವನ್ನೇ. ಇದರಲ್ಲೇ ಭಾವ, ಅಭಾವಗಳ ಎಣಿಕೆ. ಇರುವುದನ್ನು ಭೋಗಿಸುವುದು, ಇರದುದನ್ನು ಬಯಸುವುದು. ಇರುವುದು, ಇರದಿರುವುದು ಎರಡೂ ಪ್ರಪಂಚದಲ್ಲಿಯೇ. ಆತ್ಮವಾದರೆ ಭಾವವೂ ಅಲ್ಲ, ಅಭಾವವೂ ಅಲ್ಲ.

ಭಾವವೆಂದರೆ ನೋಡಲಾಗುವುದು, ಕೇಳಲಾಗುವುದು; ಇಂದ್ರಿಯ ಪ್ರತ್ಯಕ್ಷದಿಂದ ಸಿದ್ಧವಾದರೇನೆ ಇರುವುದು. ಆತ್ಮ ಹೀಗೆ ಇಂದ್ರಿಯ ಗೋಚರವಲ್ಲ; ನಾಮರೂಪಾದಿಗಳಿಂದ ಕೂಡಿಲ್ಲ. ಆದ್ದರಿಂದ ಅದನ್ನು ಭಾವವೆನ್ನುವ ಹಾಗಿಲ್ಲ. ಹಾಗೆಂದರೆ ಅದು ಅಭಾವವೆಂದೂ ಅಲ್ಲ.

ತಾನಿರುವ (ಆತ್ಮವಿರುವ) ಅನುಭವ ಯಾರಿಗಿಲ್ಲ? ಎಲ್ಲರ ಎಲ್ಲ ಅನುಭವಕ್ಕೂ ಅದು ಆಧಾರವೇ ಅಲ್ಲವೆ ? ಹೀಗೆ ಆತ್ಮವು ಭಾವವೂ ಅಲ್ಲ, ಅಭಾವವೂ ಅಲ್ಲ. ಅದು ಭಾವ ಅಥವಾ ಅಭಾವ ಎಂದು ಏಕಾಂತವಾಗಿ ಹಟಹಿಡಿಯುವ ಹಾಗಿಲ್ಲ. ಹಾಗೆ ಹಟಹಿಡಿದರೆ ಅದು ವಿಕಲ್ಪ. ಹಟ ಹಿಡಿಯದಿರುವುದು ನಿರ್ವಿಕಲ್ಪ. ವಿಕಲ್ಪಗಳಿಲ್ಲದಿದ್ದಾಗ ಉದ್ವೇಗವಿಲ್ಲ, ಅದು ಸುಖವೇ.

ಯಾವುದನ್ನು ಇಂದ್ರಿಯಗಳಿಂದ, ಮನಸ್ಸಿನಿಂದ, ತಿಳಿದರೂ ಅದರಲ್ಲಿ ಆಸ್ಥೆಯನ್ನು (ಅತಿಯಾದ ಆಸಕ್ತಿಯನ್ನು) ತಳೆಯದಿರುವುದು ವಿಕಲ್ಪಗಳ ಅವಸಾನ. ಇದನ್ನೇ ಮನೋನಾಶವೆಂದು ಕರೆದಿದ್ದಾರೆ.

**ಇಚ್ಛಾಮಾತ್ರಂ ಅವಿದ್ಯೇಯಂ ತನ್ನಾಶೋ ಮೋಕ್ಷ ಉಚ್ಯತೇ ।**
**ಸ ಚಾಸಂಕಲ್ಪಮಾತ್ರೇಣ ಸಿದ್ಧೋ ಭವತಿ ವೈ ಮುನೇ ॥** (೪.೧೧೬)

**ಪರಂ ಪೌರುಷಮಾಶ್ರಿತ್ಯ ಯತ್ನಾತ್ ಪರಮಯಾ ಧಿಯಾ ।**
**ಭೋಗೇಚ್ಛಾಂ ದೂರತಸ್ತ್ಯಕ್ತ್ವಾ ನಿರ್ವಿಕಲ್ಪಃ ಸುಖೀ ಭವ ॥** (೪.೧೨೪)

ನಮ್ಮ ಬಯಕೆಗಳೇ ಅವಿದ್ಯೆ (ಅಜ್ಞಾನ) ಎನಿಸಿಕೊಳ್ಳುತ್ತದೆ. ಅವುಗಳನ್ನು ನೀಗಿಸಿಕೊಳ್ಳುವುದೇ ಮುಕ್ತಿ. ಅವಿದ್ಯೆಯೆಂದರೇನು ? ತಾನು ಆತ್ಮ ಎಂಬುದನ್ನು ಮರೆಮಾಚಿ ನಾನು ದೇಹಾದಿಗಳು, ಪ್ರಪಂಚದ ವಿಷಯಗಳು ನನ್ನವು, ಪ್ರಪಂಚವಿರುವುದು ನನ್ನ ಭೋಗಕ್ಕೆ, ಪ್ರಪಂಚದಿಂದಲೇ ನನ್ನ ಸುಖ ಎಂದು ಮುಂತಾಗಿ ಅಂದುಕೊಳ್ಳುವುದು ಪ್ರಪಂಚಭಾವ. ಇದಿರುವಾಗ ತಾನೆ ನಾವು 'ಅದು ಬೇಕು', 'ಇದು ಬೇಕು', ಎಂದು ಬಯಸುವುದು ? ಅವಿದ್ಯೆಯಿಲ್ಲದೆ ಬಯಕೆಗಳಿಲ್ಲ; ಬಯಕೆಗಳಿಲ್ಲದೆ ಅವಿದ್ಯೆಯಿಲ್ಲ.

ಅವಿದ್ಯೆಯೆನ್ನುವುದೇ ಬಂಧನ. ಅವಿದ್ಯೆಯಿಂದ ಪ್ರಪಂಚಭಾವ ಮೂಡಿಕೊಳ್ಳುತ್ತದೆ. ಮನಸ್ಸು ಹೊರಗಣ ವಿಷಯಗಳತ್ತ ಹರಿದು ಅವುಗಳನ್ನು ಪಡೆದುಕೊಳ್ಳುವ ಹವಣಿಕೆಯಲ್ಲಿ ತೊಡಗುತ್ತದೆ. ತನ್ನತನವನ್ನು ಕಳೆದುಕೊಂಡು ವಿಷಯಗಳಿಗೆ ವಶವಾಗುತ್ತದೆ. ಇದು ಬಂಧನವಲ್ಲದೆ ಮತ್ತೇನು ? ದಿಟವಾಗಿ ಇದನ್ನೇ ಬಂಧನವೆನ್ನುವುದು. ನಮ್ಮ ಬಯಕೆಗಳೇ ನಮ್ಮನ್ನು ಬಂಧಿಸುವುದು.

ಆತ್ಮವು ಪರಿಪೂರ್ಣ, ಆನಂದಸ್ವರೂಪ, ಏಕಮಾತ್ರಸತ್ಯ ಎಂಬುದು ನಿಶ್ಚಯವಾದರೆ ಯಾರು ಯಾವುದನ್ನು ಯಾಕೆ ಬಯಸುತ್ತಾರೆ ? ಆತ್ಮದ ಅನುಭವದಲ್ಲಿ ದೊರೆಯುವ ಆನಂದ ಬೇರೆಲ್ಲಿ ದೊರೆತೀತು ? ಯಾವ ಸುಖ ಅದಕ್ಕೆ ಎಣೆಯಾದೀತು ? ಬಯಕೆಗಳೆಲ್ಲ ಹಾರಿ ಹೋಗುತ್ತವೆ ; ಪ್ರಪಂಚಭಾವ ಕಣ್ಮರೆಯಾಗುತ್ತದೆ. ಇದು ತಾನೆ ಮೋಕ್ಷ ? ಬಿಡುಗಡೆ ?

ಬಯಸದಿದ್ದರೆ ಆಯಿತು, ಮನಸ್ಸು ಕಲ್ಪನೆಗಳನ್ನು ಮಾಡಿಕೊಳ್ಳದಿದ್ದರೆ ಆಯಿತು, ಅವನು ಸಿದ್ಧಪುರುಷನೇ, ಜೀವನ್ಮುಕ್ತನೇ. ಇಂಥವನೇ ಅವಧೂತ. ಪ್ರಪಂಚದ ವಿಷಯಗಳನ್ನು ಭೋಗಿಸಬೇಕು ಎಂಬ ಬಯಕೆಯನ್ನು ದೂರಮಾಡಬೇಕು. ಮನಸ್ಸು ಸಂಕಲ್ಪ-ವಿಕಲ್ಪಗಳನ್ನು ಮಾಡಿಕೊಳ್ಳದೆ ಸುಮ್ಮನಿರಬೇಕು (ನಿರ್ವಿಕಲ್ಪ ಸ್ಥಿತಿಯಲ್ಲಿ). ಆಗ ಆತ್ಮದ ಆನಂದ (ದಿಟವಾಗಿ ಆತ್ಮವೇ ಆನಂದ) ಕೈಗೆಟಕುತ್ತದೆ. ಆದರೆ ಇದೇನು ಸುಲಭದ ಮಾತಲ್ಲ. ಹೆಚ್ಚಿನ ಸಾಹಸದ ಅಗತ್ಯವಿದೆ. ಮನಸ್ಸನ್ನು ಆತ್ಮದಲ್ಲಿ ನೆಲೆಗೊಳಿಸುವ ಪ್ರಯತ್ನವನ್ನು ಎಡೆಬಿಡದೆ ಮಾಡಬೇಕು.

(ಈ)

**ಅರ್ಥಾದರ್ಥಾಂತರಂ ಚಿತ್ತೇ ಯಾತಿ ಮಧ್ಯೇ ತು ಯಾ ಸ್ಥಿತಿಃ ।**
**ಸಾ ಧ್ವಸ್ತಮನನಾಕಾರಾ ಸ್ವರೂಪಸ್ಥಿತಿರುಚ್ಯತೇ ॥**
**ಸಂಶಾಂತಸರ್ವಸಂಕಲ್ಪಾ ಯಾ ಶಿಲಾವದವಸ್ಥಿತಿಃ ।**
**ಜಾಗ್ರನ್ನಿದ್ರಾವಿನಿರ್ಮುಕ್ತಾ ಸಾ ಸ್ವರೂಪಸ್ಥಿತಿಃ ಪರಾ ॥** (೫, ೫-೬)

ಮನಸ್ಸು ಒಂದು ವಿಷಯವನ್ನು ಕುರಿತು ಆಲೋಚಿಸುತ್ತದೆ; ತರುವಾಯ, ಮರುಗಳಿಗೆಯಲ್ಲೇ ಇನ್ನೊಂದು ವಿಷಯವನ್ನು ಆಲೋಚನೆಗೆ ಎತ್ತಿಕೊಳ್ಳುತ್ತದೆ. ಈ ಎರಡು ಆಲೋಚನೆಗಳ ನಡುವೆ, ಆಲೋಚನೆಯನ್ನೆ ಮಾಡದಂಥ ಒಂದು ಸ್ಥಿತಿ ಮನಸ್ಸಿನಲ್ಲಿರುವುದಲ್ಲಾ, ಅದೇ ಮನಸ್ಸಿನ ಸ್ವರೂಪ ಎಂದು ಹೇಳುತ್ತಾರೆ. ಎರಡು ಸಂಕಲ್ಪಗಳ ನಡುವೆ ಸಂಕಲ್ಪಶೂನ್ಯವಾಗಿರುವ ವಿಶ್ರಾಂತಿಸ್ಥಿತಿ. ಅಲ್ಲಿ ಯಾವ ಆಲೋಚನೆಯೂ ಇರುವುದಿಲ್ಲ, ಸಂಕಲ್ಪವೂ ಇರುವುದಿಲ್ಲ, ವಿಕಲ್ಪವೂ ಇರುವುದಿಲ್ಲ. ಕಲ್ಲಿನಂತೆ ಜಡವಾದ ಸ್ಥಿತಿ ಅದು.

ಅದರಲ್ಲಿ ಎಚ್ಚರವೂ ಇರದು, ನಿದ್ರೆಯೂ ಇರದು. ಎಚ್ಚರವೆಂದರೆ ಇಂದ್ರಿಯಗಳ ವ್ಯಾಪಾರವಿದ್ದು ಮನಸ್ಸು ಇಂದ್ರಿಯಗಳೊಂದಿಗೆ ಸೇರಿಕೊಂಡು ಸಂಕಲ್ಪ ವಿಕಲ್ಪಗಳನ್ನು ಮಾಡಿಕೊಳ್ಳುವ ಸ್ಥಿತಿ. ನಿದ್ರೆಯಲ್ಲಿ ಇಂದ್ರಿಯ ವ್ಯಾಪಾರವಾಗಲಿ ಮನಸ್ಸಿನ ವೃತ್ತಿಯಾಗಲಿ ಇರದೆ ಇದ್ದರೂ ಮನಸ್ಸನ್ನು ತಮಸ್ಸು ಆವರಿಸಿಕೊಂಡಿರುತ್ತದೆ. ಇದು ಮನಸ್ಸಿನ ಸಹಜಸ್ಥಿತಿಯೂ ಅಲ್ಲ, ಸ್ವರೂಪವೂ ಅಲ್ಲ.

ಎರಡು ಆಲೋಚನೆಗಳ ನಡುವೆ ಇರುವ ಸಂಕಲ್ಪ ಶೂನ್ಯ ಸ್ಥಿತಿಯಲ್ಲಿ ಎಚ್ಚರವೂ ಇಲ್ಲ, ಎಂದರೆ ರಜೋಗುಣ ಅಲ್ಲಿ ಇಲ್ಲ. ನಿದ್ರೆಯೂ ಇಲ್ಲ, ಎಂದಾಗ ತಮಸ್ಸಾಗಲಿ ಅಲ್ಲಿ ಇಲ್ಲ ಎಂದರ್ಥ.

ಸತ್ತ್ವಗುಣ ಮಾತ್ರ ಇದೆ. ಈ ಕಾರಣದಿಂದಲೇ ಮನಸ್ಸನ್ನು ಸತ್ತ್ವ ಎನ್ನುವುದು. ಸಹಜವಾದ ಮನಸ್ಸು ಸತ್ತ್ವವೇ, ಶುದ್ಧಸತ್ತ್ವ; ಅದೇ ಅದರ ಸ್ವರೂಪ, ಅದೇ ಸಹಜಸ್ಥಿತಿ. ರಜಸ್ಸು, ತಮಸ್ಸು ಅದನ್ನಾವರಿಸಿಕೊಂಡರೆ ಮನಸ್ಸು ಕಲುಷಿತವಾಯಿತು, ವಿಕೃತವಾಯಿತು, ಸುಖದುಃಖಗಳಿಗೆ ವಶವಾಯಿತು. ರಜಸ್ಸೇ ಚಂಚಲತೆಗೆ ಕಾರಣ; ತಮಸ್ಸು ಮೋಹಕ್ಕೆ, ಅಜ್ಞಾನಕ್ಕೆ.

**ಏಕಂ ಬ್ರಹ್ಮ ಚಿದಾಕಾಶಂ ಸರ್ವಾತ್ಮಕಮಖಂಡಿತಂ ।**
**ಇತಿ ಭಾವಯ ಯತ್ನೇನ ಚೇತಶ್ಚಾಂಚಲ್ಯಶಾಂತಯೇ ॥** (೫, ೫೬)

ರಜೋಗುಣದ ಹೆಚ್ಚಳದಿಂದ, ಒತ್ತಡದಿಂದ ಮನಸ್ಸಿಗೆ ಒದಗುವ ಚಂಚಲತೆಯನ್ನು ಹತ್ತಿಕ್ಕಲು ನಾವು ಮಾಡಬೇಕಾದುದು ಆತ್ಮಧ್ಯಾನ. ಆತ್ಮ ಒಂದೇ ದಿಟವಾಗಿ ಇರುವುದು, ಎಲ್ಲವೂ ಅದೇ ಆಗಿರುವುದು, ಅದರಲ್ಲಿ ಖಂಡತುಂಡಾಗುವ ವಿವರಗಳೊಂದೂ ಇರವು, ಅದು ಅಖಂಡವಾದುದು; ಹೀಗೆಂದು ಭಾವಿಸಿಕೊಳ್ಳಬೇಕು. ಆತ್ಮವೇ ಬ್ರಹ್ಮ, ಎಂದರೆ ಎಲ್ಲೆಡೆಯೂ ಬೆಳೆದು ಹರಡಿಕೊಂಡಿರುವುದು (ಬೃಹ್ ಧಾತುವಿನಿಂದ), ಎಲ್ಲವೂ ತಾನಾಗಿರುವುದು, ತಾನೇ ಎಲ್ಲವೂ ಆಗಿರುವುದು (ಬೃಂಹಣ). ಇದರ ಸ್ವರೂಪ ಅರಿವಿನ ಆಕಾಶ. ಆಕಾಶವೆಂದರೆ ನಿರಾಕಾರ, ನಿರ್ಗುಣ, ನಿರ್ಲೇಪ, ವ್ಯಾಪಕ ; ಬೆಳಗುವ ಲಕ್ಷಣ ಅದರದ್ದು (ಕಾಶ್ ಧಾತು).

ಆಕಾಶ, ಚಿತ್ತಾಕಾಶ, ಚಿದಾಕಾಶ ಎಂದು ಮೂರು ತೆರನಾಗಿ ಎಣಿಕೆ ಮಾಡುವುದಿದೆ (೪.೫೮). ಆಕಾಶವೆಂದರೆ ಭೂತಾಕಾಶ, ಪಂಚ ಭೂತಗಳಲ್ಲಿ ಒಂದು. ಇಡೀ ಜಗತ್ತು ಇದರ ಆಸರೆಯ ಮೇಲೆ ನಿಂತಿದೆ. ಅರೂಪದ್ರವ್ಯ, ಗುಣರಹಿತ, ಅತ್ಯಂತಸೂಕ್ಷ್ಮ, ಇಂದ್ರಿಯಗಳಿಂದ ಅಗ್ರಾಹ್ಯ, ಆದರೆ ಎಲ್ಲ ಪದಾರ್ಥಗಳಿಗೂ ಅವಕಾಶಪ್ರದ. ಎಲ್ಲೆಲ್ಲೂ

ವ್ಯಾಪಿಸಿಕೊಂಡಿದೆ. ಚಿತ್ತಾಕಾಶ ಮನಸ್ಸಿನದು. ಆಲೋಚನೆಗಳಿಗೆ, ಸಂಕಲ್ಪ-ವಿಕಲ್ಪಗಳಿಗೆ ಇದೇ ಆಸರೆ. ಇದಕ್ಕೂ ಆಕಾಶದ ಗುಣಗಳೇ ಇದ್ದರೂ ಮೇಲೆ ಹೇಳಿದಂತೆ ಎರಡು ಆಲೋಚನೆಗಳ ನಡುವೆ ಇರುವ ಅವಕಾಶವನ್ನು ಧ್ಯಾನದಿಂದ ಗುರುತಿಸುವುದಾದೀತು. ಎಲ್ಲ ಆಲೋಚನೆ ಗಳೂ ಚಿತ್ತಾಕಾಶದಲ್ಲೇ ಇರುವುವು, ಚಿತ್ತಾಕಾಶದಿಂದಲೇ ಎದ್ದು ನಿಲ್ಲುವುವು, ಚಿತ್ತಾಕಾಶದಲ್ಲೇ ಮರೆಯಾಗುವುವು. ಚಿದಾಕಾಶವು ಇನ್ನೂ ಸೂಕ್ಷ್ಮವಾದುದು. ಅದು ಬರಿಯ ಅರಿವು; ಅದರಲ್ಲಿ ಯಾವುದೂ ಇರುವ, ಏಳುವ, ಅಳಿಯುವ ವಿಚಾರವೇ ಇಲ್ಲ. ಚಿದಾಕಾಶವನ್ನೇ ಪರಬ್ರಹ್ಮ, ಪರಮಾತ್ಮಾ (ಪರಂ ಆತ್ಮಾ) ಎನ್ನುತ್ತಾರೆ. ಇಲ್ಲಿ ಬ್ರಹ್ಮ ಎಂದಿರುವುದು ಇದನ್ನೇ.

ಚಿತ್ತಾಕಾಶವನ್ನು ಬೇಕಾದರೆ ಸಗುಣಬ್ರಹ್ಮ ಎನ್ನಿ, ಆಗ ಚಿದಾಕಾಶ ವನ್ನು ನಿರ್ಗುಣಬ್ರಹ್ಮ ಎನ್ನಬೇಕಾಗುತ್ತದೆ. ಚಿತ್ತಾಕಾಶವು ಜೀವಭಾವಕ್ಕೆ ಮೂಲದ್ರವ್ಯ; ಅದು ಒಬ್ಬೊಬ್ಬರಲ್ಲೂ ಅನುಭವಕ್ಕೆ ಬರುವ ಆತ್ಮ. ಇದನ್ನೇ ಹೃದಯ, ಹಾರ್ದಾಕಾಶ, ಒಡಲಲ್ಲಿರುವ ಬಯಲು ಎಂದು ಕರೆಯುತ್ತಾರೆ. ಒಬ್ಬೊಬ್ಬರಲ್ಲೂ 'ನಾನು' ಎಂದು ಸ್ಫುರಿಸುವ ಅನಿಸಿಕೆ (ಅಸ್ಮತ್ ಪ್ರತ್ಯಯ, ಅಹಂ ಪ್ರತೀತಿ, ಅಹಂ ಪದಾರ್ಥ, ಅಹಮಿಕೆ) ಇಲ್ಲಿಂದಲೇ ಹೊರಹೊಮ್ಮುವುದು. ಉಪದೇಶವಾಕ್ಯವಾದ 'ನೀನು ಅದಾಗಿರುವೆ' (ತತ್‌ತ್ವಂ ಅಸಿ) ಎನ್ನುವಲ್ಲಿ 'ನೀನು' ಎಂಬ ಪ್ರತ್ಯಯ (ತ್ವಂ ಪದಾರ್ಥ, ಯುಷ್ಮತ್ ಪ್ರತ್ಯಯ) ಸೂಚಿಸುವುದು ಇದನ್ನೇ. ಅನುಭವವಾಕ್ಯವಾದ 'ಅಹಂ ಬ್ರಹ್ಮಾಸ್ಮಿ' ಎನ್ನುವಾಗ ಬ್ರಹ್ಮ, ಉಪದೇಶವಾಕ್ಯವಾದ 'ತತ್‌ತ್ವಂ ಅಸಿ' ಎನ್ನುವಾಗ 'ತತ್' (ಅದು) ಎರಡೂ ಚಿದಾಕಾಶವನ್ನೇ ಹೇಳುವುವು. 'ತತ್', 'ಅದು', ಎಂದರೆ ಚಿತ್ತಾಕಾಶದ ಆಚೆ ಇರುವುದು. ಅದನ್ನು 'ಏತತ್', 'ಇದು' ಎಂದು ಹೇಳಲಿಲ್ಲ. 'ತ್ವಂ' ಎಂದರೆ ಹತ್ತಿರ ಇರುವ 'ನೀನು', ಎಂದರೆ

ಚಿತ್ತಾಕಾಶವೇ. 'ಆತ್ಮಾ ಚ ಬ್ರಹ್ಮ' ಎನ್ನುವ ವೇದಾಂತದ ಮಾತಿನಲ್ಲಿ ಆತ್ಮವೆಂದರೆ ಚಿತ್ತಾಕಾಶ, ಬ್ರಹ್ಮವೆಂದರೆ ಚಿದಾಕಾಶ.

ಇದೇ ಉಪನಿಷತ್ತಿನಲ್ಲಿ ಬರುವ ವಿವರಣೆ (೪.೫೮-೬೦)

**ಚಿತ್ತಾಕಾಶಂ ಚಿದಾಕಾಶಮಾಕಾಶಂ ಚ ತೃತೀಯಕಂ ।**
**ದ್ವಾಭ್ಯಾಂ ಶೂನ್ಯತರಂ ವಿದ್ಧಿ ಚಿದಾಕಾಶಂ ಮಹಾಮುನೇ ॥**

**ದೇಶಾದ್ದೇಶಾಂತರಪ್ರಾಪ್ತೌ ಸಂವಿದೋ ಮಧ್ಯಮೇವ ಯತ್ ।**
**ನಿಮೇಷೇಣ ಚಿದಾಕಾಶಂ ತದ್ವಿದ್ಧಿ ಮುನಿಪುಂಗವ ॥**

**ತಸ್ಮಿನ್ನಿರಸ್ತನಿಃಶೇಷಸಂಕಲ್ಪಸ್ಥಿತಿಮೇಷಿ ಚೇತ್ ।**
**ಸರ್ವಾತ್ಮಕಂ ಪದಂ ಶಾಂತಂ ತದಾ ಪ್ರಾಪ್ನೋಷ್ಯಸಂಶಯಃ ॥**

ಚಿತ್ತಾಕಾಶ, ಚಿದಾಕಾಶ, ಆಕಾಶ ಎಂಬುವು ಮೂರು. ಆಕಾಶ ಮತ್ತು ಚಿತ್ತಾಕಾಶಗಳಿಗಿಂತ ಸೂಕ್ಷ್ಮವಾದದ್ದು ಚಿದಾಕಾಶ. ಇಲ್ಲಿ ಮೊದಲು ಚಿತ್ತಾಕಾಶವನ್ನು ಹೇಳಿ ಅನಂತರ ಮೂರನೆಯದಾಗಿ ಆಕಾಶವನ್ನು ಹೇಳಿ, ನಡುವೆ ಚಿದಾಕಾಶವನ್ನು ಹೇಳಿರುವುದನ್ನು ಗಮನಿಸಬೇಕು. ಸೂಕ್ಷ್ಮತೆಯ ಕ್ರಮವನ್ನೇ ಹಿಡಿದರೆ ಆಕಾಶ, ಚಿತ್ತಾಕಾಶ, ಚಿದಾಕಾಶ ಎಂದಾಗಬೇಕು.

ಆಕಾಶ ಪಂಚ ಭೂತಗಳಲ್ಲೆಲ್ಲ ಸೂಕ್ಷ್ಮವಾದುದು. ಚಿತ್ತಾಕಾಶ ಅದಕ್ಕಿಂತ ಸೂಕ್ಷ್ಮ, ಸೂಕ್ಷ್ಮತರ. ಅದಕ್ಕಿಂತಲೂ ಚಿದಾಕಾಶ ಇನ್ನೂ ಸೂಕ್ಷ್ಮ, ಸೂಕ್ಷ್ಮತಮ.

ಆದರೆ ಇಲ್ಲಿನ ವಿವರಣೆಯಲ್ಲಿ ಚಿದಾಕಾಶವನ್ನು ಅನುಭವಕ್ಕೆ ತಂದುಕೊಳ್ಳುವ ವಿಚಾರವನ್ನು ಹೇಳಲಾಗಿದೆ. ದೇಶದಿಂದ ದೇಶಕ್ಕೆ ಸಲ್ಲುವಾಗ, ದೇಶ-ದೇಶಗಳ ನಡುವೆ ಇರುವ ಅರಿವು ಚಿದಾಕಾಶ ಎಂಬ

ಮಾತು ಇಲ್ಲಿ ಬಂದಿದೆ. ದೇಶವೆಂದರೆ ಸ್ಥಳವೆಂಬರ್ಥ ಇಲ್ಲಿ ಹೊಂದುವುದಿಲ್ಲ. ಯಾವುದನ್ನು ನಾವು ನಿರ್ದೇಶಿಸಬಹುದೋ, ಗುರುತಿಸಬಹುದೋ, ಇದು ಎಂದು ಹೇಳಬಹುದೋ ಅದು ದೇಶ (ದಿಶ್ ಧಾತು, ನಿರ್ದಿಶ್ಯತೇ) ಎಂಬುದು ಮೂಲಾರ್ಥ. ಪ್ರಕರಣದಲ್ಲಿ ಸಂಕಲ್ಪಗಳ ವಿಚಾರ ಬಂದಿದೆ. ಒಂದೊಂದು ಸಂಕಲ್ಪವೂ (ಎಂದರೆ ಆಲೋಚನೆಯೂ, ಅನಿಸಿಕೆಯೂ) ಒಂದೊಂದು ದೇಶ. ಒಂದು ಸಂಕಲ್ಪದಿಂದ ಇನ್ನೊಂದು ಸಂಕಲ್ಪಕ್ಕೆ ಜಾರುವಾಗ, ನಡುವೆ ಇರುವ ಅರಿವು (ಸಂವಿತ್) ನಿರ್ದೇಶಕ್ಕೆ ಸಿಗುವುದಲ್ಲ; ಅದನ್ನು ದೇಶವೆನ್ನುವ ಹಾಗಿಲ್ಲ. ಅಲ್ಲಿ ಯಾವ ಸಂಕಲ್ಪವೂ ಇರಲಾರದು; ಅದನ್ನು ನಿರ್ವಿಕಲ್ಪವೆನ್ನಬಹುದು.

ಯಾವೊಂದು ಸಂಕಲ್ಪವೂ ಉಳಿದುಕೊಳ್ಳದಂತೆ ಎಲ್ಲವನ್ನೂ ಹೊರದೂಡಿ ತಾನೇ ತಾನಾಗಿ ಇರುವುದು ಚಿದಾಕಾಶ ಸ್ಥಿತಿ. ಆದರೆ ಎಲ್ಲವೂ ಅದೇ, ಎಲ್ಲೆಲ್ಲಿಯೂ ಅದೇ. ಇದುವೆ ಸ್ವರೂಪ, ತನ್ನದೇ ರೂಪ, ಬೇರೊಂದು ರೂಪವನ್ನು ತಳೆಯದಿರುವಿಕೆ. ಸಂಕಲ್ಪಗಳೂ ಅರಿವೇ ಆದರೂ ಅರಿವಿನ ಸ್ವ-ರೂಪಗಳಲ್ಲ. ಅವು ಪರ-ರೂಪಗಳು, ತೋರಿಕೊಂಡು ಮರೆಯಾಗುವಂಥವು. ಸ್ವರೂಪವಾದರೆ ಎಂದಿಗೂ ಮರೆಯಾಗಲಾರದು; ತನಗೆ ತಾನು ತೋರಿಕೊಳ್ಳದೆಯೂ ಇರಲಾರದು. ಎಚ್ಚರದಲ್ಲಿರುವುದು ಅರಿವಿನ ಪರ-ರೂಪಗಳೇ, ಸಂಕಲ್ಪ-ವಿಕಲ್ಪಗಳು. ನಿದ್ರೆಯಲ್ಲಿ ಹೀಗೆ ಪರ-ರೂಪವಿರದಿದ್ದರೂ ಸ್ವ-ರೂಪವನ್ನು ಗುರುತಿಸಿಕೊಳ್ಳಲಾರದು, ತಮಸ್ಸು ಮುಸುಕಿರುವುದರಿಂಧ. ವ್ಯಕ್ತಿತ್ವಕ್ಕೆ ಕಾರಣವಾದ ಅವಿದ್ಯೆಯೇ ಈ ತಮಸ್ಸು. ನಿದ್ರೆಯಲ್ಲಿ ಅಜ್ಞಾನ, ಎಚ್ಚರದಲ್ಲಿ ಅನ್ಯಥಾಜ್ಞಾನ.

**ಏನಂ ಮನೋಮಣಿಂ ಬ್ರಹ್ಮನ್ ಬಹುಪಂಕಕಲಂಕಿತಂ ।**
**ವಿವೇಕವಾರಿಣಾ ಸಿದ್ಧ್ಯೈ ಪ್ರಕ್ಷಾಲ್ಯಾಲೋಕವಾನ್ ಭವ ॥**
**ಶುದ್ಧಂ ಸದಸತೋರ್ಮಧ್ಯಂ ಪದಂ ಬುದ್ಧ್ವಾವಲಂಬ್ಯ ಚ ।**
**ಸಬಾಹ್ಯಾಭ್ಯಂತರಂ ದೃಶ್ಯಂ ಮಾ ಗೃಹಾಣ ವಿಮುಂಚ ಮಾ ॥**

**(೫.೮೨ ಮತ್ತು ೧೭೨)**

ಮನಸ್ಸೆಂಬುದು ಚಿಂತಾಮಣಿ. ವ್ಯವಹಾರವನ್ನು ಬೇಕೆಂದರೂ ಒದಗಿಸುತ್ತದೆ, ಪರಮಾರ್ಥಕ್ಕಾದರೂ ನೆರವಾಗುತ್ತದೆ. ಅದನ್ನು ಹೇಗೆಂದರೆ ಹಾಗೆ ಬಳಸಿಕೊಳ್ಳಬಹುದು. ಅದರಿಂದ ಸಂಕಲ್ಪಗಳೂ ತೋರಿಕೊಳ್ಳುತ್ತವೆ; ನಿರ್ವಿಕಲ್ಪ ಸ್ಥಿತಿಯಲ್ಲಿಯೂ ಅದು ಇರುತ್ತದೆ. ಆದ್ದರಿಂದ ಇದನ್ನು 'ಮನೋಮಣಿ' ಎಂದು ಕರೆದಿದ್ದಾರೆ. ವ್ಯವಹಾರ ದಲ್ಲಿಯಾದರೋ, ಅನೇಕ ಸಂಕಲ್ಪಗಳಿಂದ ಬಹಿರ್ಮುಖವಾಗಿ ವಿಷಯಾಸಕ್ತಿಯನ್ನು ತಳೆದು, ಕೆಸರಲ್ಲಿ ಹೂತುಕೊಂಡ ಮಣಿಯಂತಾಗಿ ಬಿಡುತ್ತದೆ. ಶುದ್ಧ ಮನಸ್ಸೆಂಬುದು ಇರುವುದೂ ಕಾಣಿಸುವುದಿಲ್ಲ. ಅದನ್ನೆತ್ತಿಕೊಂಡು ವಿವೇಕವೆಂಬ ನೀರಿನಿಂದ ತೊಳೆದಾಗ ಅದು ತನ್ನ ಸ್ವರೂಪವನ್ನು ತಳೆದು ಬೆಳಗುತ್ತದೆ. ಅದು ಇದ್ದಂತೆಯೇ ಕಾಣಿಸಿಕೊಳ್ಳುತ್ತದೆ.

ವಿವೇಕವೆಂದರೆ ಏನು ? ತೋರಿಕೊಳ್ಳುವ ಎರಡು ವಸ್ತುಗಳಲ್ಲಿ ಒಂದು ದಿಟ ಇನ್ನೊಂದು ಸಟೆ, ಒಂದು ಸಾರ್ಥಕ ಇನ್ನೊಂದು ವ್ಯರ್ಥ, ಒಂದು ಉಪಾದೇಯ ಇನ್ನೊಂದು ಹೇಯ ಎಂದು ವಿವೇಚಿಸುವುದು, ಬೇರ್ಪಡಿಸಿ ನೋಡುವುದು ವಿವೇಕವೆನಿಸಿಕೊಳ್ಳುತ್ತದೆ. ಸಂಕಲ್ಪಕ್ಕೂ ನಿರ್ವಿಕಲ್ಪಕ್ಕೂ ನಡುವೆ ಇರುವ ಅಂತರವನ್ನು ಗಮನಿಸುವುದು ಇಲ್ಲಿ ಪ್ರಸಕ್ತವಾಗುತ್ತದೆ. ಸಂಕಲ್ಪದಿಂದ ಪ್ರಪಂಚನಿಶ್ಚಯ, ಪ್ರಪಂಚಭಾವ,

ಸುಖದುಃಖಾನುಭವ, ಸಂಸಾರಬಂಧನ. ನಿರ್ವಿಕಲ್ಪದಿಂದ ಬಿಡುಗಡೆ, ನೆಮ್ಮದಿ, ಶಾಂತಿ.

ಸತ್ ಮತ್ತು ಅಸತ್ ಇವೆರಡರ ನಡುವೆ ಇರುವ ಸ್ಥಿತಿಯನ್ನು ತಿಳಿದುಕೊಂಡು, ಅದನ್ನೇ ನೆಲೆಯಾಗಿ ಗ್ರಹಿಸಬೇಕೆಂದು ಇಲ್ಲಿ ಬರುವ ಸೂಚನೆ. 'ಸತ್' ಎಂದರೆ ಎಂದೆಂದೂ ಒಂದೇ ರೀತಿಯಾಗಿ ಇರುವುದು. 'ಅಸತ್' ಎಂದರೆ ಇದಲ್ಲದ್ದು ; ತೋರಿಕೊಂಡು ಮರೆಯಾಗುವಂಥವು, ಇರುವಾಗ ವಿಕಾರವನ್ನು ಹೊಂದುವಂಥದ್ದು; ಇಲ್ಲಿದ್ದು ಅಲ್ಲಿರದಿರುವಂಥವು. ಆತ್ಮವೇ ಸತ್; ಎಂದರೆ, ಮೇಲೆ ಕಾಣಿಸಿದಂತೆ ಬರಿಯ ಅರಿವು. ನಿರ್ವಿಕಲ್ಪ ಸ್ಥಿತಿ. ಅಸತ್ ಎಂದರೆ ಪ್ರಪಂಚ, ಸಂಕಲ್ಪಗಳಿಂದ ಉಂಟಾದುದು. ಸಂಕಲ್ಪವಿದ್ದರೆ ಪ್ರಪಂಚ, ಸಂಕಲ್ಪವಿರದಿದ್ದರೆ ಪ್ರಪಂಚವೂ ಇಲ್ಲ. ಸಂಕಲ್ಪವೆನ್ನುವುದೇನು ? ಅರಿವು ಸ್ವ-ರೂಪವನ್ನು ಕಾಣಿಸದೆ ಪರ-ರೂಪವನ್ನು ತಳೆದಾಗ ಸಂಕಲ್ಪ. ಅರಿವಿನ ಪರ-ರೂಪವಾದರೋ ಅಸತ್.

ಸತ್ ಎಂದರೆ ಅರಿವಿನ ಸ್ವರೂಪವೇ. ಸತ್ ಎಂದರೆ ಪರಮಾರ್ಥ, ಅಸತ್ ಎಂದರೆ ವ್ಯವಹಾರ. ಇವೆರಡರ ನಡುವೆ ಇರುವುದು ಆತ್ಮದ ನಿರ್ವಿಕಲ್ಪಸ್ಥಿತಿಯೇ. ಹಿಂದೆ, ಚಿದಾಕಾಶ ಎಂದೆವಲ್ಲಾ ಅದು. ಅದರಲ್ಲಿ ಚಿತ್ತಾಕಾಶವನ್ನು 'ಸತ್' ಎನ್ನಬಹುದು, ಬಾಹ್ಯಾಕಾಶವನ್ನು ಅಸತ್ ಎನ್ನಬಹುದು. ಎರಡರ ನಡುವೆ ಚಿದಾಕಾಶವನ್ನು ಕಾಣಿಸಿರುವುದೂ ಶ್ಲೋಕವೊಂದರಲ್ಲಿದೆಯಷ್ಟೆ ? ಚಿದಾಕಾಶದಲ್ಲಿ ನೆಲೆನಿಂತಾಗ ಈ ಕಡೆ ವ್ಯವಹಾರ, ಆ ಕಡೆ ಪರಮಾರ್ಥ. ಎರಡೂ ವಾಸ್ತವವಾಗಿ ಆಕಾಶವೇ, ಚಿದಾಕಾಶವೇ. ಒಳಗೆ ಚಿತ್ತಾಕಾಶ, ಹೊರಗೆ ಬಾಹ್ಯಾಕಾಶ. ಎರಡೂ ಸೇರಿಕೊಂಡು ದೃಶ್ಯ ಜಗತ್ತು; ನಮ್ಮೆದುರು ತೋರಿಕೊಳ್ಳುವ ಪ್ರಪಂಚ.

ಇವುಗಳಲ್ಲಿ ಯಾವುದನ್ನೂ ಬಿಡುವ ಹಾಗಿಲ್ಲ, ಯಾವುದನ್ನೂ ಹಿಡಿದುಕೊಳ್ಳಬಾರದು. ದೇಹ, ಇಂದ್ರಿಯಗಳು ಇರುವುದು, ಹೊರಗಣ ವಿಷಯಗಳಂತೆ, ಬಾಹ್ಯಾಕಾಶದಲ್ಲಿಯೆ. ಮನಸ್ಸು, ಚಿತ್ತ ಅಹಂಕಾರ (ನಾನೆಂಬ ಭಾವನೆ) ಇವು ಚಿತ್ತಾಕಾಶದಲ್ಲಿ. ಬದುಕಿರುವ ವರೆಗೂ ಇವು ಇದ್ದೇ ಇರುತ್ತವೆ. ಇವುಗಳನ್ನು ಕೈಬಿಡುವುದು ಹೇಗೆ ? ಕೈಬಿಡಲೂ ಬಾರದು. ಕೈಬಿಡಬೇಕೆಂಬ ಆಲೋಚನೆ, ಬಯಕೆ ದಿಟವಾಗಿ ಸಂಕಲ್ಪವೇ ಅಲ್ಲವೆ ? ಇರುವುದನ್ನು ದೂರಸರಿಸ ಬೇಕೆನ್ನುವುದು, ಇಲ್ಲದುದನ್ನು ಬರಮಾಡಿಕೊಳ್ಳಬೇಕೆನ್ನುವಷ್ಟೇ ಸಂಕಲ್ಪ! ಇರುವುದನ್ನು ಅನುಭವಿಸುವುದು, ತಾನಾಗಿ ಬರುವುದನ್ನೆಲ್ಲ ನಗುಮೊಗದಿಂದ ಬರಮಾಡಿಕೊಳ್ಳುವುದು ಅವಧೂತನ ಲಕ್ಷಣ. ಆದರೆ ಅದನ್ನೇ ದಿಟವೆಂದಾಗಲಿ, ತನಗೆ ಅಗತ್ಯವೆಂದಾಗಲಿ ಅವನು ಬಗೆಯುವುದಿಲ್ಲ. ಇರುವುದಕ್ಕಾಗಲಿ ಬರುವುದಕ್ಕಾಗಲಿ ಅವನು ಅಂಟಿಕೊಳ್ಳುವುದಿಲ್ಲ. ಹಾಗೆ ಅಂಟಿಕೊಂಡರೆ ಅದೂ ಸಂಕಲ್ಪವಾಗಿ ಬಿಟ್ಟಿತು! ನಿರ್ವಿಕಲ್ಪ ಸ್ಥಿತಿಯಲ್ಲಿ ಇರಬೇಕೆನ್ನುವವನು ಹೊರದೂಡುವುದೂ ಇಲ್ಲ, ಬರಮಾಡಿಕೊಳ್ಳುವುದೂ ಇಲ್ಲ. 'ಇದ್ದಂತೆ ಇರುವೆನೋ, ಹರಿಯೆ' ಎಂದು ಪುರಂದರದಾಸರು ಹೇಳಿದ್ದು ಈ ಅರ್ಥದಲ್ಲಿಯೇ.

**ನ ತ್ಯಜಂತಿ ನ ವಾಂಛಂತಿ ವ್ಯವಹಾರಂ ಜಗದ್ಗತಂ ।**
**ಸರ್ವಮೇವಾನುವರ್ತಂತೇ ಪಾರಾವಾರವಿದೋ ಜನಾಃ ॥** (೫.೧೭೭)

ಇಲ್ಲಿನದು ವ್ಯವಹಾರ, ಅಲ್ಲಿನದು ಪರಮಾರ್ಥ. ಎರಡನ್ನೂ ಚೆನ್ನಾಗಿ ಬಲ್ಲವರು ಅವಧೂತರು. ಎರಡರ ಮೂಲ ಆತ್ಮವೇ, ಎಲ್ಲವೂ ದಿಟವಾಗಿ ಆತ್ಮವೇ ಎಂಬುದನ್ನು ಅವರು ಬಲ್ಲರು. ಆತ್ಮದ ನೆಲೆಯಲ್ಲೇ ಇರುವವರು, ಆತ್ಮವೇ ಆಗಿರುವವರು. ಅವರಿಗೆ ವ್ಯವಹಾರವೆಂದರೆ

ಭಯವೇನಿರದು. ವ್ಯವಹಾರವು ಬೇಕೆಂದು ಅವರೇನು ಬಯಸಿ ಬಾಯಿಬಿಡುವುದಿಲ್ಲ. ಅಥವಾ ವ್ಯವಹಾರವೆಂದು ಹೌಹಾರಿ ಹೆದರಿ ಓಡುವುದಿಲ್ಲ. ವ್ಯವಹಾರ ಇರುವುದು ಜಗತ್ತಿನಲ್ಲಿ. ಇರಲಿ, ನಮ್ಮನ್ನೇನು ಮಾಡೀತು ? ಪ್ರಪಂಚಭಾವ ಇಲ್ಲದಿದ್ದರಾಯಿತು, ಅಷ್ಟೆ.

**ಹೃದಯಾತ್ಸಂಪರಿತ್ಯಜ್ಯ ಸರ್ವವಾಸನಪಂಕ್ತಯಃ ।**
**ಯಸ್ತಿಷ್ಠತಿ ಗತವ್ಯಗ್ರಃ ಸ ಮುಕ್ತಃ ಪರಮೇಶ್ವರಃ ॥** (೬, ೮)

ಎಲ್ಲ ವಾಸನೆಗಳ ಮೆರವಣಿಗೆ ನಿನ್ನೊಡಲಲ್ಲಿ ನಡೆಯದಿರಲಿ. ವಾಸನೆಗಳಿಂದಲೇ ಸಂಸಾರದ ಬಂಧನ, ಬಯಕೆಗಳಿಂದಲೇ ವಾಸನೆ ಬೇರೂರುವುದು. ಏನನ್ನೂ ಬಯಸದಿರು, ಯಾವ ನಂಟನ್ನೂ ನಿನ್ನಲ್ಲಿ ಉಳಿಸಿಕೊಳ್ಳದಿರು, ನಿನ್ನ ಒಡಲು ಶುದ್ಧವಾಗಿರಲಿ, ಹಗುರವಾಗಿರಲಿ. ತಲೆ ಬಿಸಿ ಮಾಡಿಕೊಳ್ಳದೆ, ಹುಚ್ಚೆದ್ದು ಕುಣಿಯದೆ, ಸಿಟ್ಟಿನಿಂದ ಹಲ್ಲು ಕಡಿಯದೆ, ತಣ್ಣಗಿದ್ದು ಬಂದದ್ದನ್ನು ಅನುಭವಿಸು. ಆಗ ನೀನು ಮುಕ್ತನೇ, ಶಿವನೇ!

**ಯದಸ್ತೀಹ ತದೇವಾಸ್ತಿ ವಿಜ್ವರೋ ಭವ ಸರ್ವದಾ ।**
**ಯಥಾಪ್ರಾಪ್ತಾನುಭವತಃ ಸರ್ವತ್ರಾನಭಿವಾಂಛನಾತ್ ॥** (೬, ೧೪)

ಯಾವುದು, ಹೇಗಿದೆಯೋ ಅದು ಹಾಗೆಯೇ ಇದೆ, ಇರುತ್ತದೆ. ಅದಕ್ಕೆ ನೀನು ಮಾಡುವುದೇನು ? ಅದಕ್ಕಾಗಿ ತಲೆಕೆಡಿಸಿಕೊಳ್ಳಲೇಕೆ ? ಇರುವುದು ಇದ್ದಂತೆ ಇರಲಿ, ಬರಬೇಕಾದದ್ದು ಬರಲಿ, ಹೋಗಬೇಕಾದದ್ದು ಹೋಗಲಿ. ನೀನಂತೂ ನೆಮ್ಮದಿಯಿಂದಿರು. ಬಂದದ್ದನ್ನು ಅನುಭವಿಸು, ಏನನ್ನೂ ಬಯಸದೆ ಇರು. ಅದು ಹೀಗಿರಬೇಕು, ಇದು

ಹಾಗಿರಬೇಕು, ಇದು ಬರಬೇಕು, ಅದು ಹೋಗಬೇಕು ಇಂಥ ಸಂಕಲ್ಪಗಳನ್ನೆಲ್ಲ ಕೈಬಿಟ್ಟು ತಣ್ಣಗಿರು.

**ಅಹಮೇಷಾಂ ಪದಾರ್ಥಾನಾಮೇತೇ ಚ ಮಮ ಜೀವಿತಂ ।**
**ನಾಹಮೇಭಿರ್ವಿನಾ ಕಿಂಚಿನ್ನ ಮಯ್ಯೈತೇ ವಿನಾ ಕಿಲ ॥**

**ಇತ್ಯಂತರ್ನಿಣರ್ಯಂ ತ್ಯಕ್ತ್ವಾ ವಿಚಾರ್ಯ ಮನಸಾ ಸಹ ।**
**ನಾಹಂ ಪದಾರ್ಥಸ್ಯ ನ ಮೇ ಪದಾರ್ಥ ಇತಿ ಭಾವಿತೇ ॥**

**ಅಂತಃಶೀಲತಯಾ ಬುದ್ಧ್ಯಾ ಕುರ್ವತೋ ಲೀಲಯಾ ಕ್ರಿಯಾಂ ।**
**ಯೋ ನೂನಂ ವಾಸನಾತ್ಯಾಗೋ ಧ್ಯೇಯೋ ಬ್ರಹ್ಮನ್ ಪ್ರಕೀರ್ತಿತಃ ॥**

**ಸರ್ವಂ ಸಮತಯಾ ಬುದ್ಧ್ಯಾ ಯಃ ಕೃತ್ವಾ ವಾಸನಾಕ್ಷಯಂ ।**
**ಜಹಾತಿ ನಿರ್ಮಮೋ ದೇಹಂ ನೇಯೋಽಸೌ ವಾಸನಾಕ್ಷಯಃ ॥**

**(೬, ೪೧-೪೪)**

ಜೀವಭಾವ-ಪ್ರಪಂಚಭಾವಗಳ ಪ್ರಭಾವವೆಂದರೆ ಎಲ್ಲ ಮನುಷ್ಯರಲ್ಲೂ 'ನಾನು ಹೊರಗಣ ಪ್ರಪಂಚಕ್ಕೆ ಸೇರಿದವನು; ಮನೆ-ಮಠ ಮೊದಲಾದ ವಿವರಗಳೊಳಗೆ ಅಡಗಿದವನು; ಇವೇ ನನ್ನ ಬದುಕು. ಇವುಗಳಿಲ್ಲದೆ ನಾನು ಎನ್ನುವುದೇನೂ ಇರದು; ನಾನಿಲ್ಲದೆ ಇವು ಇರುವುದಾದರೂ ಹೇಗೆ ? ಎಂಬ ಭಾವನೆ ಬೇರೂರಿ ಕೊಳ್ಳುವುದು. ಯಾರಾಗಲಿ ಒಂದು ಕುಟುಂಬಕ್ಕೆ ಸೇರಿದವರೇ, ಒಂದು ಊರಿನವರೇ, ಒಂದು ಜಾತಿ ಮತಕ್ಕೆ ಅಂಟಿಕೊಂಡವರೇ, ಆಸ್ತಿ-ಪಾಸ್ತಿ ಮಾಡಿಕೊಂಡವರೇ, ಒಂದು ವೃತ್ತಿ ಹಿಡಿದವರೇ. ಇವುಗಳಿದ್ದರೇನೆ ವ್ಯಕ್ತಿ

ಗೊಂದು ನಿರ್ದೇಶನ, ಒಂದು ಆಸರೆ. ಇವುಗಳಿಲ್ಲದೆ ವ್ಯಕ್ತಿಯ ಬದುಕು ಹೇಗೆ ನಡೆದೀತು ? ಇದು ಸಾಮಾನ್ಯ ಜನರ ಎಣಿಕೆ.

ಆದರೆ ಜನ ವಿಚಾರ ಮಾಡುವುದಿಲ್ಲ. ನನ್ನಿಂದ ಪ್ರಪಂಚವೋ ? ಪ್ರಪಂಚದಿಂದ ನಾನೋ ? ಪ್ರಪಂಚ ನನ್ನನ್ನು ಮಾಡಿತೋ ? ನಾನು ಪ್ರಪಂಚವನ್ನು ಮಾಡಿಕೊಂಡೆನೋ ? ನಾನು ಎನ್ನುವುದರ ಮೂಲ ಆತ್ಮವೆಂದು ಅರಿತುಕೊಂಡರೆ ಪ್ರಪಂಚದಿಂದ ನಾನಲ್ಲ, ನನ್ನಿಂದ ಪ್ರಪಂಚ ಎನ್ನುವುದು ತಿಳಿಯುತ್ತದೆ. ಎಲ್ಲರಿಗೂ ಒಂದು ಜಗತ್ತಿರ ಬಹುದು, ಆದರೆ ಒಂದು ಪ್ರಪಂಚವಿರಲಾರದು. ಒಬ್ಬೊಬ್ಬರಿಗೆ ಒಂದೊಂದು ಪ್ರಪಂಚ; ಅವರವರ ಪ್ರಪಂಚ ಅವರವರಿಗೆ. ಪ್ರಪಂಚ ವೆಂದರೇನು ? ಮನಸ್ಸಿನ ಸಂಕಲ್ಪ-ವಿಕಲ್ಪಗಳಿಂದ ಏರ್ಪಡಿಸಿಕೊಂಡ ಸಂಬಂಧ ಅಷ್ಟೆ. ಪದಾರ್ಥಗಳೊಡನೆ ನಂಟು, ಬಯಕೆಗಳ ಹರವು, ಪ್ರಯತ್ನಗಳ ಜಾಲ, ಅನಿಸಿಕೆಗಳ ಆಟ, ಸುಖದುಃಖಾದಿ ಅನುಭವಗಳ ಕೂಟ. ಜಗತ್ತಿನ ಮೇಲೆ ನಾವು ಒಬ್ಬೊಬ್ಬರೂ ತಮತಮಗೆ ತೋರಿದಂತೆ ಹೇರುವ ಹೊದಿಕೆ ಪ್ರಪಂಚ. ಪ್ರಪಂಚವನ್ನು ಸೃಷ್ಟಿಮಾಡುವವರು ನಾವೇ ಎಂಬುದರ ಅರ್ಥ ಇದು.

ಹೀಗೆ ನಾವೇ ಏರ್ಪಡಿಸಿಕೊಂಡ ಪ್ರಪಂಚವು ನಮ್ಮನ್ನೇ ಆಳಲು ಅಣಿಮಾಡಿಕೊಡುವೆವು. ಈ ಪ್ರಪಂಚವನ್ನು ಬಿಟ್ಟು ಬೇರೆ ಆಸರೆಯೇ ಇರದು, ಪುರುಷಾರ್ಥಕ್ಕೆ ಬೇರೆ ದಾರಿ ಇರದು ಎಂದು ದೃಢವಾಗಿ ನಂಬಿಕೊಳ್ಳುತ್ತೇವೆ. ಪದಾರ್ಥಗಳನ್ನು ಸಂಗ್ರಹಿಸಿಕೊಂಡರೇ ಬದುಕು ನೆಮ್ಮದಿಯಾದೀತು, ಸುಖಕರವಾದೀತು; ಎಷ್ಟಾದರೂ ಪದಾರ್ಥಗಳು ಅನಿಸಿಕೆಗಳಿಗಿಂತ ಗಟ್ಟಿಯಲ್ಲವೆ ? ಎಂದು ಅಂದುಕೊಳ್ಳುತ್ತೇವೆ.

ಹೊರಗಣ ವಿಷಯಗಳತ್ತಲೇ ನಮ್ಮ ಗಮನವೆಲ್ಲ. ಪ್ರಪಂಚವನ್ನು ಒಂದು ಗಳಿಗೆ ಬದಿಗಿಟ್ಟು, ಒಂಟಿಯಾಗಿ ಕೂತು, ಏಕಾಂತದಲ್ಲಿ ವಿಚಾರ ಮಾಡುವಾ ಎಂದು ಯಾರೂ ಹೊರಡುವುದಿಲ್ಲ. ಪ್ರಪಂಚವೇ ದಿಟ; ಅದಕ್ಕಂಟಿಕೊಂಡಿರುವಾಗಲೇ ನಾನು ದಿಟ ಎಂಬುದು ನಮ್ಮೆಲ್ಲರ ನಿಶ್ಚಯ, ನಿರ್ಣಯ.

ಇದನ್ನು ಬಿಡಬೇಕೆಂದು ಇಲ್ಲಿನ ಸೂಚನೆ. ಇಂಥ ನಿರ್ಣಯ ಒಂದು ನಂಬಿಕೆ ಅಷ್ಟೆ. ವಿಚಾರ ಮಾಡಿದರೆ ಅದು ನಿಲ್ಲಲಾರದು. ನಾನು ಪ್ರಪಂಚಕ್ಕೆ ದಿಟವಾಗಿ ಸೇರಿದವನೂ ಅಲ್ಲ, ನನ್ನೊಂದಿಗೆ ಪ್ರಪಂಚವೂ ಸೇರಿಕೊಂಡಿಲ್ಲ. ಎಚ್ಚರದಲ್ಲಿರುವ ಪ್ರಪಂಚ ಕನಸಿನಲ್ಲಿ ಇರುವುದೇ ? ಅದೇ ಬೇರೆ ಪ್ರಪಂಚವಲ್ಲವೆ ? ಒಬ್ಬೊಬ್ಬರ ಕನಸೂ ಅವರದ್ದೇ ತಾನೆ ? ಇನ್ನು, ನಿದ್ರೆಯಲ್ಲಿ ಯಾವ ಪ್ರಪಂಚವಿದೆ ? ಯಾವ ಪದಾರ್ಥಗಳಿದ್ದಾವು ? ಯಾತರ ನಂಟು ? ನಾನೆಂಬ ಅನಿಸಿಕೆಯೂ ಇರದಷ್ಟೆ ? ಆದರೂ ಆತ್ಮ ಇರುವುದು ದಿಟ ತಾನೆ ? ಪ್ರಪಂಚದ ಹಂಗಿರದೆ ಆತ್ಮ ಇರಬಹುದೆಂದಾಯಿತಲ್ಲ ? ಆತ್ಮವೇ ದಿಟ, ಪ್ರಪಂಚ ವೊಂದು ತೋರಿಕೆ.

ಹೀಗೆ ವಿಚಾರಮಾಡುವಾಗ ದೃಷ್ಟಿ ಒಳಗೆ ಸರಿಯಬೇಕು; ಹೊರಗಣ ವಿಷಯಗಳಿಂದ ಮನಸ್ಸನ್ನು ಒಳಸೆಳೆದುಕೊಳ್ಳಬೇಕು. ವಿಚಾರಮಾಡಿ ಆತ್ಮದ ನೆಲೆ ಗಟ್ಟಿಯಾದ ಮೇಲೆ ಪ್ರಪಂಚದೊಂದಿಗೆ ವ್ಯವಹರಿಸುವುದು ಆಟವೆನಿಸುತ್ತದೆ. ಪ್ರಪಂಚವೊಂದನ್ನೇ ನಂಬಿ ಕೊಂಡು, ಅದನ್ನೇ ಗಟ್ಟಿಯೆಂದು ನಂಬಿಕೊಂಡು, ಅದರ ಗೀಳಿನಲ್ಲೇ ಬಾಳುವ ಕಾರ್ಪಣ್ಯ ಮರೆಯಾಗುತ್ತದೆ. ಇದನ್ನೇ ವಾಸನಾ-

ತ್ಯಾಗವೆಂದು ಇಲ್ಲಿ ಕರೆದಿದ್ದಾರೆ. ಪ್ರಪಂಚಭಾವದಿಂದಲೇ ಮನಸ್ಸಿನ ತುಂಬ ಗಟ್ಟಿಯಾಗಿ ಅಂಟಿಕೊಂಡ ವಾಸನೆಗಳು. ಪ್ರಪಂಚನಿಶ್ಚಯ ತಪ್ಪಿದರೆ ವಾಸನೆಗಳು ಸಡಿಲವಾಗುತ್ತವೆ, ಕಳಚಿಬೀಳುತ್ತವೆ.

ಪ್ರಪಂಚವೆಂಬುದು ಎಷ್ಟು ಕಲ್ಪಿತವೋ, ದೇಹವೂ ಅಷ್ಟೇ ಕಲ್ಪಿತ. ಎಂದರೆ ಜಗತ್ತು ಹೊರಗಿರುವುದು; ಪ್ರಪಂಚಭಾವ ನಮ್ಮಿಂದ ಅದರ ಮೇಲೆ ಮೂಡಿಕೊಳ್ಳುವುದು. ಹಾಗೆಯೇ ಶರೀರವು ಆತ್ಮಕ್ಕೆ ಹೊರಗಿನದು. ಆದರೆ ಅದು ನನ್ನದು ಎಂಬ ಅನಿಸಿಕೆ, ಅದನ್ನು ಸರಿಯಾಗಿ ನೋಡಿಕೊಳ್ಳಬೇಕೆಂಬ, ಬೆಳೆಸಿ ಉಳಿಸಿಕೊಳ್ಳಬೇಕೆಂಬ ಕಾತರ. ಇದು ದೇಹಾಭಿಮಾನ. ದೇಹಾಭಿಮಾನವು ವಾಸ್ತವ ಜಗತ್ತಿನ ವಿವರವಲ್ಲ; ನಮ್ಮ ಮನಸ್ಸಿನ ಸಂಕಲ್ಪ. ನಮ್ಮಿಂದ ಕಲ್ಪಿತವಾದುದು. ಇದನ್ನರಿತುಕೊಂಡು ಅವಧೂತ 'ನಿರ್ಮಮ'ನಾಗಿರುತ್ತಾನೆ. ಎಂದರೆ ಜಗತ್ತು ನನ್ನದು, ಶರೀರ ನನ್ನದು (ಮಮ) ಎಂಬ ವಿಶ್ವಾಸ ಜಾರಿಕೊಳ್ಳುತ್ತದೆ. ವಾಸನಾಕ್ಷಯವಾದುದಕ್ಕೆ ಇದು ಸಾಕ್ಷಿ.

**ಅಂತಃಸಂತ್ಯಕ್ತಸರ್ವಾಶೋ ವೀತರಾಗೋ ವಿವಾಸನಃ ।**
**ಬಹಿಃ ಸರ್ವಸಮಾಚಾರೋ ಲೋಕೇ ವಿಹರ ವಿಜ್ವರಃ ॥**
**ಬಹಿಃ ಕೃತ್ರಿಮಸಂರಂಭೋ ಹೃದಿಸಂರಂಭವರ್ಜಿತಃ ।**
**ಕರ್ತಾ ಬಹಿರಕರ್ತಾಽಂತರ್ಲೋಕೇ ವಿಹರ ಶುದ್ಧಧೀಃ ॥**

**(೬, ೬೭-೬೮)**

ಪ್ರಪಂಚಭಾವದ ಬಯಕೆಗಳೆಲ್ಲ ಒಳಗಿನಿಂದ ಎದ್ದುದಾಗಿ, ಹೊರಗೆ ಅವನ್ನು ಬಿಡುವುದು ಹೇಗೆ ? ಹಾಗೆ ಬಿಟ್ಟರೆ ತಾನೆ ಏನು ಫಲ ? ಒಳಗಿನಿಂದಲೇ ಬಿಡಬೇಕು. ಬೇರನ್ನು ಕತ್ತರಿಸಿದರೇ ಮರ

ಉರುಳುವುದು; ಮೇಲಣ ಕೊಂಬೆಗಳನ್ನು ಕಡಿದರೆ ಏನಾದೀತು ? ಅಂಟಿಕೊಳ್ಳುವ ಸ್ವಭಾವಕ್ಕೆ ರಾಗವೆಂದು ಹೆಸರು; ಅದರಿಂದ ಮನಸ್ಸಿಗೆ ಬಣ್ಣ ಬರುತ್ತದೆ. ಈ ಸ್ವಭಾವವನ್ನು ಬಿಡದಲ್ಲದೆ ಬಹಿಮುಖ ಪ್ರವೃತ್ತಿಯಾಗಲಿ ವಿಷಯಾಸಕ್ತಿಯಾಗಲಿ ಹೋಗಲಾರದು; ವಾಸನೆಗಳು ತೊಲಗಲಾರವು. ಮಾಡುವ ಸಾಧನೆ ಮನಸ್ಸಿನದಾಗಬೇಕು.

ಸಾಧಕನು ಪ್ರಪಂಚವನ್ನೇ ಬಿಡುತ್ತೇನೆ ಎಂದರೆ ಆಗದ ಮಾತು. ಅವನು ಜಗತ್ತಿನಲ್ಲಿರದೆ, ದೇಹವನ್ನು ಧರಿಸಿರದೆ, ಒಡನಾಡಿಗಳೊಂದಿಗೆ ವ್ಯವಹರಿಸದೆ ಇರಲು ಸಾಧ್ಯವೆ? ಹೀಗೆ ಮಾಡಲು ಯತ್ನವನ್ನೂ ಮಾಡಬಾರದು. ತನಗೆ ಸರಿಯಾದ ಕೆಲಸಗಳೆಲ್ಲವನ್ನೂ ಮಾಡುತ್ತಲೆ ಇರಬೇಕು. ಸಂಸಾರದಿಂದ ಬಿಟ್ಟೋಡುವ ಹವಣಿಕೆಯೂ ಒಂದು ಬಗೆಯ ಅಂಟೇ. ವಿಷಯಾಸಕ್ತಿಯದೇ ಇನ್ನೊಂದು ಮುಖ ವಿಷಯ ವಿರಕ್ತಿ. ವಿಷಯಗಳನ್ನು ಪಡೆದುಕೊಳ್ಳಬೇಕೆಂಬ ಕಾವಿನಂತೆಯೇ ವಿಷಯಗಳನ್ನು ಬಿಡಬೇಕೆಂಬ ಕಾವು. ಇದೇ ಜ್ವರ. ಜ್ವರ ಬಿಟ್ಟವನು ವಿಜ್ವರ. ಅವನಿಗೆ ರಕ್ತಿಯೂ ಇಲ್ಲ, ವಿರಕ್ತಿಯೂ ಇಲ್ಲ. ಲೋಕಕ್ಕೆ ಅಂಟಿಕೊಳ್ಳದೆ ಆಟವಾಡಿದಂತೆ ಬದುಕುವವನು ಅವನು. ಅವನ ಬದುಕು ಒಂದು ವಿಹಾರ.

ಹೊರಗಿನ ನೋಟಕ್ಕೆ ಅವಧೂತನು ಕೆಲಸದಲ್ಲಿ ತೊಡಗಿಯೇ ಇರುತ್ತಾನೆ. ಆದರೆ ಅದು ಒಂದು ನಟನೆ ಅಷ್ಟೆ. ಸಹಜವಾದ ವ್ಯವಹಾರವೇನಲ್ಲ ಅದು; ಕೃತ್ರಿಮ. ಸಹಜವಾಗಿ ಅವನು ಆತ್ಮದಲ್ಲೇ ನೆಲೆಸಿರುವುದರಿಂದ ವ್ಯವಹಾರವೆಲ್ಲಿಯದು ? ಆದರೂ ದೇಹ ಇರುವುದರಿಂದ, ಲೋಕದಲ್ಲೇ ಇರಬೇಕಾದುದರಿಂದ ವ್ಯವಹಾರವೂ ಇರಬೇಕಾದದ್ದೇ. ವ್ಯವಹಾರದಲ್ಲಿದ್ದರೂ ಅವನ ಒಡಲೊಳಗೆ ಅದರ

ಗೀಳೇನಿರದು. ಪ್ರಪಂಚವನ್ನೇನು ಅವನು ಹಚ್ಚಿಕೊಂಡಿರುವುದಿಲ್ಲ. ಯಾವ ಸಂಕಲ್ಪವೂ ಅವನ ಮನಸ್ಸಿನಲ್ಲೇಳುವುದಿಲ್ಲ. ಆದರೆ ಕೆಲಸ ಮಾಡುವಾಗ ಉತ್ಸಾಹದಿಂದಲೇ ಮಾಡುತ್ತಾನೆ, ಅಚ್ಚುಕಟ್ಟಾಗಿಯೇ ಮಾಡುತ್ತಾನೆ. ನಾಟಕದಲ್ಲಿ ಪಾತ್ರಧಾರಿಯು ಸಮರ್ಥನಾಗಿದ್ದರೆ ಹೇಗೋ ಹಾಗೆ. ತಾನು ವಹಿಸಿರುವ ಪಾತ್ರ ಕೃತ್ರಿಮವಾದದ್ದು, ತನಗೆ ಸಹಜವಾದುದಲ್ಲ, ದಿಟವಾದುದಲ್ಲ, ನಟನೆಗೆ ಮಾತ್ರ ಎಂಬುದು ಅವನಿಗೆ ತಿಳಿದಿದ್ದರೂ ರಂಗಭೂಮಿಯ ಮೇಲೆ ಇರುವವರೆಗೂ ನಟನಾಗಿಯೇ ಉಳಿದುಕೊಳ್ಳುತ್ತಾನೆಯಲ್ಲವೆ ?

ಆದರೆ ಅವಧೂತನ ವ್ಯವಹಾರವು ಲೋಕದಲ್ಲಿ ಅಷ್ಟೆ; ಅವನ ಅಂತರಂಗದಲ್ಲೇನು ಅದಕ್ಕೆ ಆಸರೆಯಿರದು. ಹೊರಗೆ ಕರ್ತೃ; ಒಳಗಲ್ಲ. ಹೀಗೆ ಅವನ ಕರ್ತೃತ್ವ-ಭೋಕ್ತೃತ್ವಗಳು (ಕೆಲಸವನ್ನು ಮಾಡುವಿಕೆ, ಫಲವನ್ನನುಭವಿಸುವಿಕೆ) ದೇಹಧರ್ಮದಿಂದ, ಪ್ರಪಂಚಧರ್ಮದಿಂದ ಸಿದ್ಧವಾಗುತ್ತವೆ. ದೇಹಾಭಿಮಾನವಾಗಲಿ ಪ್ರಪಂಚಭಾವವಾಗಲಿ ಇವಕ್ಕೆ ಕಾರಣವಾಗುವುದಿಲ್ಲ. ಅವನ ಮನಸ್ಸು ಶುದ್ಧವಾಗಿಯೆ ಇರುತ್ತದೆ. ಸಂಕಲ್ಪ-ವಿಕಲ್ಪಗಳು ಅದನ್ನು ಕಲುಷಿತಗೊಳಿಸುವುದಿಲ್ಲ.

**ಸಂಶಾಂತ ಸರ್ವಸಂಕಲ್ಪಃ ಪ್ರಶಾಂತಸಕಲೇಷಣಃ ।**
**ನಿರ್ವಿಕಲ್ಪಪದಂ ಗತ್ವಾ ಸ್ವಸ್ಥೋ ಭವ ಮುನೀಶ್ವರ ॥** (೬, ೮೨)

ಅವಧೂತನ ಮನಸ್ಸು ಶುದ್ಧವಾಗಿರುವುದೆಂದರೆ ಎಲ್ಲ ಸಂಕಲ್ಪಗಳೂ ಅಡಗಿಹೋಗಿವೆಯೆಂದರ್ಥ; ಅವು ಮತ್ತೆ ಎದ್ದುಕೊಳ್ಳಲಾರವು. ಅವನ ಎಲ್ಲ ಬಯಕೆಗಳೂ ಮರೆಯಾಗಿಬಿಟ್ಟಿವೆ. ಸಂಕಲ್ಪಗಳು ಇಲ್ಲವಾಗಿ ಅವನ ಸ್ಥಿತಿ ನಿರ್ವಿಕಲ್ಪವೇ. ಅವನ ನೆಲೆ ಆತ್ಮವೇ. ಹಾಗೆ ಅವನು ತನ್ನಲ್ಲಿಯೇ

ಇರುವವನು (ಸ್ವ-ಸ್ಥ). ಪ್ರಪಂಚದಲ್ಲಿ ಅವನ ದೇಹವಿದ್ದರೂ ಅವನ ವ್ಯವಹಾರ ನಡೆದರೂ ಅವನು ದಿಟವಾಗಿ ಅಲ್ಲಿರುವವನಲ್ಲ. ತನ್ನೊಳಗೆ ತಾನೆ ಆತ್ಮವಾಗಿ, ಎಲ್ಲವಾಗಿ, ನೆಮ್ಮದಿಯಿಂದ ನೆಲೆಸಿರುವವನು.

ಹೀಗೆ ಮಹೋಪನಿಷತ್ತು ಮುಗಿಯುತ್ತದೆ. ಅವಧೂತರ ಆಂತರ್ಯದ ನಿಲುವನ್ನು ಇಲ್ಲಿ ಸ್ಪಷ್ಟಪಡಿಸಿದ್ದಾರೆ. ನಿಘಂಟುಗಳಲ್ಲಿ ಅವಧೂತ ಎನ್ನುವ ಮಾತಿಗೆ ಸಂನ್ಯಾಸಿ ಎಂಬರ್ಥವನ್ನು ಕಾಣಬಹುದು. ಆದರೆ ಅವಧೂತನು ಸಂನ್ಯಾಸಿಯೇ ಆಗಿರಬೇಕೆಂಬ ನಿಯಮ ವೇನಿರದು. ಗೃಹಸ್ಥನೂ ಆಗಿರಬಹುದು. ಅವಧೂತ ಎನ್ನುವುದು ಮನಸ್ಸಿನ ಒಂದು ಸ್ಥಿತಿ; ಆಶ್ರಮ ಧರ್ಮವಲ್ಲ. ಮನಸ್ಸು ಶುದ್ಧವಾಗಿದ್ದರೆ ಅವನು ಅವಧೂತನೇ. ಮನಸ್ಸು ಶುದ್ಧವಾಗಿರುವುದೆಂದರೆ ಹೊರಗೆ ಪ್ರಪಂಚಭಾವವನ್ನು ಹಿಡಿಯದೆ, ವಿಷಯಾಸಕ್ತಿಯನ್ನು ಉಳಿಸಿಕೊಳ್ಳದೆ, ಸಂಕಲ್ಪ-ವಿಕಲ್ಪಗಳಲ್ಲಿ ತೊಡಗದೆ ಇರುವುದು. ಬಂಧನಕ್ಕೆ ಯಾವ ಕಾರಣವಾಗಲಿ ಅವಕಾಶವಾಗಲಿ ಇರದೆ, ಸ್ವತಂತ್ರವಾಗಿರುವುದು. ಸ್ವ-ತಂತ್ರ ಎಂದರೆ ತನ್ನನ್ನೇ ತಾನು ಅವಲಂಬಿಸಿಕೊಂಡಿರುವುದು. ಪ್ರಪಂಚವನ್ನು ಹಿಡಿದಿದ್ದರೆ ಪರತಂತ್ರ. ಸ್ವತಂತ್ರನಾಗಿರುವವನೇ ಸ್ವಸ್ಥ; ತನ್ನಲ್ಲಿ ತಾನಿರುವವನು.

ಅವಧೂತನು ಆತ್ಮವನ್ನು ಅರಿತುಕೊಂಡು ತಾನು ಅದೇ ಆಗಿ ಬಿಡುವವನು. ಅವನ ಪಾಲಿಗೆ ಉಳಿದದ್ದೆಲ್ಲ ತೋರಿಕೆಯೇ. ಪ್ರಪಂಚ ದಲ್ಲಿ ಅವನು ವ್ಯವಹರಿಸುವಾಗ ಅದು ತೋರಿಕೆಯೆಂಬುದನ್ನು ಅರಿತುಕೊಂಡೇ ವ್ಯವಹರಿಸುವುದು. ವ್ಯವಹಾರದಲ್ಲಿಯೂ ಅವನು ಪರಮಾರ್ಥವನ್ನೇನು ಕೈಬಿಡುವುದಿಲ್ಲ. ಪರಮಾರ್ಥದ ನೆಲೆಯಲ್ಲೇ

ಅವನ ವ್ಯವಹಾರ ನಡೆಯುವುದು. ಹೀಗಿರುವುದರಿಂದಲೇ ಸಾಮಾನ್ಯ ಜನರಿಗೆ ಹುಚ್ಚನಂತೆ, ಹುಡುಗನಂತೆ, ಪಿಶಾಚದಂತೆ ಅವನು ತೋರಿಕೊಳ್ಳುವುದು (ಬಾಲೋನ್ಮತ್ತ ಪಿಶಾಚವತ್). ಸಂಸಾರದ ಆಚೆ ಇರುವ ಅವನು ದಿಟವಾಗಿ 'ತತ್' (ಅದು ದೂರ ಇರುವುದು) ಪದಾರ್ಥ; ಸಂಸಾರದಲ್ಲೇ ಇರುವವನಂತೆ ವ್ಯವಹರಿಸಬೇಕು ('ತ್ವಂ' ನೀನು ಎಂಬಂತೆ; 'ಅಹಂ' ನಾನು ಎಂಬಂತೆ). ಆದರೆ ಸಂಸಾರದಲ್ಲಿ ಸಿಲುಕಿಕೊಳ್ಳುವುದಿಲ್ಲ.

'ಬಾಲೋನ್ಮತ್ತಪಿಶಾಚ'ವನ್ನು 'ವೇಷ'ವೆಂದು ಹೇಳಿರುವುದನ್ನು ಗಮನಿಸಬೇಕು. ದತ್ತಾತ್ರೇಯನು 'ಬಾಲೋನ್ಮತ್ತವೇಷಧರ'ನೇ. ಸಂಸಾರದೊಳಗೆ ಸೆಳೆದುಕೊಳ್ಳಲು ಬಾರದಂತೆ ಈ 'ವೇಷ' ಎಂದರೆ ನಟನೆ. ಹುಚ್ಚನಾದರೆ, ಹುಡುಗನಾದರೆ, ಪಿಶಾಚವಾದರೆ ಜನ ಹತ್ತಿರ ಸೇರುವುದಿಲ್ಲ, ಒಡನಾಡಲು ಅಂಜುತ್ತಾರೆ. ಅವಧೂತನ ಮನಸ್ಸು ಸಂಕಲ್ಪಗಳಿಗೆ ಈಡಾಗುವುದಿಲ್ಲ. ತನ್ನ ಪಾಡಿಗೆ ತಾನಿರುತ್ತಾನೆ. ಆತ್ಮದ ನೆಲೆಯಿಂದ ಪ್ರಪಂಚಭಾವಕ್ಕೆ ಜಾರಬೇಕಾದುದಿಲ್ಲ.

**ನಿರ್ಮಮಂ ನಿರಹಂಕಾರಂ ಸಮಲೋಷ್ಟಾಶ್ಮಕಾಂಚನಂ ।**
**ಸಮದುಃಖಸುಖಂ ಧೀರಂ ಹ್ಯವಧೂತಂ ನಮಾಮ್ಯಹಂ ॥**

ಅವನಿಗೆ ನನ್ನದೆಂಬುದಿಲ್ಲ; ನಾನೆಂಬುದಿಲ್ಲ. ಮಣ್ಣು ಹೆಂಟೆಯಾಗಲಿ, ಕಲ್ಲು ಹರಳಾಗಲಿ, ಚಿನ್ನದ ಗಟ್ಟಿಯಾಗಲಿ ಅವನಿಗೆ ಎಲ್ಲ ಒಂದೇ. ಸುಖ ಬಂದೊದಗಿದರೂ ಸರಿಯೆ, ದುಃಖ ಬಂದೆರಗಿದರೂ ಸರಿಯೇ. ಅವನೇನು ಹಿಗ್ಗುವುದಿಲ್ಲ, ಕುಗ್ಗುವುದಿಲ್ಲ. ಧೀರನವನು ಅವಧೂತ, ಯಾವುದಕ್ಕೂ ಅಂಜುವುದಿಲ್ಲ. ಅವನಿಗೆ ಪೊಡಮಡುವೆ.

**ನಾಹಂ ದೇಹೋ ನಮೇ ದೇಹೋ ಜೀವೋ ನಾಹಂ ಅಹಂ ಹಿ ಚಿತ್ ।**
**ಏವಂ ವಿಜ್ಞಾಯ ಸಂತುಷ್ಟಂ ಹ್ಯವಧೂತಂ ನಮಾಮ್ಯಹಂ ॥**

'ಶರೀರ ನಾನಲ್ಲ, ಶರೀರ ನನಗಿಲ್ಲ, ಜೀವ ನಾನೇನಲ್ಲ, ಬರಿಯ ಅರಿವು ನಾನು' ಹೀಗೆಂದು ತಿಳಿದು ಕಳವಳವಿಲ್ಲದೆ ನೆಮ್ಮದಿಯಿಂದಿರುವ ಅವಧೂತ. ಅವನಿಗೆ ಪೊಡಮಡುವೆ.

**ಜ್ಞಾನಾಗ್ನಿದಗ್ಧಕರ್ಮಾಣಂ ಕಾಮಸಂಕಲ್ಪವರ್ಜಿತಂ ।**
**ಹೇಯೋಪಾದೇಯಹೀನಂ ತಂ ಹ್ಯವಧೂತಂ ನಮಾಮ್ಯಹಂ ॥**

ತಿಳಿವಿನ ಬೆಂಕಿಯಲ್ಲಿ ಅವನ ಕರ್ಮಗಳೆಲ್ಲ ಸುಟ್ಟು ಬೂದಿಯಾದುವು. ಅವನಿಗೆ ಬಯಕೆಯೆಂಬುದಿರದು; ಸಂಕಲ್ಪವಿರದು. ಅವನಿಗೆ ಬೇಕೆಂಬುದಿಲ್ಲ, ಬೇಡವೆಂಬುದಿಲ್ಲ, ಪಡೆದುಕೊಳ್ಳಬೇಕಾದುದಿಲ್ಲ, ತೊಲಗಿಸಿಕೊಳ್ಳಬೇಕಾದುದಿಲ್ಲ. ಅಂಥ ಅವಧೂತನಿಗೆ ಪೊಡಮಡುವೆ.

ಪ್ರೊ. ಸಾ. ಕೃ. ರಾಮಚಂದ್ರ ರಾವ್ ಸ್ಮಾರಕ ನಿಧಿ (ರಿ.)
ದೂರವಾಣಿ : ೦೮೦-೨೬೫೬೪೯೫೭
www.profskr.com

**ಕೆಲವು ಪ್ರಕಟಣೆಗಳು:**

೧. **ಬೋಧಿಯ ಬೆಳಕಿನಲ್ಲಿ - ಬುದ್ಧನ ಬಾಳು, ಬೆಳಕು**
*(ಜೀವನ ಮೊದಲಾದ ಪತ್ರಿಕೆಗಳಲ್ಲಿ ಬಂದಿರುವ ಲೇಖನಗಳ ಸಂಗ್ರಹ)*
ಪುಟಗಳು : ೨೧೫ ; ರೂ. ೧೦೦/-

೨. **ಶ್ರೀ ಪುರಂದರ ದಾಸರು** *(ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಪ್ರಸ್ತಾವನೆ ಇರುವ ಈ ಪುಸ್ತಕ ೧೯೬೪ ರಲ್ಲಿ ಮೊದಲು ಪ್ರಕಟವಾಗಿತ್ತು.)*
ಪುಟಗಳು : ೧೦೯ ; ರೂ. ೭೦/-

೩. **ವೇದದಲ್ಲಿನ ಕಥೆಗಳು** *(ಮಲ್ಲಿಗೆ ಮಾಸಪತ್ರಿಕೆಯಲ್ಲಿ ಬಂದ ಲೇಖನಗಳ ಸಂಗ್ರಹ)*. ಪುಟಗಳು : ೯೮ ; ರೂ. ೬೦/-

೪. **ಪೂರ್ಣಪ್ರಜ್ಞ ಪ್ರಶಸ್ತಿ - ಶ್ರೀ ಮಧ್ವಾಚಾರ್ಯರ ಬಾಳು ಮತ್ತು ಬೆಳಕು**
*(ಒಂದು ಸಂಶೋಧನಾತ್ಮಕ ಗ್ರಂಥ)*. ಪುಟಗಳು : ೧೩೦ ; ರೂ. ೮೦/-

೫. **ಮೂರ್ತಿ ಶಿಲ್ಪ, ನೆಲೆ-ಹಿನ್ನೆಲೆ,** *(ಕಲಾಸಕ್ತರಿಗೆ, ಸಂಶೋಧಕರಿಗೆ ಮತ್ತು ವಿದ್ವಾಂಸರಿಗೆ ಅತ್ಯುಪಯುಕ್ತವಾದ ಈ ಪುಸ್ತಕಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿತ್ತು)*. ಪುಟಗಳು : ೩೬೦ ; ರೂ. ೫೦೦/-

೬. **ಧರ್ಮ, ವೇದ ಮತ್ತು ವೇದಾಂತ** *(ಒಂದು ಸಂಕಲನ ಗ್ರಂಥ)*.
ಪುಟಗಳು : ೧೨೪ ; ರೂ. ೧೩೦/-

೭. **ನಮ್ಮ ಸಂಗೀತ ಮತ್ತು ವಾಗ್ಗೇಯಕಾರರು** *(ಒಂದು ಸಂಕಲನ ಗ್ರಂಥ)*
ಪುಟಗಳು : ೪೦೦ (ಹಾರ್ಡ್ ಬೌಂಡ್) ; ರೂ. ೪೦೦/-

೮. **ಭರತ ಮುನಿಯ ನಾಟ್ಯಶಾಸ್ತ್ರ ಮತ್ತು ನಟರಾಜನ ಕಲ್ಪನೆ,**
ಪುಟಗಳು : ೧೬೦ ; ರೂ. ೧೫೦/-

ISBN 978-93-84069-17-9
9 789384 069179 >

ಮುಖಪುಟದ ರೇಖಾಚಿತ್ರ : ಸಾ.ಕೃ.ರಾ.

ಬೆಲೆ : ₹ 130/-